ಶಿವಮೊಗ್ಗ
ಸೋಮವಾರ, 23 ಮಾರ್ಚ್ 2026
ಸಂಪುಟ 16, ಸಂಚಿಕೆ 329, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹4
RNI:KAR KAN 2010/64051
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



5 ವರ್ಷದಲ್ಲಿ 86,398 ನೌಕರರ ನಿವೃತ್ತಿ | ೦೯
ಪ್ರಧಾನಿ ನಿವಾಸಕ್ಕೆ ಪುಟ್ಟ ಅತಿಥಿ! | ೦೨
ಏ.1ಕ್ಕೆ ರಾಷ್ಟ್ರಪತಿ ಸಿದ್ಧಗಂಗಾ ಮಠಕ್ಕೆ ಭೇಟಿ | ೦೯



ಮೋದಿ ಸುದೀರ್ಘ ಜನ ಸೇವಕ

ದಾಖಲೆಯ ನಾಯಕ



24 ವರ್ಷಗಳ ದೀರ್ಘಾವಧಿ ಸೇವೆ ಸಲ್ಲಿಸಿದ ನರೇಂದ್ರ ಮೋದಿ

8,930 ದಿನಗಳ ಚಾಮ್ಲಿಂಗ್ ದಾಖಲೆ ಮುರಿದ ನಮೋ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿಯವರು ಸರ್ಕಾರವೊಂದರ ಮುಖ್ಯಸ್ಥರಾಗಿ ಅತ್ಯಂತ ಸುದೀರ್ಘ ಅವಧಿಗೆ ಅಂದರೆ 8,931 ದಿನಗಳ ಮೈಲುಗಲ್ಲು ದಾಟಿ ಹೊಸ ದಾಖಲೆ ಬರೆದಿದ್ದಾರೆ. ಈ ಮೂಲಕ ಅವರು 24 ವರ್ಷಗಳ ಕಾಲ ಸಿಕ್ಕಿಮ್‌ನ ಮುಖ್ಯಮಂತ್ರಿಯಾಗಿದ್ದ ಪವನ್ ಕುಮಾರ್ ಚಾಮ್ಲಿಂಗ್ ಅವರ ದಾಖಲೆಯನ್ನು (8,930 ದಿನಗಳು) ಮುರಿದಿದ್ದಾರೆ.

2001-2014

ನರೇಂದ್ರ ಮೋದಿಯವರು 2001ರ ಅ.7ರಂದು ಗುಜರಾತ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು 2014ರ ಮೇ 21ರವರೆಗೆ ಅಧಿಕಾರದಲ್ಲಿದ್ದರು.



4 ಗುಜರಾತಿನ ಸಿಎಂ ಆಗಿಯೂ ಅವರು ಅತ್ಯಂತ ಸುದೀರ್ಘ ಅವಧಿಗೆ (2001, 2002, 2007 ಮತ್ತು 2012ರಲ್ಲಿ ಸತತ 4 ಬಾರಿ ಗೆಲುವು) ಅಧಿಕಾರದಲ್ಲಿದ್ದ ದಾಖಲೆ ಬರೆದಿದ್ದರು.

3 **2014**ರಲ್ಲಿ ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಅವರು, 2019 ಮತ್ತು 2024ರಲ್ಲಿ ಸತತ ಗೆಲುವು ಸಾಧಿಸಿ 3ನೇ ಬಾರಿ ಪ್ರಧಾನಿಯಾಗಿದ್ದಾರೆ.



ತಮ್ಮ ಸುದೀರ್ಘ ಸಾರ್ವಜನಿಕ ಸೇವೆಯಲ್ಲಿ ಮಹತ್ವದ ಮೈಲುಗಲ್ಲು ಸ್ಥಾಪಿಸಿದ ಸಾಧನೆಗಾಗಿ ಪ್ರಧಾನಿಯವರನ್ನು ಗೃಹಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ವಿವಿಧ ಕೇಂದ್ರ ಸಚಿವರು, ಮುಖ್ಯಮಂತ್ರಿಗಳು ಅಭಿನಂದಿಸಿದ್ದಾರೆ.



ಅಚಲ ಬದ್ಧತೆಯ ಪ್ರತೀಕ: ಶಾ

ಪ್ರಧಾನಿ ಮೋದಿಯವರ ಸರ್ಕಾರದ ಸೇವೆ ಎಂಬುದು ಕಠಿಣ ದುಡಿಮೆ ಮತ್ತು ಅಚಲ ಬದ್ಧತೆಯ ಪ್ರತೀಕ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಅಭಿನಂದಿಸಿದ್ದಾರೆ. ಸೇವೆ, ಕಠಿಣ ದುಡಿಮೆ ಮತ್ತು ಅಚಲ ನಿಷ್ಠೆಯ ಹಾದಿಯಲ್ಲಿ ಒಂದು ಮೈಲುಗಲ್ಲು. ಮೋದಿಯವರು 8,930 ದಿನಗಳ ದಾಖಲೆ ಮಾಡಿದ್ದ ಸಿಕ್ಕಿಮ್‌ನ ಮಾಜಿ ಸಿಎಂ ಪವನ್ ಕುಮಾರ್ ಚಾಮ್ಲಿಂಗ್ ಅವರ ದಾಖಲೆ ದಾಟಿದ್ದಾರೆ. ➡ಪುಟ ೮

ಮೋದಿಗೆ ಇನ್‌ಸ್ಟಾಗ್ರಾಮ್‌ನಲ್ಲಿ 10 ಕೋಟಿ ಫಾಲೋವರ್ಸ್: ದಾಖಲೆ • ಪುಟ ೮

ಕೇಂದ್ರ ಸಚಿವರು, ಬಿಜೆಪಿ ಅಧ್ಯಕ್ಷರ ಅಭಿನಂದನೆ • ಪುಟ ೨

ದಾವಣಗೆರೆಗೆ ಸಮರ್ಥ್, ಬಾಗಲಕೋಟೆಗೆ ಉಮೇಶ್ ಮೇಟಿ ಕಾಂಗ್ರೆಸ್‌ನಿಂದ ಕಣಕ್ಕೆ

ಉಪ ಚುನಾವಣೆಗೆ ಸಜ್ಜಾಯ್ತು ಅಖಾಡ

• **ಬೆಂಗಳೂರು:** ಸಾಕಷ್ಟು ಹಗ್ಗಜಗ್ಗಾಟ, ಲೆಕ್ಕಾಚಾರದ ಬಳಿಕ ಕಾಂಗ್ರೆಸ್ ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಅಭ್ಯರ್ಥಿಗಳ ಹೆಸರನ್ನು ಘೋಷಣೆ ಮಾಡಿದ್ದು, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ದಿ. ಶಾಮನೂರು ಶಿವಶಂಕರಪ್ಪನವರ ಮೊಮ್ಮಗ ಹಾಗೂ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್‌ರವರ ಪುತ್ರ ಸಮರ್ಥ್ ಮಲ್ಲಿಕಾರ್ಜುನ್ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ದಿ. ಎಚ್.ವೈ. ಮೇಟಿಯವರ ಕಿರಿಯ ಪುತ್ರ ಉಮೇಶ್ ಮೇಟಿ ಹೆಸರನ್ನು ಪ್ರಕಟಿಸಿದೆ.



ತೀರಾ ಲೆಕ್ಕಾಚಾರ, ಎಲ್ಲವನ್ನೂ ಅಳೆದು ತೂಗಿ ಕಾಂಗ್ರೆಸ್ ಟಿಕೆಟ್ ಘೋಷಣೆ ಮಾಡಿದೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಟಿಕೆಟ್ ಶಾಮನೂರು ಕುಟುಂಬದ ಪಾಲಾಗಿದ್ದರೆ, ಬಾಗಲಕೋಟೆ ವಿಧಾನ ಸಭಾ ಕ್ಷೇತ್ರದ ಟಿಕೆಟ್‌ನ್ನು ಎಚ್.ವೈ. ಮೇಟಿಯವರ ಕುಟುಂಬಕ್ಕೆ ನೀಡಲಾಗಿದೆ. ಈ 2 ಕ್ಷೇತ್ರಗಳಲ್ಲೂ ಉಪಚುನಾವಣೆಯಲ್ಲಿ ಅನುಕಂಪದ ಲಾಭ ಪಡೆಯುವ ಲೆಕ್ಕಾಚಾರ ಅಡಗಿದೆ. ಸಾಮಾನ್ಯವಾಗಿ ಉಪ ಚುನಾವಣೆಗಳಲ್ಲಿ ಆ ಕ್ಷೇತ್ರಗಳಲ್ಲಿ ನಿಧರಾಗಿರುವ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡುವ ಪದ್ಧತಿಯನ್ನು ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ರೂಢಿಸಿಕೊಂಡಿದ್ದು, ಈ ಉಪ ಚುನಾವಣೆಯಲ್ಲೂ ಅದನ್ನೇ ಮುಂದುವರಿಸಿದೆ. ➡ಪುಟ ೮



ಸಮರ್ಥ್ | ಉಮೇಶ್

ಇಂದು ನಾಮಪತ್ರ ಸಲ್ಲಿಕೆ, ಶಕ್ತಿ ಪ್ರದರ್ಶನ

ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಪಕ್ಷದ ಬಿ ಉಪ ಚುನಾವಣೆಗೆ ಸೋಮವಾರ (ಮಾ.23) ಬಿ ಫಾರಂ ಜತೆ ನಾಮಪತ್ರ ಸಲ್ಲಿಸಲಿದ್ದು, ದಾವಣಗೆರೆ, ಬಾಗಲಕೋಟೆ ಕ್ಷೇತ್ರಗಳಲ್ಲಿ ಎರಡೂ ಪಕ್ಷಗಳ ಶಕ್ತಿ ಪ್ರದರ್ಶನಕ್ಕೆ ಈ ನಾಮಪತ್ರ ಸಲ್ಲಿಕೆ ವೇದಿಕೆಯಾಗಲಿದೆ. ➡ಪುಟ ೮

ಶತ್ರುಗಳಿಗಿಲ್ಲ ಹಾರ್ಮುಜ್ ಪ್ರವೇಶ



• **ಟೆಹ್ರಾನ್:** ತನ್ನ ಶತ್ರುಗಳು ಮತ್ತು ಅವರೊಂದಿಗೆ ನಂಟಿರುವ ರಾಷ್ಟ್ರಗಳಿಗೆ ಸೇರಿದ ಹಡಗುಗಳನ್ನು ಹೊರತುಪಡಿಸಿ ಉಳಿದೆಲ್ಲಾ ತೈಲ ಹಡಗುಗಳಿಗೆ ಹಾರ್ಮುಜ್ ಜಲಸಂಧಿಯಲ್ಲಿ ಸಂಚರಿಸಲು ಮುಕ್ತ ಅವಕಾಶ ನೀಡುವುದಾಗಿ ಇರಾನ್ ಪ್ರತಿನಿಧಿ ಅಲಿ ಮೌಸಾವಿ ಭಾನುವಾರ ಘೋಷಿಸಿದ್ದಾರೆ. ಮುಂದಿನ 48 ಗಂಟೆಗಳೊಳಗೆ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯದಿದ್ದರೆ ಇರಾನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಬೆದರಿಕೆ ನೀಡಿದ ಬಳಿಕ ಇರಾನ್ ತನ್ನ ನಿಲುವು ಸಡಿಲಗೊಳಿಸಿದೆ. ಆದರೆ ಶತ್ರು ರಾಷ್ಟ್ರ, ಅವುಗಳಿಗೆ ನೆರವು ನೀಡಿದ ರಾಷ್ಟ್ರಗಳ ಹಡಗುಗಳಿಗೆ ಅವಕಾಶ ಇಲ್ಲ ಎಂದಿದ್ದಾರೆ. • ವಿವರ ಪುಟ ೨

ಕಿರುಸುದ್ದಿ


ಬಂಗಾಳಿ ಹಿಂದುಗಳ ಮೇಲೆ ಪಾಕ್ ದಾಳಿ 'ನರಮೇಧ' • ಪುಟ ೭

ಇಂಧನ, ರಸಗೊಬ್ಬರ ಪೂರೈಕೆ ಕುರಿತು ಪ್ರಧಾನಿ ಪರಿಶೀಲನೆ • ಪುಟ ೭

ವಿಮಾನಯಾನ ದರ ಮಿತಿ ತೆರವು ಮಾಡಿದ ಸರ್ಕಾರ • ಪುಟ ೭

ಹೊನ್ನಾಕಟ್ಟೆ ಚೆಕ್‌ಪೋಸ್ಟ್‌ನಲ್ಲಿ 32.50 ಲಕ್ಷ ನಗದು ಜಪ್ತಿ • ಪುಟ ೯

ಭಾವಪೂರ್ಣ ಶ್ರದ್ಧಾಂಜಲಿ



ಜನನ: 22-3-1938

ಮರಣ: 20-3-2026

ಕೆ. ಗೋವಿಂದ ಭಟ್, ಸೂರಿಕುಮೇರು

ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತರು

ಭಾರತೀಯ ಪಾರಂಪರಿಕ ರಂಗಭೂಮಿಯ ಸಾರ್ವಕಾಲಿಕ ಶ್ರೇಷ್ಠ ಕಲಾವಿದ ಯಕ್ಷಗಾನ "ದಶಾವತಾರಿ" ಕೆ. ಗೋವಿಂದ ಭಟ್ಟರು ಬಹುಬಗೆಯ ಪಾತ್ರಗಳ ಮೂಲಕ ಆಂಗಿಕ, ಆಹಾರ್ಯ, ಸಾತ್ವಿಕ, ವಾಚಿಕ ವಿಭಾಗಗಳನ್ನು ಆವಿಷ್ಕಾರಿಕ ಆಯಾಮಗಳಿಂದ ಸಾಂಪ್ರದಾಯಿಕ ಆವರಣದೊಳಗೆ ಸುಪುಷ್ಟಗೊಳಿಸಿದ ಅನುಪಮ ಯಕ್ಷನಟ, ನಮಗೆ ವೃತ್ತಿಗೆ ಗುರುಗಳು, ರಂಗದಲ್ಲಿ ಸಹಕಲಾವಿದರು, ನೇಪಥ್ಯದಲ್ಲಿ ಮಾರ್ಗದರ್ಶಕರು. ಏಳು ದಶಕಗಳ ದಾಖಲೆಯ ತಿರುಗಾಟ ಹಾಗೂ ನಮ್ಮ ಯಕ್ಷಗಾನ ಮಂಡಳಿಯಲ್ಲಿ ಸುದೀರ್ಘ 55 ವರ್ಷಗಳ ಕಾಲ ತಿರುಗಾಟ ಪೂರೈಸಿ ಶಿವಪಾದ ಸೇರಿದ ಅವರ ಆತ್ಮಕ್ಕೆ ಶಾಶ್ವತ ಸಾಯುಜ್ಯ ಪ್ರಾಪ್ತಿಯಾಗುವಂತೆ ಶ್ರೀ ದೇವರಲ್ಲಿ ಸಂಪ್ರಾರ್ಥಿಸುತ್ತೇವೆ.

ಮೇನೇಜರ್, ಅರ್ಚಕರು
ಸರ್ವ ಕಲಾವಿದರು ಹಾಗೂ ಸಿಬ್ಬಂದಿ ವರ್ಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿ, ಧರ್ಮಸ್ಥಳ

ಕಿರುಸುದ್ದಿ

ಕಡೂರಿನಲ್ಲಿ ನಾಲ್ಕು ದಿನ ರಾಮೋತ್ಸವ ಕಾರ್ಯಕ್ರಮಗಳು

• **ಕಡೂರು:** ತಾಲೂಕು ಬ್ರಾಹ್ಮಣ ಮಹಾಸಭಾ ವತಿಯಿಂದ ಮಾ.25ರಿಂದ 29ರವರೆಗೆ ನಾಲ್ಕು ದಿನಗಳ ಕಾಲ ಶ್ರೀ ಶೃಂಗೇರಿ ಶಂಕರ ಮಠದ ಗುರುಭವನದಲ್ಲಿ ಶ್ರೀರಾಮೋತ್ಸವದ ಕಾರ್ಯಕ್ರಮಗಳು ಜರುಗಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಗುರು, ರಾಮರ ಆಶೀರ್ವಾದ ಪಡೆಯಬಹುದು ಎಂದು ಕಡೂರು ತಾಲೂಕು ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀನಿವಾಸ್ ತಿಳಿಸಿದರು.

ಅವರು ಪತ್ರಿಕೆಗೆ ಮಾಹಿತಿ ನೀಡಿ ಮಾತನಾಡಿ, ಇದೇ ಮಾ.25 ರಿಂದ 29 ರವರೆಗೆ ಪ್ರತಿದಿನ ಬೆಳಗ್ಗೆ ಸೂರ್ಯ ನಮಸ್ಕಾರ, ನವಗ್ರಹ ಜಪ ಹಾಗೂ ರಾಮಾಯಣ ಪಾರಾಯಣ, ಮಹಾಮಂಗಳಾರತಿ ನಂತರ ವಸಂತ ಸೇವೆ ನಡೆಯಲಿದೆ. ಸಂಜೆ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ. ಮೂರು ದಿನಗಳ ಕಾಲ ವಿವಿಧ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ನಡೆಯಲಿದೆ. ಮಾ.28 ರ ಶನಿವಾರ ಸೀತಾರಾಮ ಕಲ್ಯಾಣ ನಂತರ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿದೆ. 29ರ ಭಾನುವಾರ ಶ್ರೀರಾಮ ಪಟ್ಟಾಭಿಷೇಕ ಹಾಗೂ ಶ್ರೀರಾಮ ತಾರಕ ಹೋಮ ಪೂರ್ಣಾಹುತಿಯ ನಂತರ ಅನ್ನ ಸಂತರ್ಪಣೆ ಸಂಜೆ ರಾಜ ಬೀದಿಯಲ್ಲಿ ಶ್ರೀ ಪಟ್ಟಾಭಿರಾಮನ ಉತ್ಸವ ಜರಗಲಿದೆ ಎಂದರು.

ಕ್ರೀಡಾಕೂಟಗಳು ಮನುಷ್ಯನ ಶಾರೀರಿಕ ಹಾಗೂ ದೈಹಿಕ ಸದೃಢತೆಗೆ ಸಹಕಾರಿ



• **ಚಿಕ್ಕಮಗಳೂರು:** ಕ್ರೀಡಾಕೂಟಗಳು ಮನುಷ್ಯನ ಶಾರೀರಿಕ ಹಾಗೂ ದೈಹಿಕ ಸದೃಢತೆಗೆ ಸಹಕಾರಿ. ದಿನದ ಕೆಲವು ಗಂಟೆಗಳನ್ನು ದೈಹಿಕ ವ್ಯಾಯಾಮಕ್ಕೆ ಮೀಸಲಿಡುವುದು ಅತ್ಯಗತ್ಯ ಎಂದು ನಗರಸಭೆ ಆಯುಕ್ತ ಬಿ.ಸಿ. ಬಸವರಾಜ್ ಹೇಳಿದರು.

ನಗರದ ಎಐಟಿ ಕಾಲೇಜು ಆವರಣದಲ್ಲಿ ಭಾನುವಾರ ಫ್ರೆಂಡ್ಸ್ ಕ್ರಿಕೆಟ್ ಕಪ್-2026 ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕರ್ತವ್ಯ ಹಾಗೂ ಸಾಂಸಾರಿಕ ಒತ್ತಡಗಳಿಂದ ಬಳಲುವ ಮನುಷ್ಯ ಕೆಲ ಸಮಯವನ್ನು ಕ್ರೀಡೆಗೆ ಮುಡಿಪಿಡಬೇಕು. ಕೇವಲ ಕೆಲಸಕ್ಕಾಗಿ ಬದುಕನ್ನು ಮೀಸಲಿಟ್ಟರೆ, ಆರೋಗ್ಯವು, ಅನಾರೋಗ್ಯವಾಗಿ ಪರಿಣಾಮಿಸಲಿದೆ. ಹೀಗಾಗಿ ಪ್ರತಿಯೊಬ್ಬ ಮನುಷ್ಯನಿಗೆ ವ್ಯಾಯಮ ಎನ್ನುವುದು ಅತಿಮುಖ್ಯ ಎಂದರು.

ಪೌರ ನೌಕರರ ಮಕ್ಕಳು ವಾರಕ್ಕೊಮ್ಮೆ ಈ ರೀತಿಯ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿರುವುದು ಒಳ್ಳೆಯ ಬೆಳವಣಿಗೆ. ಆದರೆ ಕೆಲವು ಯುವಜನತೆ ವಾರದ ರಜೆಯಲ್ಲಿ ಮದ್ಯಪಾನ, ಧೂಮಪಾನದಂಥ ಕೆಟ್ಟ ಚಟಗಳಿಗೆ ಬಲಿಯಾಗುತ್ತಿದ್ದು, ಇದು ಭವಿಷ್ಯದಲ್ಲಿ ಆರೋಗ್ಯದ ಮೇಲೆ ಅಡ್ಡಪರಿಣಾಮ ಬೀರಲಿದೆ ಎಂದು ತಿಳಿಸಿದರು.

ನಗರಸಭೆ ಸದಸ್ಯ ಶಾದಮ್ ಆಲಂಖಾನ್ ಮಾತನಾಡಿ ಭಾರತದಲ್ಲಿ ಕ್ರಿಕೆಟ್ ಅತ್ಯಂತ ಹೆಚ್ಚು ಮನ್ನಣೆ ಪಡೆದುಕೊಂಡಿರುವ ಕ್ರೀಡೆ. ದೇಶದ ಗಲ್ಲಿ ಗಲ್ಲಿಗಳಲ್ಲಿ ಕ್ರಿಕೆಟ್‌ನ್ನು ಆಟವಾಡುವ ಯುವ ಸಮೂಹವಿದೆ ಎಂದರು.

ಪೌರ ನೌಕರರ ಸಂಘದ ಅಧ್ಯಕ್ಷ ಅಣ್ಣಯ್ಯ ಮಾತನಾಡಿ ಇಂದಿನ ಪಂದ್ಯಾವಳಿಯಲ್ಲಿ ಗೇಮ್ ಚೇಂಜರ್, ಡಾಮಿನೇಟರ್, ರಾಯಲ್ ವಾರಿಯರ್ಸ್ ಮತ್ತು ಟೀಂ ಕಮಾಂಡೋ ಎಂಬ ನಾಲ್ಕು ತಂಡಗಳಿವೆ. ಒಟ್ಟು 9 ಪಂದ್ಯಾವಳಿಗಳು ನಡೆಯಲಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ನವೀನ್, ವಿವಿಧ ಕ್ರಿಕೆಟ್ ತಂಡಗಳ ನಾಯಕರು ಇದ್ದರು.

ಬೈಕ್ ಡಿಕ್ಕಿ: ವೃದ್ಧೆ ಸಾವು

• **ಚಿಕ್ಕಮಗಳೂರು:** ಬೈಕ್ ಡಿಕ್ಕಿ ಹೊಡೆದ ಪರಿಣಾಮ ವೃದ್ಧೆಯೊಬ್ಬರು ಮೃತಪಟ್ಟ ಘಟನೆ ಕಡೂರು ತಾಲ್ಲೂಕು ಪಂಚನಹಳ್ಳಿ ಗ್ರಾಮದಲ್ಲಿ ನಡೆದಿದೆ.ಲಕ್ಷ್ಮಮ್ಮ ಎಂಬುವವರು ಮೃತ ದುರ್ದೈಯಾಗಿದ್ದು, ಅವರು ಊರುಗೋಲನ್ನು ಹಿಡಿದು ನಡೆದು ಹೋಗುವಾಗ ಅಣೆಗೆರೆಯಿಂದ ಪಂಚನಹಳ್ಳಿ ಕಡೆಗೆ ತೆರಳುತ್ತಿದ್ದ ಏರೋಹೊಂಡ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ತಲೆ ಹಾಗೂ ಎಡಗಾಲಿಗೆ ತೀವ್ರ ಪೆಟ್ಟು ಬಿದ್ದು ವೃದ್ಧೆ ಸ್ಥಳದಲ್ಲೇ ಸಾವಪ್ಪಿದ್ದಾರೆ. ಘಟನೆಯಲ್ಲಿ ಬೈಕಿನ ಹಿಂಬದಿ ಕುಳಿತಿದ್ದ ಜೆ ಹಟ್ಟಿ ಗ್ರಾಮದ ಚಂದ್ರಪ್ಪ ರವರ ಎಡಗಾಲು, ಬಲಗೈ, ಮುಖಕ್ಕೆ ಪೆಟ್ಟು ಬಿದ್ದಿದೆ. ಬೈಕ್ ಚಾಲಕ ಉಮೇಶ ಎಂಬಾತನ ಅಜಾಗರೂಕತೆಯೇ ಘಟನೆಗೆ ಕಾರಣ ಎಂದು ದೂರು ನೀಡಲಾಗಿದ್ದು, ಪಂಚನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.



ಶ್ರವಣದೋಷ ತಪಾಸಣಾ ಶಿಬಿರ ಆಯೋಜನೆ

• **ಬಾಳೆಹೊನ್ನೂರು:** ರೋಟರಿ ಕ್ಲಬ್ ಬಾಳೆಹೊನ್ನೂರು ಹಾಗೂ ಟೀಮ್ ಈಶ್ವರ್ ಮಲ್ಟಿ ತಂಡದ ಸಹಯೋಗದೊಂದಿಗೆ ಈ ದಿನ ಬಾಳೆಹೊನ್ನೂರು ರೋಟರಿ ಕ್ಲಬ್‌ನಲ್ಲಿ ಕಿವಿ ಹಾಗೂ ಶ್ರವಣ ದೋಷ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದ್ದು, ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಎಂ.ವಿ. ತಿಮ್ಮಯ್ಯನವರು ಪ್ರಾಸ್ತಾವಿಕ ನುಡಿದರು. ಕಾರ್ಯದರ್ಶಿ ಫಾಜಲ್‌ರವರು ವಂದಿಸಿದರು. ಡಾಕ್ಟರ್ ಅಂಕಿತ ಕಲ್ಲೂರು ಹಾಗೂ ಆಡಳಿತ ಅಧಿಕಾರಿ ಲವ ಬಂಗೇರ್ ಹಾಗೂ ಝೋನಲ್ ಲೆಫ್ಟಿನೆಂಟ್ ಯೋಗೇಶ್ ಎಂ.ಸಿ., ರೋಟೇರಿಯನ್ ಸಾಗರ್ ಬಿ.ಎಸ್. ರೋಟೇರಿಯನ್ ಕೆ.ಟಿ. ವೆಂಕಟೇಶ್, ರೋಟೇರಿಯನ್ ಜಯರಾಮ್ ಬಿ.ಎಂ., ರವಿ ಎಮ್.ಆರ್., ಸುಧಾಕರ ಹಾಗೂ ಎಚ್. ಕೆ. ವೆಂಕಟೇಶ್ ಭಟ್, ಹೆಚ್. ಕೃಷ್ಣಮೂರ್ತಿ ಭಾಗವಹಿಸಿದ್ದರು.



ಅಜ್ಜಂಪುರ ತಾಲೂಕಿನ ಶಿವನಿ ಹೋಬಳಿಯ ಗೀಜಿಕಟ್ಟೆ ಗ್ರಾಮದಲ್ಲಿ ಗ್ರಾಮಸ್ಥರು ಆಯೋಜಿಸಿದ್ದ ಮೊದಲನೇ ವರ್ಷದ ಟ್ರ್ಯಾಕ್ಟರ್ ಎಸ್ ಕಟಿಂಗ್ ಸ್ಪರ್ಧೆಯನ್ನು ನೀತು ಸುರೇಶ್ ಟ್ರ್ಯಾಕ್ಟರ್ ಓಡಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಬಿಜೆಪಿ ತಾಲೂಕು ಅಧ್ಯಕ್ಷ ಪ್ರತಾಪ್ ಗರುಗದಹಳ್ಳಿ, ತಂಬ್ಳಿನೂರು ಆನಂದಪ್ಪ, ಪ್ರವೀಣ್ ಹಾಗೂ ಗ್ರಾಮಸ್ಥರು ಇದ್ದರು.

ಬೃಹತ್ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿದ ಸಿ.ಟಿ. ರವಿ

ರಕ್ತದಾನಕ್ಕೆ ಜಾತಿ ತಾರತಮ್ಯವಿಲ್ಲ

• **ಚಿಕ್ಕಮಗಳೂರು:** : ರಕ್ತದಾನಕ್ಕೆ ಜಾತಿ ತಾರತಮ್ಯವಿಲ್ಲ, ಜೀವ ಉಳಿಸುವ ಪ್ರತಿಯೊಬ್ಬ ವ್ಯಕ್ತಿಯು ಜೀವಸಂರಕ್ಷಕರೇ. ತುರ್ತು ಸಂದರ್ಭದಲ್ಲಿ ರಕ್ತದ ಅವಶ್ಯವಿದ್ದಾಗ ಬಡವ ಅಥವಾ ಶ್ರೀಮಂತನೆಂಬ ಬೇಧವಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದರು.

ನಗರದ ಗೃಹ ಮಂಡಳಿ ಬಡಾವಣೆ ಸಮೀಪದ ತ್ರಿಮೂರ್ತಿದೇಗುಲದಸಭಾಂಗಣದಲ್ಲಿಭಾನುವಾರವಿವೇಕ ಜಾಗೃತ ಬಳಗದಿಂದ ಆಯೋಜಿಸಿದ್ದ ಬೃಹತ್ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸೇವೆಯ ಮೂಲಕ ಪರೋಪಕಾರ ಧರ್ಮ ಪಾಲಿಸಬೇಕು. ಮಾನವ ಹಾಗೂ ಮೂಕ ಪ್ರಾಣಿಗಳಿಗೆ ಸ್ಪಂದಿಸುವ ಸೇವಾಗುಣ ಬೆಳೆಸಿಕೊಂಡಲ್ಲಿ ಮನುಷ್ಯನ ಜೀವನ ಸಾರ್ಥಕವಾದಂತೆ ಹಾಗೂ ಇತರರಿಗೂ ಪ್ರೇರಣೆಯಾಗಲಿದೆ. ಆ ನಿಟ್ಟಿನಲ್ಲಿ ರಕ್ತದಾನಿಗಳ ಪಟ್ಟಿಯನ್ನು ಪ್ರತಿವರ್ಷ ಹೆಚ್ಚಿಸಬೇಕು ಎಂದರು.

ರಕ್ತದಾನಿಗಳಿಗೆ ಜಾತಿ-ಧರ್ಮ, ಬಡವ-ಶ್ರೀಮಂತ ಹಾಗೂ ಮೇಳು-ಕೀಳು ಬೇಧವಿಲ್ಲ, ಕೇವಲ ರಕ್ತ ಕಣಕ್ಕೆ ಬೇರೆ ಬೇರೆ ಗ್ರೂಪ್‌ಗಳಿವೆ. ವಾಸ್ತವಿಕ ನೆಲೆಗಟ್ಟಿನಲ್ಲಿ ಮನುಷ್ಯ ಮತ್ತು ಪ್ರಾಣಿ ಎಲ್ಲರನ್ನೊಳಗೊಂಡು ಬದುಕಬೇಕು. ಜಗದ ಕವಿ ಕುವೆಂಪು ಆಶಯದಂತೆ ವಿಶ್ವಮಾನವ ಸಂದೇಶವನ್ನು ನಾವುಗಳು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಪಂಚ ಭೂತಗಳಾದ ಗಾಳಿ, ನೀರು, ಬೆಳಕು, ಅಗ್ನಿ ಹಾಗೂ ಆಕಾಶವನ್ನು ಪೂಜಿಸಬೇಕು. ನಾನು, ನನ್ನದು ಎನ್ನುವ ಅಹಂನಲ್ಲಿ ಬದುಕಬಾರದು. ನಾವುಗಳು ಎಂಬುವಂತೆ ಜೀವಿಸಬೇಕು.

ವಿವೇಕ ಜಾಗೃತ ಬಳಗದ ಅಧ್ಯಕ್ಷ ರಾಜೀವ್ ಮಾತನಾಡಿ, ಕಳೆದ ಮೂರು ವರ್ಷಗಳಿಂದ ಡಾಕ್ಟರ್ ಜೇ ಯವರ ಸ್ಮರಣಾರ್ಥ ಬೃಹತ್ ರಕ್ತದಾನ ಶಿಬಿರ ಹಮ್ಮಿಕೊಳ್ಳುತ್ತಿದ್ದೇವೆ. ರಕ್ತಕ್ಕೆಮತ್ತ್ಯಾವಪರ್ಯಾಯವುಇಲ್ಲ, ವೈದ್ಯಕೀಯ ಕ್ಷೇತ್ರ ಇಷ್ಟೆಲ್ಲಾ ಮುಂದುವರೆದಿದ್ದರೂ ರಕ್ತಕ್ಕೆ ಬದಲಿ ವ್ಯವಸ್ಥೆಯನ್ನು ಇಲ್ಲಿಯತನ ಕಂಡುಹಿಡಿಯಲಾಗಿಲ್ಲ ಎಂದು ತಿಳಿಸಿದರು.



> ರಕ್ತದಾನದಿಂದ ಹೃದಯ ಸಂಬಂಧ ತೊಂದರೆ ಕಡಿಮೆಯಾಗಲಿದೆ. ಹೊಸ ಕೆಂಪು ರಕ್ತ ಕಣಗಳು ಉತ್ಪತ್ತಿಯಾಗಿ ದೇಹವು ಹೊಸ ರಕ್ತವನ್ನು ಉತ್ಪಾದಿಸಲಿದೆ ಹಾಗೂ ದೇಹದ ಅಂಗಾಂಗಗಳಲ್ಲಿ ಅನಾವಶ್ಯಕ ಕೊಬ್ಬಿನಾಂಶ ಕ್ರೋಢೀಕರಣ ಆಗುವುದನ್ನು ತಪ್ಪಿಸುತ್ತದೆ.
> ■ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ

ಮಾನವರು ಮಾತ್ರ ಇನ್ನೋರ್ವ ಮಾನವನಿಗೆ ರಕ್ತದಾನವನ್ನು ಮಾಡಬಹುದು ಹಾಗೂ ಜೀವ ಉಳಿಸಬಹುದು. ಬಹುತೇಕ ಜನರು ಎಂದಾದರೂ ತಮಗೂ ಕೂಡ ರಕ್ತದ ಅವಶ್ಯಕತೆ ಬೀಳಬಹುದು ಎಂದು ಯೋಚಿಸುವುದಿಲ್ಲ, ಅವಶ್ಯವಿದ್ದಾಗ ಪರದಾಡುವ ಸ್ಥಿತಿ ನಿರ್ಮಾಣವಾಗುತ್ತದೆ. ವಾಸ್ತವವಾಗಿ ಓರ್ವ ಆರೋಗ್ಯವಂತ ವ್ಯಕ್ತಿ ರಕ್ತದಾನ ಮಾಡಿದರೆ ಮೂರು ಮಂದಿ ಜೀವ ಉಳಿಸಲು ಸಾಧ್ಯ ಎಂದರು.

ಸಾಂಸ್ಕೃತಿಕ ಚಿಂತಕ ಡಾ. ಜೆ.ಪಿ. ಕೃಷ್ಣೇಗೌಡ ಮಾತನಾಡಿ, ರಕ್ತದಾನ ಮಾಡುವುದರಿಂದ ಹೆಚ್ಚುವರಿ ಕೊಲೆಸ್ಟ್ರಾಲ್ ಕಡಿಮೆಗೊಳಿಸಲಿದೆ. ಕ್ಯಾನ್ಸರ್‌ನಂಥ ರೋಗಗಳನ್ನು ಕೂಡ ತಡೆಗಟ್ಟಬಹುದು. ಮಾನವನ ರಕ್ತದಲ್ಲಿರುವ ಬ್ಯಾಡ್ ಕೊಲೆಸ್ಟ್ರಾಲ್ ಅನ್ನು ಕೂಡಾ ಕಡಿಮೆ ಹಾಗೂ ಚರ್ಮದ ಆರೋಗ್ಯವನ್ನು ಉತ್ತಮಗೊಳಿಸಲಿದೆ ಎಂದು ತಿಳಿಸಿದರು.

ಇದೇ ವೇಳೆ ಶಿಬಿರದಲ್ಲಿ 120ಕ್ಕೂ ಹೆಚ್ಚು ಮಂದಿ ಸ್ವಯಂ ಪ್ರೇರಿತರಾಗಿ ಪಾಲ್ಗೊಂಡ ರಕ್ತದಾನ ಮಾಡಿದರು. ಕಾರ್ಯಕ್ರಮದಲ್ಲಿ ನಗರಸಭೆ ಸದಸ್ಯೆ ಕವಿತಾ ಶೇಖರ್, ವಿವೇಕ ಜಾಗೃತ ಬಳಗದ ಗೌರವಾಧ್ಯಕ್ಷ ಸುಬ್ಬಣ್ಣ, ಹೋಲಿಕ್ರಾಸ್ ಆಸ್ಪತ್ರೆ ಆಡಳಿತಾಧಿಕಾರಿ ಲೀಸಿಜಾನ್, ಡಾ. ಅನಿತ್ ಕುಮಾರ್, ಡಾ. ಗೌರಿ ಹಾಗೂ ವಿವೇಕ ಜಾಗೃತ ಬಳಗದ ತಂಡದವರು ಉಪಸ್ಥಿತರಿದ್ದರು.

ವಾಲಿಬಾಲ್ ಪಂದ್ಯಾವಳಿ: ಬಹುಮಾನ ವಿತರಣೆ

• **ಬಾಳೆಹೊನ್ನೂರು:** ಸಮಾಜದಲ್ಲಿ ಸಾಮರಸ್ಯ ಮೂಡಿಸಲು ಕ್ರೀಡಾಕೂಟ ಸಹಕಾರಿಯಾಗಲಿದೆ ಎಂದು ಮಹಾಲಕ್ಷ್ಮಿ ಕಾಫಿ ಟ್ರೇಡರ್ಸ್‌ನ ಸಿ.ಎಂ. ದ್ವಿಜಯ್ ತಿಳಿಸಿದರು.

ಬಾಳೆಹೊನ್ನೂರು ಕಲಾರಂಗ ಕ್ರೀಡಾಂಗಣದಲ್ಲಿ ಬಾಳೆಹೊನ್ನೂರು ವಾಲಿಬಾಲ್ ಲೀಗ್ ಬಿ.ವಿ.ಎಲ್. ಕಪ್ 2026 ಆಹ್ವಾನಿತ ಆಟಗಾರರ ಲೀಗ್ ಮಾದರಿಯ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಯಲ್ಲಿ ಜಯಗಳಿಸಿದವರಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಎಲ್ಲೆಡೆ ಕ್ರಿಕೆಟ್ ಪಂದ್ಯಾವಳಿಯ ಭರಾಟೆಯಲ್ಲಿ ದೇಶಿ ಕ್ರೀಡೆಗಳು ಮರೆಯಾಗುತ್ತಿರುವ ಈ ದಿನಗಳಲ್ಲಿ ಈ ಕ್ರೀಡಾಕೂಟವು ಸಹಕಾರಿಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಬಹಳಷ್ಟು ಕ್ರೀಡಾಪಟುಗಳಿದ್ದು, ಅವರ ಪ್ರತಿಭೆಯ ಅನಾವರಣಕ್ಕೆ ಕ್ರೀಡಾಕೂಟ ಸಹಕಾರಿಯಾಗಿದೆ ಎಂದು ತಿಳಿಸಿದರು.

ಜಿಲ್ಲಾ ಚುಸಾಪ ಅಧ್ಯಕ್ಷ ಯಜ್ಞಪುರುಷ ಭಟ್ ಮಾತನಾಡಿ, ಸತತಪರಿಶ್ರಮವಿಲ್ಲದೆಕ್ರೀಡಾಕೂಟದಲ್ಲಿ ಸಾಧನೆ ಮಾಡಲಾಗದು. ಸೋತವರು ಕುಗ್ಗದೆ, ಗೆದ್ದವರು ಹಿಗ್ಗದೆಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕೆಂದರು. ಪಟ್ಟಣದಲ್ಲಿ ಯಾವುದೇ ಕ್ರೀಡಾಕೂಟ ನಡೆದರು ಗ್ರಾಮಸ್ಥರು ಕ್ರೀಡಾಕೂಟಕ್ಕೆ ಆರ್ಥಿಕ ಸಹಾಯ ನೀಡಿ ಪ್ರೋತ್ಸಾಹಿಸುತ್ತಿದ್ದಾರೆ ಎಂದು ತಿಳಿಸಿದರು.

ಪಂದ್ಯಾವಳಿಯಲ್ಲಿ ಅಥರ್ವ ಶೃಂಗೇರಿ ಪ್ರಥಮ ಸ್ಥಾನ ಪಡೆದು 30,100 ನಗದು ಹಾಗೂ ಆಕರ್ಷಕ ಟ್ರೋಫಿ ಪಡೆದರೆ. ಸಿದ್ದೇಶ್ವರ ಸಿ.ಕೆ ತಂಡದವರು 20,100 ನಗದು ಟ್ರೋಫಿ ಪಡೆದರೆ ಬಂಡಿಗಡಿಯ ನಿಜಾಂ ಫ್ರೆಂಡ್ಸ್ ತೃತೀಯ ಸ್ಥಾನ ಪಡೆದು 10,100 ನಗದು ಪಡೆದುಹಾಗೂ 4 ನೇ ಸ್ಥಾನವನ್ನು ಮಹೇಶ್ ಶೆಟ್ಟಿ ಬ್ರದರ್ಸ್ ಪಡೆದರೆ ಉಳಿದಂತೆ ಕೊಪ್ಪದ 7 ಸ್ಟಾರ್, ಚಿಕ್ಕಮಗಳೂರು ವೈ.ಎಂ.ಎಸ್. ಅಟಾಕರ್ಸ್ , ಜೈಪುರದ ಎಸ್.ಹೆಚ್.ಜಿ, ವರ್ಣ ಫ್ರೆಂಡ್ಸ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದರು.

ಪ್ರಾರಂಭಕ್ಕೂ ಮುನ್ನ ಅರುಣ ಆಚಾರ್ಯ ಹಾಗೂ ಯೋಗೀಶ್ ಆಚಾರ್ಯ ದೀಪ ಬೆಳಗಿಸಿದರು. ಕಾರ್ಯಕ್ರಮದಲ್ಲಿ ಹಿರಿಯರಾದ ಹಿರಿಯಣ್ಣ, ಲಯನ್ಸ್ ಕ್ಲಬ್ ಅಧ್ಯಕ್ಷ ವಿಕ್ರಂ, ಆಕಾಶ್ ಗೌಡ, ಜೆ ಸಿ ಅಧ್ಯಕ್ಷ ಸನತ್, ಜಕ್ಕಣಕ್ಕಿಯ ಬಾಬು ಪೂಜಾರಿ, ಆದರ್ಶ್, ಸವಿನ್ , ಸುಭಾಷ್, ಆದಿತ್ಯ, ಜೀವನ್ ಸೇರಿದಂತೆ ನೂರಾರು ಕ್ರೀಡಾಭಿಮಾನಿಗಳು ಭಾಗವಹಿಸಿದ್ದರು. ಅರಳಿಕೊಪ್ಪ ಜಗದೀಶ್ ಸ್ವಾಗತಿಸಿ, ಚೈತನ್ಯ ವೆಂಕಿ ನಿರೂಪಿಸಿ, ವಂದಿಸಿದರು. ಪಂದ್ಯಾವಳಿಯನ್ನು ಶಾರಾಮ್ ಕ್ಯಾಮೆರ ಕ್ಲೌಡ್ ಇದ್ದರು.



ಎಚ್.ಎಸ್. ವೇಣುಗೋಪಾಲ್ ಪ್ರಶ್ನೆ

49 ಲಕ್ಷ ಕಾಮಗಾರಿ ಯಾವಾಗ ಆರಂಭಿಸುತ್ತೀರಿ

• **ಶೃಂಗೇರಿ:** ಪಟ್ಟಣ ಪಂಚಾಯಿತಿಗೆ ಕಳೆದ 2023ರಲ್ಲಿ ನಗರೋತ್ಥಾನ ಯೋಜನೆ ಅಡಿ ಮಂಜೂರಾದ 49 ಲಕ್ಷ ರೂ. ಕಾಮಗಾರಿ ಯಾವಾಗಆರಂಭಿಸುತ್ತೀರಿ ಎಂದು ಶಾಸಕರನ್ನು ಪಪಂ ಮಾಜಿ ಅಧ್ಯಕ್ಷ ವೇಣುಗೋಪಾಲ್ ಪ್ರಶ್ನಿಸಿ ದ್ದಾರೆ.



ಅವರು ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಈ ಹಿಂದೆ 49 ಲಕ್ಷ ರೂ. ನಗರೋತ್ಥಾನ ಯೋಜನೆ ಅಡಿ ಮಂಜೂರಾಗಿದ್ದು ಈ ಬಗ್ಗೆ ಟೆಂಡರ್ ಪ್ರಕ್ರಿಯೆ ಮುಗಿದು ಕಾಮಗಾರಿ ಆರಂಭಿಸುವಂತೆ ನಿರ್ದೇಶನ ನೀಡಲಾಗಿತ್ತು. ಆದರೆ ಸರ್ಕಾರ ಅದನ್ನು ತಡೆಹಿಡಿದು ಇದುವರೆಗೂ ಕಾಮಗಾರಿ ಪ್ರಾರಂಭಿಸದೆ ಅನ್ಯಾಯ ಮಾಡಿದ್ದಾರೆ . ಗಾಂಧಿ ಮೈದಾನದಲ್ಲಿ ಹೈಟೆಕ್ ಶೌಚಾಲಯಕ್ಕಾಗಿ 25 ಲಕ್ಷ ರೂ. ಅಡುಗೆ ಕೋಣೆಗಾಗಿ 15 ಲಕ್ಷ ರೂ. ಹಾಗೂ ಕುಡಿಯುವ ನೀರಿನ ವ್ಯವಸ್ಥೆಗಾಗಿ ಒಂಭತ್ತು ಲಕ್ಷ ರೂ. ಅನುದಾನ ಮಂಜುರಾಗಿತ್ತು. ಹಾಗೆಯೇ ಗ್ರಾಮೀಣ ಭಾಗದ ಕೆಲ್ಲಾರ್ ಕೋಗಿನಬೈಲ್ ರಸ್ತೆ ಅಭಿವೃದ್ಧಿಗಾಗಿ ಎಂಟು ಲಕ್ಷ ರೂ. ಹಾಗೂ ಮಳೂರು ರಸ್ತೆ ಅಭಿವೃದ್ಧಿಗಾಗಿ 25 ಲಕ್ಷ ರೂ. ಅನುದಾನ ಮಂಜೂರು ಮಾಡಲಾಗಿತ್ತು. ಇದುವರೆಗೂ ಈ ಕಾಮಗಾರಿಗಳಿಗೆ ಚಾಲನೆ ನೀಡಲೇ ಇಲ್ಲ .ಆ ಹಣ ಎಲ್ಲಿ ಹೋಯಿತೆಂದು ಶಾಸಕರು ಉತ್ತರ ನೀಡಬೇಕು.

ಈ ಮಧ್ಯೆ 2022-23 ನೇ ಸಾಲಿನ ಅತಿವೃಷ್ಟಿ ಯೋಜನೆಯಡಿ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ಶೃಂಗೇರಿಯಲ್ಲಿನ 21 ಕಾಮಗಾರಿಗಳು ಇನ್ನೂ ಆರಂಭಗೊಂಡಿಲ್ಲ, ಬಹುತೇಕ ರಸ್ತೆ ಸೇತುವೆ ಸೇರಿದಂತೆ ಕೆಲವು ಕಾಮಗಾರಿಗಳಿಗೆ ಭೂಮಿ ಪೂಜೆ ಕೂಡ ನೆರವೇರಿಸಲಾಗಿತ್ತು.ಆದರೆ ಕಾಮಗಾರಿ ಇನ್ನೂ ಆರಂಭಗೊಂಡಿಲ್ಲ, ತುರ್ತಾಗಿ ಕಾಮಗಾರಿ ಆರಂಭಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಜ್ಯುವೆಲ್ಲರಿ ಪಾರ್ಕ್ ಸ್ಥಾಪಿಸಿ: ಮನವಿ

ಕೆಲಸವಿಲ್ಲದೆ ಪೇಚಾಡುತ್ತಿರುವ ಗೋಲ್ಡ್‌ಸ್ಮಿತ್ ಕೆಲಸಗಾರರು

• **ಚಿಕ್ಕಮಗಳೂರು:** ಚಿನ್ನದ ಬೆಲೆ ಹೆಚ್ಚಳದಿಂದಾಗಿ ಶೇ.80ರಷ್ಟು ಗೋಲ್ಡ್‌ಸ್ಮಿತ್ ಕೆಲಸಗಾರರು ಕೆಲಸವಿಲ್ಲದೆ ಪೇಚಾಡುವಂತಾಗಿರುವ ಹಿನ್ನೆಲೆಯಲ್ಲಿ ಸರ್ಕಾರ ಜ್ಯುವೆಲ್ಲರಿ ಪಾರ್ಕ್ ಸ್ಥಾಪಿಸಿ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಬೇಕು ಎಂದು ದೈವಜ್ಞ ಬ್ರಾಹ್ಮಣ ಸಂಘದ ರಾಜ್ಯಾಧ್ಯಕ್ಷ ರವಿ ಶ್ರೀಕಾಂತ್ ಗಾಂವ್ಕರ್ ಒತ್ತಾಯಿಸಿದರು.

> ದೈವಜ್ಞ ಬ್ರಾಹ್ಮಣ ಸಮಾಜವು ಸಣ್ಣ ಸಮಾಜವಾಗಿರುವುದರಿಂದ ಹಾವನೂರು ವರದಿಯಲ್ಲಿ 2 ಎ ವರ್ಗಕ್ಕೆ ಸೇರ್ಪಡೆಗೊಂಡಿದೆ. ಅದನ್ನೇ ಮುಂದುವರಿಸಿಕೊಂಡು ಹೋಗಬೇಕು.
> ■ ರವಿ ಶ್ರೀಕಾಂತ್ ಗಾಂವ್ಕರ್, ದೈವಜ್ಞ ಬ್ರಾಹ್ಮಣ ಸಂಘದ ರಾಜ್ಯಾಧ್ಯಕ್ಷ

ಅವರು ಭಾನುವಾರ ಅಖಿಲ ಕರ್ನಾಟಕ ಬ್ರಾಹ್ಮಣ ದೈವಜ್ಞ ಸಂಘ, ಚಿಕ್ಕಮಗಳೂರು ದೈವಜ್ಞ ಬ್ರಾಹ್ಮಣ ಸಂಘ ಹಾಗೂ ಚಿಕ್ಕಮಗಳೂರು ದೈವಜ್ಞ ಬ್ರಾಹ್ಮಣಮಹಿಳಾಮಂಡಳಿ ವತಿಯಿಂದ ನಗರದ ಗಾಯತ್ರಿ ದೇವಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ದೈವಜ್ಞ ಬ್ರಾಹ್ಮಣ ಸಮಾಜ ಸಂಘಟಿತರಾಗಿ ಎಲ್ಲರಿಗೂ ಮಾದರಿಯಾಗಿ ನಡೆದುಕೊಳ್ಳಬೇಕಿದೆ. ಚಿನ್ನದ ಬೆಲೆ ಹೆಚ್ಚಾಗಿರುವುದರಿಂದ ಸರ್ಕಾರದಿಂದ ಜ್ಯುವೆಲ್ಲರಿ ಪಾರ್ಕ್ ಸ್ಥಾಪಿಸಿದರೆ ಕುಲಕಸುಬು ನಡೆಸುವವರಿಗೆ ಉದ್ಯೋಗಾವಕಾಶಗಳು ಲಭಿಸುತ್ತದೆ. ಉತ್ತರ ಕನ್ನಡ ಭಾಗ ಅಥವಾ ರಾಜ್ಯದ ಎಲ್ಲಿಯಾದರೂ ಜ್ಯುವೆಲ್ಲರಿ ಪಾರ್ಕ್ ಸ್ಥಾಪಿಸಿದರೂ ಅನುಕೂಲವಾಗುತ್ತದೆ ಎಂದು ಹೇಳಿದರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಎಲ್ಲಾ ಮಹಿಳೆಯರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಎಂದರು.

ಮುಂಬೈನ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷೆ ಶ್ರೀದೇವಿ ಚಂದ್ರಶೇಖರ ರಾವ್ ಮಾತನಾಡಿ, ದೈವಜ್ಞ ಸಮಾಜದ ಮಹಿಳೆಯರು ಸಹಾನುಭೂತಿಯಿಂದ ಸಬಲೆಯರಾಗಿ ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂದರು.

ನಮ್ಮಲ್ಲಿ ಚಿನ್ನದ ಕೆಲಸ ಮಾಡುವ ಯುವಕರಿಗೆ ಹೆಣ್ಣು ಕೊಡುತ್ತಿಲ್ಲ, ಇದು ಸರಿಯಲ್ಲ, ಎಷ್ಟೋ ಯುವಕರು ಇಂಜಿನಿಯರ್ ಆಗಿದ್ದರೂ ಅವರ ವಿವಾಹ ವಿಚ್ಛೇದನ ಆಗುತ್ತಿದೆ. ಚಿನ್ನದ ಕೆಲಸ ಮಾಡುವ ಯುವಕರನ್ನು ವಿವಾಹವಾದವರು ನೆಮ್ಮದಿ ಬದುಕು ಸಾಗಿಸುತ್ತಿದ್ದಾರೆ. ಇದನ್ನು ಸಮಾಜ ಗಮನಿಸಿ ಚಿನ್ನದ ಕೆಲಸ ಮಾಡುವ ಯುವಕರ ವಿವಾಹ ಸಂಬಂಧ ಹೋರಾಟವನ್ನೇ ನಡೆಸಬೇಕಿದೆ ಎಂದರು.

ಅಖಿಲ ಕರ್ನಾಟಕ ದೈವಜ್ಞ ಬ್ರಾಹ್ಮಣ ಸಂಘದ ಚಿಕ್ಕಮಗಳೂರು ವಲಯಾಧ್ಯಕ್ಷರಾದ ಪ್ರೇಮ ಶ್ರೀಧರ ಶೇಟ್ ಸ್ವಾಗತಿಸಿದರು. ಬೆಂಗಳೂರಿನ ರೈಲ್ವೇ ಇಲಾಖೆಯ ಸ್ಮಿತಾ ಎಂ.ರೇವಣ್ಣಕರ್, ಸಿದ್ದಾಪುರು ಆಂಜನೇಯ ದೇವಸ್ಥಾನದ ಧರ್ಮಶ್ರೀ ಸಾವಿತ್ರಮ್ಮ ಕಾನಾಸೂರ್, ದೈವಜ್ಞ ಬ್ರಾಹ್ಮಣ ಸಂಘದ ಜಿಲ್ಲಾಧ್ಯಕ್ಷ ಕೀರ್ತಿ ಶೇಟ್, ಮಹಿಳಾ ಸಂಘದ ಅಧ್ಯಕ್ಷೆ ಲತಾ ಸುಧೀರ್, ದೈವಜ್ಞ ಸಹಕಾರ ಸಂಘದ ಅಧ್ಯಕ್ಷೆ ಶಾಲಿನಿ ಅಶೋಕ್ ರಾಯ್ಕರ್, ಉಪಾಧ್ಯಕ್ಷ ಸುಧಾಕರ ಶೇಟ್, ಸತ್ಯನಾರಾಯಣ ರಾಯ್ಕರ್, ಮಂಗಳೂರು ವಲಯ ಅಧ್ಯಕ್ಷ ಗಜೇಂದ್ರ ಶೇಟ್, ಶಿವಮೊಗ್ಗ ಅಧ್ಯಕ್ಷ ಮಂಜುನಾಥ ಶೇಟ್, ಗದಗ ಅಧ್ಯಕ್ಷ ರಾಮ್‌ದೇವ್ ವಿಶ್ವನಾಥ್, ಹಾಗೂ ಅಖಿಲ ಕರ್ನಾಟಕ ದೈವಜ್ಞ ಬ್ರಾಹ್ಮಣ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಯುವತಿ ನಾಪತ್ತೆ

• **ಚಿಕ್ಕಮಗಳೂರು:** ಕಡೂರು ತಾಲ್ಲೂಕು ಯಗಟಿಯ ನಿವಾಸಿ 18 ವರ್ಷದ ಬಿಂದು ಎಂಬ ಯುವತಿ ನಾಪತ್ತೆಯಾಗಿರುವುದಾಗಿ ಆಕೆಯ ತಾಯಿ ಗೌರಮ್ಮ ಎಂಬುವವರು ಪೊಲೀಸರಲ್ಲಿ ದೂರು ನೀಡಿದ್ದಾರೆ.

ರೇಗಜ್ಜೆಯ ಯುವಕನೊಂದಿಗೆ ಬಿಂದುನ ವಾಹ ನಿಶ್ಚಯವಾಗಿತ್ತು. ಆದರೆ ಮಾರ್ಚ್ 20 ರಂದು ರಾತ್ರಿ 10.30 ರ ವೇಳೆಗೆ ಮನೆಯಿಂದ ನಾಪತ್ತೆಯಾದ ಆಕೆ ಮರಳಿ ಬಂದಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ.

ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಮಾಡಿಕೊಳ್ಳಿ

• **ಅಜ್ಜಂಪುರ:** ವರ್ಷಕ್ಕೊಮ್ಮೆ ಪ್ರತಿಯೊಬ್ಬರು 40 ವರ್ಷದ ನಂತರ ಸಂಪೂರ್ಣ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಶ್ರೀ ಮರಳುಸಿದ್ದ ಪಂಡಿತರಾಧ್ಯ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ಅವರು ಅಜ್ಜಂಪುರದ ಕೈಲಾಸಂ ಕಲಾ ಕ್ಷೇತ್ರದಲ್ಲಿ ಕಡೂರು ಚೇತನ್ ಮಲ್ಟಿ ಸ್ಪೆಷಲಿಟಿ ಆಸ್ಪತ್ರೆ ಮತ್ತು ಗೆಳೆಯರ ಬಳಗ ತಾಲೂಕು ಔಷಧಿಗಳ ವ್ಯಾಪಾರಿಗಳಿಗೆ ಸಂಘ ಹಾಗೂ ಕಲಾ ಸೇವಾ ಸಂಘ ಆಯೋಜಿಸಿದ್ದ ಉಚಿತ ಆರೋಗ್ಯ ಬೃಹತ್ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ಯುವಕರು ಜಂಕ್ ಫುಡ್ ಹೆಚ್ಚಾಗಿ ತಿನ್ನುತ್ತಾರೆ. ಪ್ರತಿದಿನ ಬೆಳಗ್ಗೆ ವ್ಯಾಯಾಮ ಮಾಡುವುದಿಲ್ಲ, ಆದ್ದರಿಂದ ಅನಾರೋಗ್ಯಕ್ಕೆ ತುತ್ತಾಗಿರುತ್ತಾರೆ.

ಚೇತನ್ ಆಸ್ಪತ್ರೆ ಮುಖ್ಯಸ್ಥ ಚಂದ್ರಶೇಖರ್ ಅವರು ಮಾತನಾಡಿ, ಈ ಸೇವೆಯನ್ನು ಸಮಾಜ ಅತ್ಯುನ್ನತವಾಗಿ ಗೌರವಿಸುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಗೆಳೆಯರ ಬಳಗ ರಂಗತಾಂಡದ ಅಧ್ಯಕ್ಷ ಚಂದ್ರಪ್ಪನವರು ಇಂತಹ ಆರೋಗ್ಯ ಶಿಬಿರಗಳು ಜನಸಾಮಾನ್ಯರಿಗೆ ಬಡವರಿಗೆ ಅನುಕೂಲವಾಗಿರುತ್ತದೆ ಎಂದರು.

ಈ ಶಿಬಿರದಲ್ಲಿ ಈ ಶಿಬಿರದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲಾ ವಿಧವಾದ ಪರೀಕ್ಷೆಗಳನ್ನು ಮಾಡಲಾಯಿತು.

ಡಾಕ್ಟರ್ ಚಂದ್ರಶೇಖರ್, ವೈದ್ಯರುಗಳಾದ ಡಾ. ಮಯೂರ್ ಡಾ. ಮನೋಜ್. ಮಕ್ಕಳ ತಜ್ಞರು ಲಕ್ಷ್ಮಿ ಮಯೂರ್, ಡಾ. ಶಿರಿಷಾ ಕೀರ್ತಿ, ಡಾಕ್ಟರ್ ಮಂಜುನಾಥ್ ಎ., ಪಿಆರ್‌ಓ ಸೀತಾರಾಮ್, ಆಡಳಿತ ಅಧಿಕಾರಿ ಲತಾ ಹಾಗೂ ಚೇತನ್ ಆಸ್ಪತ್ರೆ ಸಿಬ್ಬಂದಿಗಳಾದ ಆಶಾ ತೇಜಸ್ವಿನಿ, ಗೀತಾ, ರಕ್ಷಿತಾ ಗೋಪಾಲ್ ಇದ್ದರು.



ಮಹಿಳೆಯರಿಂದ ಸಮಾಜಕ್ಕೆ ಅನನ್ಯ ಕೊಡುಗೆ: ಶೀಲಾ

• **ಚಿಕ್ಕಮಗಳೂರು:** ಎಲ್ಲಾ ಕ್ಷೇತ್ರಗಳಲ್ಲಿ ಸಮರ್ಥವಾಗಿ ತನ್ನ ಛಾಪನ್ನು ಮೂಡಿಸುತ್ತಿರುವ ಮಹಿಳೆಯರು ಆತ್ಮವಿಶ್ವಾಸ ಹಾಗೂ ದೃಢತೆಯಿಂದ ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವಾಭಾವದಿಂದ ದುಡಿಯುತ್ತಿದ್ದು ಸಮಾಜಕ್ಕೆ ಅನನ್ಯ ಕೊಡುಗೆ ನೀಡುತ್ತಿದ್ದಾರೆ ಎಂದು ನಗರಸಭೆ ಅಧ್ಯಕ್ಷೆ ಶೀಲಾ ದಿನೇಶ್ ತಿಳಿಸಿದರು.

ನಗರದ ಜಯನಗರ ಬಡಾವಣೆಯ ಕೆಂಪೇಗೌಡ ಉದ್ಯಾನವನದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚಾರಣೆ ಅಂಗವಾಗಿ ಸ್ನೇಹ ಮಿಲನ ಮಹಿಳಾ ಸಂಘದ 7ನೇ ವರ್ಷದ ವಾರ್ಷಿಕೋತ್ಸವ ಪ್ರಯುಕ್ತ ಮಹಿಳೆಯರ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು.

ಆಟದಲ್ಲಿಸೋಲು-ಗೆಲುವು ಮುಖ್ಯವಲ್ಲ, ಕ್ರೀಡೆಯಲ್ಲಿ ಭಾಗವಹಿಸುವುದು ಮುಖ್ಯ. ಗೆದ್ದವರು ಹಿಗ್ಗದೆ, ಸೋತವರು ಕುಗ್ಗದೆ ಎಲ್ಲರೂ ಒಟ್ಟಾಗಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

> ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಿದಾಗ ಮಾತ್ರ ದೇಶದ ಉನ್ನತೀಕರಣ ಸಾಧ್ಯ. ತಮ್ಮ ಜೀವನದ ನಿರ್ಧಾರಗಳನ್ನು ಸ್ವತಂತ್ರವಾಗಿ ತೆಗೆದುಕೊಳ್ಳುವ ಸಾಮಾಜಿಕ, ಆರ್ಥಿಕ ರಂಗಗಳಲ್ಲಿ ಪುರುಷರಿಗೆ ಸಮಾನವಾದ ಹಕ್ಕು, ಅವಕಾಶ ಮತ್ತು ಸ್ಥಾನಮಾನವನ್ನು ಹೊಂದುವ ಪಕ್ರಿಯೆ ನಿರಂತರವಾಗಿರಬೇಕು.
> ■ ಶೀಲಾ ದಿನೇಶ್, ನಗರಸಭೆ ಅಧ್ಯಕ್ಷೆ

ಸ್ನೇಹ ಮಿಲನ ಮಹಿಳಾ ಸಂಘದ ಅಧ್ಯಕ್ಷೆ ಮೋಹನ್ ಕುಮಾರಿ ಮಾತನಾಡಿ, ಮಹಿಳೆಯರು ಮನೆ ಮತ್ತು ಕುಟುಂಬಕ್ಕೆ ಮಾತ್ರ ಸೀಮಿತಗೊಳ್ಳದೆ ಮನೆಯ ಜವಾಬ್ದಾರಿಯ ಜೊತೆ-ಜೊತೆಯಲ್ಲಿಯೇ ನೃತ್ಯ, ಸಂಗೀತ, ರಾಜಕೀಯ, ಕ್ರೀಡೆ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲಿ ಉನ್ನತಸ್ಥಾನ ಪಡೆದಿದ್ದಾರೆ ಎಂದರು.



ಅಂತರಾಷ್ಟ್ರೀಯ ಮಹಿಳಾ ದಿನಾಚಾರಣೆ ಪ್ರಯುಕ್ತ ಮಾ.28ರಂದು ಜಯನಗರದ ಬಲಮುರಿ ಗಣಪತಿ ದೇವಾಲಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚಾರಣೆ ಆಯೋಜನೆ ಮಾಡಲಾಗಿದ್ದು, ಎಲ್ಲರು ಭಾಗವಹಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಸ್ನೇಹ ಮಿಲನ ಮಹಿಳಾ ಸಂಘದ ಉಪಾಧ್ಯಕ್ಷೆ ವಿನೋದ ದೊಡ್ಡೇಗೌಡ್ರು, ಸಹ ಕಾರ್ಯದರ್ಶಿ ಸುಧಾ ಜುಂಜೇಗೌಡ, ಖಜಾಂಚಿ ಸವಿತಾ ಈಶ್ವರ್, ಸಂಘಟನಾ ಕಾರ್ಯದರ್ಶಿ ಕಾಂತಾಮಣಿ ಗಂಗಾಧರ್ ಮತ್ತು ಸದಸ್ಯರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಲಕ್ಷ್ಮೀನಾರಾಯಣ ಕ್ಲಿನಿಕ್ ವತಿಯಿಂದ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.

ಕಿರುಸುದ್ದಿ

ಯುದ್ಧವನ್ನು ನಿಲ್ಲಿಸುವಂತೆ ಆಗ್ರಹಿಸಿ ಪ್ರತಿಭಟನೆ ಇಂದು

• **ಶಿವಮೊಗ್ಗ :** ಜಗತ್ತನ್ನೇ ಸಂಕಷ್ಟಕ್ಕೆ ದೂಡಿದ ಅಮೆರಿಕ, ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧವನ್ನು ನಿಲ್ಲಿಸುವಂತೆ ಆಗ್ರಹಿಸಿ ನಗರದ ಎನ್. ಇ.ಎಸ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಮಹಾ ವಿದ್ಯಾಲಯದ ರೆಡ್ ಕ್ರಾಸ್ ಘಟಕ ಹಾಗೂ ಕನ್ನಡ ಸಾಹಿತ್ಯ ವೇದಿಕೆಯ ವಿದ್ಯಾರ್ಥಿಗಳು ಮಾ.23 ರಂದು ಬೆಳಿಗ್ಗೆ 11 ಗಂಟೆಗೆ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ. ಮಹಾವೀರ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ಬಳಿಕ ಜಿಲ್ಲಾಧಿಕಾರಿ ಮೂಲಕ ವಿಶ್ವಸಂಸ್ಥೆಯ ಮಹಾ ಪ್ರಧಾನಕಾರ್ಯದರ್ಶಿಗೆ ಮನವಿ ಪತ್ರ ಸಲ್ಲಿಸಿ ವಿಶ್ವಸಂಸ್ಥೆ ತಕ್ಷಣ ಮಧ್ಯಪ್ರವೇಶಿಸಿ ಶಾಂತಿಗೆ ಕ್ರಮ ವಹಿಸುವಂತೆ ಕೋರಲಾಗುತ್ತದೆ.

ಉದ್ಯಮಿ ಡಿ.ಮಹೇಶ್‌ಗೆ ನಾರಾಯಣ ರತ್ನ ಪ್ರಶಸ್ತಿ



• **ಸಾಗರ :** ಉದ್ಯಮಿ ಹಾಗೂ ಸಾಮಾಜಿಕ ಕಾರ್ಯಕರ್ತ, ದಾನಿ ಆರ್.ಬಿ.ಡಿ. ಗ್ರೂಪ್‌ನ ಮಹೇಶ್ ಡಿ. ಅವರಿಗೆ ನಾರಾಯಣ ರತ್ನ ಪ್ರಶಸ್ತಿ ನೀಡಲಾಗಿದೆ. ಉದ್ಯಮದಲ್ಲಿ ಹೊಸಹೊಸ ಆವಿಷ್ಕಾರ ಕೈಗೊಂಡಿದ್ದು, ದುಡಿಯುವ ಕೈಗಳಿಗೆ ಕೆಲಸ, ಉದ್ಯೋಗ ಸೃಷ್ಟಿ, ಸಾಮಾಜಿಕ ಸೇವೆ, ವಿವಿಧ ಕಾರ್ಯಕ್ರಮಗಳ ಯಶಸ್ಸಿಗೆ ದೇಣಿಗೆ ಸೇರಿ ಮಹೇಶ್ ಡಿ. ಅವರು ನಿರಂತರವಾಗಿ ಸಕ್ರಿಯ ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿದ್ದನ್ನು ಗುರುತಿಸಿ ನಿಟ್ಟೂರು ಬ್ರಹ್ಮಶ್ರೀ ನಾರಾಯಣಗುರು ಮಹಾಸಂಸ್ಥಾನ ಪೀಠವು ಗರ್ತಿಕೆರೆಯಲ್ಲಿ ನಡೆದ ರಾಜ್ಯಮಟ್ಟದ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪ್ರತಿಷ್ಠಿತ ನಾರಾಯಣ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.ಮಹೇಶ್ ಡಿ. ಅವರು ಆರ್.ಬಿ.ಡಿ. ಗ್ರೂಪ್ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದು ಸಾಗರ, ಹೊಸನಗರ ಸೇರಿದಂತೆ ಅಕ್ಕಪಕ್ಕದ ತಾಲ್ಲೂಕುಗಳಲ್ಲಿ ತಮ್ಮ ಉದ್ಯಮ ವಿಸ್ತರಿಸುವಲ್ಲಿ ಪ್ರಮುಖಪಾತ್ರ ವಹಿಸಿದ್ದಾರೆ. ನೂರಾರು ಯುವಜನರಿಗೆ ತಮ್ಮ ಬೇರೆಬೇರೆ ಸಂಸ್ಥೆಗಳಲ್ಲಿ ಉದ್ಯೋಗ ನೀಡುವ ಜೊತೆಗೆ ಸಹಕಾರಿ ಸಂಸ್ಥೆಯನ್ನು ಪ್ರಾರಂಭಿಸುವ ಮೂಲಕ ಆರ್ಥಿಕ ಕ್ಷೇತ್ರಕ್ಕೂ ಆರ್.ಬಿ.ಡಿ. ಪಾದಾರ್ಪಣೆ ಮಾಡುವಲ್ಲಿ ಶ್ರಮಿಸಿದ್ದಾರೆ. ಮುಖ್ಯವಾಗಿ ಅನೇಕ ಕಾರ್ಯಕ್ರಮಗಳಿಗೆ ಆರ್ಥಿಕ ನೆರವು ನೀಡುವ ಮೂಲಕ ಕಾರ್ಯಕ್ರಮದ ಯಶಸ್ಸಿಗೆ ಪರೋಕ್ಷ ಸಹಕಾರ ನೀಡುತ್ತಿದ್ದಾರೆ. ಮಹೇಶ್ ಡಿ. ಅವರ ಬಹುಮುಖ ಸಾಧನೆ ಗುರುತಿಸಿ ಅವರಿಗೆ ಪ್ರಶಸ್ತಿ ನೀಡಿದೆ ಎಂದು ತಿಳಿಸಲಾಗಿದೆ.

ಯಕ್ಷಗಾನ ಕಲಾವಿದ ಬಿ.ಜಿ ಶ್ರೀನಿವಾಸಗೆ ಸಾಹಿತ್ಯ ಸಾಧಕ ಪ್ರಶಸ್ತಿ ಪ್ರದಾನ



• **ರಿಪ್ಪನ್ ಪೇಟೆ:** ಕನ್ನಡ ಸಾಹಿತ್ಯ ಪರಿಷತ್ತಿನ ನಾಡು ನುಡಿ ಸೇವೆಗಾಗಿ ಅಭಿನಂದಿಸಿ ಸಾಹಿತ್ಯ ಸಾಧಕ ಪ್ರಶಸ್ತಿಯನ್ನು ಬಿಲ್ಲೇಶ್ವರದ ಯುವ ಯಕ್ಷಗಾನ ಕಲಾವಿದ ಶ್ರೀನಿವಾಸ ಬಿ.ಜಿ ಇವರಿಗೆ ಶಿವಮೊಗ್ಗ 20ನೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯ ಸಮ್ಮೇಳನದಲ್ಲಿ ಪ್ರದಾನ ಮಾಡಲಾಯಿತು. ಇವರಿಗೆ ಹುಂಚ ಪಂಚಾಯಿತಿಯ ಎಲ್ಲಾ ಗ್ರಾಮಸ್ಥರು ಅಭಿನಂದಿಸಿದ್ದಾರೆ.

ನಾಳೆ ವಿಶ್ವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

• **ಭದ್ರಾವತಿ:** ಪ್ರತಿ ವರ್ಷದಂತೆ ಈ ಬಾರಿ ಸಹ ನಗರಸಭೆ ವತಿಯಿಂದ ಮಾ.24ರ ಮಂಗಳವಾರ ಬೆಳಿಗ್ಗೆ 11.30ಕ್ಕೆ ನಗರದ ಶ್ರೀ ಮಂಜುನಾಥಸ್ವಾಮಿ ಕಲ್ಯಾಣ ಮಂಟಪದಲ್ಲಿ ಮಹಿಳಾ ದಿನಾಚರಣೆ ಆಯೋಜಿಸಲಾಗಿದೆ. ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಾಸಕ ಬಿ.ಕೆ ಸಂಗಮೇಶ್ವರ್ ಮಹಿಳಾ ದಿನಾಚರಣೆ ಉದ್ಘಾಟಿಸಲಿದ್ದು, ನಗರಸಭೆ ಅಧ್ಯಕ್ಷೆ ಜೆ.ಸಿ ಗೀತಾರಾಜಕುಮಾರ್ ಅಧ್ಯಕ್ಷತೆವಹಿಸಲಿದ್ದಾರೆ. ನಗರಸಭೆ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿಗಳು, ಪೌರಕಾರ್ಮಿಕರು ನಾಗರೀಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಪೌರಾಯುಕ್ತ ಕೆ.ಎನ್ ಹೇಮಂತ್ ಕೋರಿದ್ದಾರೆ.

ಆಕ್ಷೇಪಣೆ ಆಹ್ವಾನ

• **ಶಿವಮೊಗ್ಗ :** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಅಡಿಯಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಅಧೀನದಲ್ಲಿ ಬರುವ ಎನ್.ಪಿ.ಎನ್.ಸಿ.ಡಿ ಕಾರ್ಯಕ್ರಮದಲ್ಲಿ ಖಾಲಿ ಇರುವ ಪ್ರಯೋಗಶಾಲಾ ತಂತ್ರಜ್ಞರ ಮತ್ತು ಎನ್.ಪಿ.ಹೆಚ್.ಸಿ.ಇ ಕಾರ್ಯಕ್ರಮದಡಿಯಲ್ಲಿ ತಜ್ಞ ವೈದ್ಯರ ಹುದ್ದೆಗಳಿಗೆ ನೇರ ಸಂದರ್ಶನದಲ್ಲಿ ತಾತ್ಕಾಲಿಕ ಆಯ್ಕೆಯಾದವರ ಪಟ್ಟಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಆಕ್ಷೇಪಣೆಗಳಿದ್ದಲ್ಲಿ ಮಾ. 26 ರೊಳಗಾಗಿ ಲಿಖಿತವಾಗಿ ಸಲ್ಲಿಸುವಂತೆ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ತ್ಯಾಗರ್ತಿ: ಶ್ರೀಮದ್ ಪರಮಹಂಸ ಸಚ್ಚಿದಾನಂದಾತ್ಮ ಸತ್ಯಪೀಠ ತ್ಯಾಗರ್ತಿಯಲ್ಲಿ ನಡೆಯುತ್ತಿರುವ ಶತಚಂಡಿಕಾ ಯಾಗದ ಮುಕ್ತಾಯ ದಿನದಂದು ಮಾಜಿ ಶಾಸಕ ಹರತಾಳು ಹಾಲಪ್ಪ ಭೇಟಿ ನೀಡಿ ಶ್ರೀ ಶ್ರೀಧರ ಭಾರತೀ ತೀರ್ಥ ಸ್ವಾಮೀಜಿಗಳಿಂದ ಆಶೀರ್ವಾದ ಪಡೆದರು.

ಲಾಟರಿ ವಂಚನೆಯ ಆರೋಪ

• **ರಿಪ್ಪನ್ ಪೇಟೆ:** ಕನ್ನಡ ರಾಜ್ಯೋತ್ಸವ ಆಚರಣೆ ಸಂದರ್ಭ, ಲಾಟರಿ ಯೋಜನೆ ಮಾಡಿ ಬಹುಮಾನ ನೀಡದೆ ಜನರನ್ನು ವಂಚಿಸಲಾಗಿದೆ ಎಂದು ಆರೋಪಿಸಿರುವ ಸಾರ್ವಜನಿಕರು, ಗುರುವಾರ ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಕಲಾಕೌಸ್ತುಭ ಸಂಘ ಎಂಬ ಹೆಸರಿನಲ್ಲಿ ಮುದ್ರಿತವಾದ ಲಕ್ಕಿ ಡ್ರಾ ಟಿಕೆಟ್‌ನ ದರ 100 ರೂ. ಗಳಾಗಿತ್ತು. ಎಲೆಕ್ಟ್ರಿಕ್ ಬೈಕ್ ಹಾಗೂ ಸ್ಕೂಟರ್ ಬಹುಮಾನವಾಗಿದೆಂದು ತಿಳಿಸಿ, 2025ರ ನವೆಂಬರ್ 3ರಂದು ಡ್ರಾ ಮೂಲಕ ವಿಜೇತರನ್ನು ಆಯ್ಕೆ ಮಾಡಲಾಗುವುದೆಂದು ಘೋಷಿಸಲಾಗಿತ್ತು. ಸಂಘವು ತನ್ನ ಪದಾಧಿಕಾರಿಗಳ ಮೂಲಕ ಸಾರ್ವಜನಿಕವಾಗಿ ಸಾವಿರಾರು ಜನರಿಗೆ ಟಿಕೆಟ್ ಮಾರಾಟ ಮಾಡಿ, ಲಕ್ಷಾಂತರ ರೂ.ಗಳನ್ನು ಅಕ್ರಮವಾಗಿ ಇದುವರೆಗೂ ಸಂಗ್ರಹಿಸಿದೆ. ಆದರೆ ಈವರೆಗೂ ವಿಜೇತರನ್ನು ಆಯ್ಕೆ ಮಾಡಿ ಬಹುಮಾನ ವಿತರಿಸುವ ಯಾವುದೇ ಪ್ರಕ್ರಿಯೆ ಮಾಡಿಲ್ಲ, ಇವರ ಮಾತನ್ನು ನಂಬಿದ ಜನರು ಲಾಟರಿ ಟಿಕೆಟ್ ಖರೀದಿಸಿ ನಷ್ಟ ಅನುಭವಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಲಾಟರಿ ನಡೆಸಲು ನಿಷೇಧವಿದ್ದರೂ ಕಾನೂನು ಬಾಹಿರವಾಗಿ ಚಟುವಟಿಕೆ ನಡೆಸಿ, ಸಾರ್ವಜನಿಕರನ್ನು ವಂಚಿಸಿದವರ ವಿರುದ್ಧ ಪ್ರಕರಣ ದಾಖಲಿಸಿ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ , ಈ ಸಂಬಂಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೆರೆಹಳ್ಳಿ ಅಂಜನ್ ನೇತೃತ್ವದಲ್ಲಿ ಅನೇಕ ಸಂತ್ರಸ್ತರು ದೂರು ಸಲ್ಲಿಸಿದ್ದಾರೆ.




ಸಾಗರ : ಮಹಿಳಾ ದಿನಾಚರಣೆ ಅಂಗವಾಗಿ ಎಲ್.ಬಿ.ಕಾಲೇಜಿನಲ್ಲಿ ಭದ್ರಾವತಿ ಆಕಾಶವಾಣಿ ಸಹಯೋಗದೊಂದಿಗೆ ಕ್ಯಾಂಪಸ್ ಕಟ್ಟೆ ಕಾರ್ಯಕ್ರಮ ನಡೆಯಿತು.. ಪ್ರಥಮ ಬಿಎ ವಿದ್ಯಾರ್ಥಿನಿ ಸಂಜನಾ, ಪ್ರಥಮ ಬಿ.ಎಸ್ಸಿ. ವಿದ್ಯಾರ್ಥಿನಿ ಚಂದನಾ, ಸ್ನಿತಾ, ಸದ್ವಿನಿ, ಬಿ.ಕಾಂ ವಿದ್ಯಾರ್ಥಿನಿ ದಿವ್ಯಶ್ರೀ ಇನ್ನಿತರರು ಮಾತನಾಡಿ ಪ್ರಶಸ್ತಿಗೆ ಭಾಜನರಾದರು. ಈ ಸಂದರ್ಭದಲ್ಲಿ ಭದ್ರಾವತಿ ಆಕಾಶವಾಣಿಯ ಉದ್ಘೋಷಕರಾದ ಡಾ. ಬಸವರಾಜ್, ಕಾಲೇಜಿನ ಪ್ರಾಚಾರ್ಯ ಡಾ. ಲಕ್ಷೀಶ್, ಡಾ. ವಿಠಲಜನಮೂರ್ತಿ, ಮಂಜುನಾಥ್, ರವೀಂದ್ರ, ಡಾ. ಪ್ರಶಾಂತ್ ಮಾಂಡ್ರೆ, ವಿನಯ ಚಂದನ್, ದೇವರಾಜ್, ಜೆನಿಫರ್ ಡಿಸೋಜ ಇನ್ನಿತರರು ಹಾಜರಿದ್ದರು.

ಮಧ್ಯ ಪ್ರಾಚ್ಯದಲ್ಲಿ ಯುದ್ಧ | ವಾಣಿಜ್ಯ ಬೆಳಕೆ ಸಿಲಿಂಡರ್ ಕೊರತೆ | ಸಂಕಷ್ಟಕ್ಕೀಡಾದ ಜನತೆ

ಸೊರಗಿದ ಇಡೀ ಹೋಟೆಲ್ ಉದ್ಯಮ

▸ ಸತ್ಯನಾರಾಯಣ ತುಂಬಳ್ಳಿ





ಸಾಂದರ್ಭಿಕ ಚಿತ್ರ

• **ಶಿವಮೊಗ್ಗ :** ಮಧ್ಯ ಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಒಂದೊಂದೇ ಸಂಕಷ್ಟ ಜನತೆಯನ್ನು ಸುತ್ತಿಕೊಳ್ಳಲಾರಂಭಿಸಿದ್ದು, ಮುಖ್ಯವಾಗಿ ಹೋಟೆಲ್ ಉದ್ಯಮಕ್ಕೆ ಬೇಕಿರುವ ವಾಣಿಜ್ಯ ಬಳಕೆಯ ಸಿಲಿಂಡರ್ ಸಾಕಷ್ಟು ಪೂರೈಕೆಯಾಗದೆ ಇಡೀ ಉದ್ಯಮ ಸೊರಗಲಾರಂಭಿಸಿದೆ.

ಗ್ಯಾಸ್‌ಗೆ ಪರ್ಯಾಯವಾಗಿ ಸೌದೆ, ಇಂಡಕ್ಷ ಸ್ಟೌವ್, ಹೊಟ್ಟಿನ ಒಲೆ ಮೊದಲಾದವುಗಳಿಗೆ ಹೋಟೆಲ್ ಉದ್ಯಮಿಗಳು ಮುಖಮಾಡುತ್ತಿದ್ದಾರಾದರೂ ಅದು ಪರಿಣಾಮಕಾರಿಯಾಗುತ್ತಿಲ್ಲ. ಹೊಸದಾಗಿ ಒಲೆಗಳ ಸಿದ್ಧತೆ ಮಾಡಿಕೊಳ್ಳುವುದು, ಉರುವಲುಗಳ ಲಭ್ಯತೆ, ಅಡುಗೆಯವರು ಸೌದೆ ಒಲೆಗೆ ಹೊಂದಿಕೊಳ್ಳುವುದು ಕೂಡ ಸಮಸ್ಯೆಯಾಗಿ ಪರಿಣಮಿಸಿದೆ.

ಪ್ರತೀ ವಾಣಿಜ್ಯ ಬಳಕೆಯ ಸಂಪರ್ಕಕ್ಕೆ ಸಿಲಿಂಡರ್ ನೀಡಿಕೆ ಕಡಿತ ಮಾಡಲಾಗಿದೆ. ಬೆಲೆ ಕೂಡ ದ್ವಿಗುಣ ಮಾಡಲಾಗಿದೆ. ಇದು ಹೋಟೆಲ್ ಉದ್ಯಮಿಗಳಿಗೆ ಹೊರೆಯಾಗಿದ್ದು, ಗ್ಯಾಸ್ ಲಭ್ಯತೆಯ ಮೇಲೆ ಹೋಟೆಲ್‌ಗಳಲ್ಲಿ ತಿಂಡಿ, ತಿನಿಸುಗಳನ್ನು ಸಿದ್ಧಪಡಿಸುವಂತಾಗಿದೆ. ಇದರಿಂದಾಗಿ ಎಲ್ಲಾ ಹೋಟೆಲ್‌ಗಲ್ಲಿ ಶೇ.40ರಿಂದ 50ರಷ್ಟು ಮೆನು ಕಡಿತ ಮಾಡಲಾಗಿದೆ.

ಹೆಚ್ಚಿನ ಗ್ಯಾಸ್ ಬೇಕಾಗುವ ರೊಟ್ಟಿ, ಚಪಾತಿ, ದೋಸೆ, ಇಡ್ಲಿ, ವಡೆ, ಪೂರಿಯಂತಹ ತಿಂಡಿಗಳಿಗೆ ಬ್ರೇಕ್ ಬಿದ್ದಿದೆ. ಇಂತಹ ತಿಂಡಿಗಳನ್ನು ಮಾಡಿದರೂ ಕಡಿಮೆ ಪ್ರಮಾಣದಲ್ಲಿ ಮಾಡಲಾಗುತ್ತದೆ. ಎರಡ್ಮೂರು ಬಗೆಯ ಪಲ್ಯಕ್ಕೂ ಕೊಕ್ ನೀಡಲಾಗಿದೆ. ಹೀಗಾಗಿ ಅನ್ನದಿಂದ ಮಾಡುವ ಪದಾರ್ಥಗಳೇ ಹೋಟೆಲ್‌ಗಳಲ್ಲಿ ಲಭ್ಯ ಇರುವುದರಿಂದ ಗ್ರಾಹಕರು ಕೂಡ ಮೂಗು ಮುರಿಯುವಂತಾಗಿದೆ.

ಸೌದೆಗೆ ಬೇಡಿಕೆ: ಗ್ಯಾಸ್ ಇಲ್ಲದಿರುವುದರಿಂದ ಹೋಟೆಲ್ ಮಾಲೀಕರು ಅನಿವಾರ್ಯವಾಗಿ ಸೌದೆ ಬಳಕೆಗೆ ಮುಂದಾಗಿದ್ದಾರೆ. ಆದರೆ ಹೊಗೆ ಬರುವುದರಿಂದ ಪ್ರತ್ಯೇಕ ಜಾಗದಲ್ಲಿಯೇ ಒಲೆ ಮಾಡಿಕೊಳ್ಳಬೇಕಿದೆ. ಇದುವರೆಗೂ ಗ್ಯಾಸ್‌ನಲ್ಲಿ ಕೆಲಸ ಮಾಡಿರುವ ಅಡುಗೆಯವರು ಕೂಡ ಹೊಗೆಗೆ ಒಗ್ಗಿಕೊಳ್ಳಲಾಗುತ್ತಿಲ್ಲ, ಇದಕ್ಕೆ ಹೊಂದಿಕೊಂಡು ಕೆಲಸ ಮಾಡದಿದ್ದರೆ ಕೆಲಸವನ್ನೇ ಕಳೆದುಕೊಳ್ಳುವ ಸ್ಥಿತಿ ಎದುರಾಗಿದೆ.

ದಿಗಂತ ವಿಶೇಷ

ಸೌದೆ ಕೂಡ ಬೇಕಾದಷ್ಟು ಸಿಕ್ಕುತ್ತಿಲ್ಲ, ಅದರಲ್ಲೂ ಸಂಪೂರ್ಣ ಒಣಗಿದ ಪ್ರತೀ ಕೆಜಿ ಸೌದೆಗೆ 50 ರಿಂದ 80 ರೂ.ವರೆಗೆ ಬೆಲೆ ಇದೆ. ಇದು ಗ್ಯಾಸ್‌ಗಿಂತಲೂ ಹೆಚ್ಚಿನ ದುಬಾರಿಯಾಗಲಿದೆ. ಹಸಿ ಇರುವ ಸೌದೆಗೆ ಸ್ವಲ್ಪ ಕಡಿಮೆ ಬೆಲೆ ಇದೆ. ಅಂತಹ ಸೌದೆ ಉರಿಯುವುದಿಲ್ಲ, ಬದಲಾಗಿ ಹೊಗೆಯೇ ಹೆಚ್ಚು ಆವರಿಸಲಿದೆ. ಹೊಗೆಯಿಂದ ಪಾತ್ರೆ ಕಪ್ಪಾಗವುದರಿಂದ ಪಾತ್ರೆ ತೊಳೆಯುವವರು ಕೂಡ ಅವನ್ನು ಮುಟ್ಟಲು ಹಿಂದೇಟು ಹಾಕುವಂತಾಗಿದೆ.

ತೆಂಗಿನ ಕಾಯಿ ಚಿಪ್ಪು, ಕತ್ತದ ಮಟ್ಟೆ, ಸಾಮಿಲ್‌ನಲ್ಲಿನ ಮರದ ಹೊಟ್ಟು, ತೆಂಗಿನ ಮಟ್ಟೆಗಳಿಗೂ ಬೇಡಿಕೆ ಹೆಚ್ಚಾಗುತ್ತಿದೆ. ಹೀಗಾಗಿ ಒಣಗಿದ ಸಣ್ಣಪುಟ್ಟ ಮರಗಳಿಗೆ ಅದರಲ್ಲೂ ರಸ್ತೆ ಬದಿಯಲ್ಲಿನ ಹುಣಸೆ ಮತ್ತಿತರ ಮರಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ.

ತಿಂಡಿ ಗಾಡಿಗಳಿಗೂ ಸಂಚಕಾರ: ರಸ್ತೆ ಬದಿಯಲ್ಲಿನ ತಿಂಡಿ ಗಾಡಿಯ ವ್ಯಾಪಾರಿಗಳು ಕೂಡ ಸಂಕಷ್ಟಕ್ಕೆ ಒಳಗಾಗಿದ್ದು, 5 ಕೆಜಿಯ ಸಣ್ಣ ಸಿಲಿಂಡರ್‌ಗಳನ್ನು ತುರ್ತಾಗಿ ಬಳಸುತ್ತಿದ್ದಾರೆ. ಅದು ಕೂಡ ಹೆಚ್ಚಾಗಿ ಲಭ್ಯ ಇಲ್ಲ, ಇದರಿಂದಾಗಿ ಬಹುತೇಕ ತಿಂಡಿ ಗಾಡಿಯವರು ಬಂದ್ ಮಾಡಿದ್ದಾರೆ. ಇದನ್ನು ಕೆಲವರು ಮನೆಯಿಂದಲೇ ಆಹಾರ ಸಿದ್ಧಪಡಿಸಿಕೊಂಡು ಮಾರಾಟ ಮಾಡುತ್ತಿದ್ದಾರೆ.

> ನಾಳೆಯದು ಗೊತ್ತಿಲ್ಲ, ಇಂದು ನಿಮ್ಮ ಕೋಟಾದ ಸಿಲಿಂಡರ್ ಕೊಡುತ್ತೇವೆ ತೆಗೆದುಕೊಂಡು ಹೋಗಿ ಎನ್ನುತ್ತಾರೆ ಏಜೆನ್ಸಿಯವರು. ಬೆಲೆ ಕೂಡ ಜಾಸ್ತಿಯಾಗಿದೆ. ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. ಆದರೆ ಉರುವಲು ಸಿಕ್ಕುವುದು ದುಸ್ತರವಾಗಿದೆ. ಗ್ರಾಹಕರು ಕೇಳಿದ ತಿಂಡಿ ತಿನಿಸು ನೀಡಲು ಸಾಧ್ಯವಾಗುತ್ತಿಲ್ಲ. ಮೆನು ಕಡಿತ ಮಾಡಿದ್ದೇವೆ. ಗ್ರಾಹಕರು ಬರದೆ ನಷ್ಟವಾಗುತ್ತಿದೆ.
>
> ■ ಗೋಪಿನಾಥ್, ಹೋಟೆಲ್ ಉದ್ಯಮಿ

> ಗ್ಯಾಸ್ ಸಿಕ್ಕುತ್ತಿಲ್ಲ, ಹೀಗಾಗಿ ಒಂದೆರಡು ದಿನ ಉದ್ಯಮ ಬಂದ್ ಮಾಡಿದ್ದೆ. ಬಂದ್ ಮಾಡಿ ಪುನಃ ತೆರೆದರೆ ಗ್ರಾಹಕರು ಬರುವುದಿಲ್ಲ. ಸೌದೆ ಒಲೆ, ಗ್ಯಾಸ್ ಹೀಗೆ ಬ್ಯಾಲೆನ್ಸ್ ಮಾಡಲಾಗುತ್ತಿದೆ. ನಾನ್ ವೆಜ್ ಹೋಟೆಲ್‌ಗಳಿಗೆ ಹೆಚ್ಚಿನ ಗ್ಯಾಸ್ ಬೇಕಾಗುತ್ತದೆ. ಹೇಗೋ ನಿರ್ವಹಣೆ ಮಾಡಲಾಗುತ್ತಿದೆ.
>
> ■ ರಾಜಣ್ಣ ಎಂ.
> ಮಿಲ್ಕಿ ಹೋಟೆಲ್ ಮಾಲೀಕ

ಶ್ರೀ ಮಹಾಗಣಪತಿ ರಥೋತ್ಸವ



• **ಸಾಗರ :** ಇಲ್ಲಿನ ಇತಿಹಾಸ ಪ್ರಸಿದ್ಧವಾದ ಶ್ರೀ ಮಹಾಗಣಪತಿ ರಥೋತ್ಸವ ಭಾನುವಾರ ಬೆಳಿಗ್ಗೆ 8-15ರ ಶುಭ ಮಹೂರ್ತದಲ್ಲಿ ಸಂಪನ್ನಗೊಂಡಿತು. ದೇವಸ್ಥಾನದ ಪ್ರಧಾನ ಅರ್ಚಕರಾದ ವಿದ್ವಾನ್ ಜಗದೀಶ್ ಭಟ್ ಅವರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು.

ಬೆಳಿಗ್ಗೆಯಿಂದಲೇ ಸಾವಿರಾರು ಭಕ್ತರು ಶ್ರೀ ಗಣಪತಿ ದೇವರ ಉತ್ಸವ ಮೂರ್ತಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು ನಂತರ ಶ್ರೀ ದೇವರ ರಥರೋಹಣ ನಡೆಯಿತು. ಮಂಗಳಾರತಿ ನಂತರ ಕನಕವೃಷ್ಟಿ ನಡೆದು ರಥವನ್ನು ಎಳೆಯಲಾಯಿತು.

ಯುದ್ಧ ನಿಂತು ಶಾಂತಿ ನೆಲೆಸಲಿ : ರಥೋತ್ಸಮದಲ್ಲಿ ಪಾಲ್ಗೊಂಡು ಮಾತನಾಡಿದ ಶಾಸಕ ಗೋಪಾಲಕೃಷ್ಣ ಬೇಳೂರು, ಇತಿಹಾಸ ಪ್ರಸಿದ್ಧವಾದ ಗಣಪತಿ ರಥೋತ್ಸವ ಯಶಸ್ವಿಯಾಗಿ ನಡೆದಿದೆ. ಜಾತ್ರೆ ಯಶಸ್ಸಿಗೆ ಬೇಕಾದ ಅಗತ್ಯ ಸಿದ್ದತೆ ಮಾಡಿ ಕೊಡಲಾಗಿದೆ. ರಥೋತ್ಸವದಲ್ಲಿ ಸಹಸ್ರಾರು ಭಕ್ತರು ಪಾಲ್ಗೊಂಡಿದ್ದಾರೆ. ದೇವಸ್ಥಾನ ವ್ಯವ ಸ್ಥಾಪನಾ ಸಮಿತಿ ಅತ್ಯಂತ ಅಚ್ಚುಕಟ್ಟಾಗಿ ಜಾತ್ರೋತ್ಸವಕ್ಕೆ ಸಿದ್ದತೆ ಮಾಡಿಕೊಂಡಿದೆ ಎಂದರು.

ಪ್ರಪಂಚದಲ್ಲಿ ಯುದ್ಧದ ವಾತಾವರಣ ಕವಿದಿದ್ದು, ಇರಾನ್, ಇಸ್ರೇಲ್ ಮತ್ತು ಅಮೇರಿಕಾ ನಡುವಿನ ಯುದ್ಧ ಜಾಗತಿಕ ಶಾಂತಿಗೆ ಧಕ್ಕೆಯುಂಟು ಮಾಡಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದಿಂದ ಭಾರತದ ಮೇಲೆ ಸಾಕಷ್ಟು ಪರಿಣಾಮ ಬೀರಿದ್ದು ಜನರು ಸಂಕಷ್ಟ ಎದುರಿಸುತ್ತಿದ್ದಾರೆ. ಆದಷ್ಟು ಬೇಗ ಯುದ್ಧ ಮುಗಿದು ಜಗತ್ತಿನಲ್ಲಿ ಶಾಂತಿ ನೆಲೆಸಲಿ ಎಂದು ಗಣಪತಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಟಿ.ವಿ. ಪಾಂಡುರಂಗ ಮಾತನಾಡಿ, ಗಣಪತಿ ಜಾತ್ರೆಗೆ ಅದ್ದೂರಿ ಚಾಲನೆ ಸಿಕ್ಕಿದ್ದು, ಶಾಸಕರ ನೇತೃತ್ವದಲ್ಲಿ ಜಾತ್ರೆ ಯಶಸ್ಸಿಗೆ ಎಲ್ಲ ಸಿದ್ದತೆ ಮಾಡಿಕೊಂಡಿದೆ. ರಥೋತ್ಸವ ಅಂಗವಾಗಿ ಪ್ರತಿದಿನ ಮಧ್ಯಾಹ್ನ ಅನ್ನ ಸಂತರ್ಪಣೆ ಇರುತ್ತದೆ. ಸೋಮವಾರದಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಬುಧವಾರ ಸಾರ್ವತ್ರಿಕ ಗಣಹೋಮ ಏರ್ಪಡಿಸಿದೆ ಎಂದು ಹೇಳಿದರು.

ಉಪವಿಭಾಗಾಧಿಕಾರಿ ವಿರೇಶ್ ಕುಮಾರ್, ದೇವಸ್ಥಾನದ ಕಾರ್ಯನಿರ್ವಾಹಣಾಧಿಕಾರಿ ಪ್ರಮಿಳಾ ಕುಮಾರಿ, ಐ.ವಿ.ಹೆಗಡೆ, ದೇವಸ್ಥಾನ ಸಮಿತಿ ಸದಸ್ಯರು ಇತರರಿದ್ದರು.

ಬೆಳೆದು ನಿಂತಿರುವ ಒಣ ಮರದ ಕೊಂಬೆಗಳ ತೆರವಿಗೆ ಮನವಿ



• **ಹೊಸನಗರ:** ಮುಂದಿನ ಎರಡ್ಮೂರು ತಿಂಗಳಲ್ಲಿ ಮಳೆಗಾಲ ಆರಂಭವಾಗಲಿದ್ದು, ಪಟ್ಟಣದಲ್ಲಿ ಮರದ ಕೊಂಬೆಗಳು ಮನೆ ಅಥವಾ ವಿದ್ಯುತ್ ತಂತಿಗಳ ಮೇಲೆ ಬೀಳುವ ಸಾಧ್ಯತೆ ಇದ್ದು, ಕೂಡಲೇ ಅವುಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆ ಹಾಗೂ ಪಟ್ಟಣ ಪಂಚಾಯಿತಿ ಕ್ರಮ ವಹಿಸಬೇಕು ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಅಂದರೆ ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ಅಲ್ಲಲ್ಲಿ ಸುಂಟರಗಾಳಿ ಸಹಿತ ಸಿಡಿಲು ಮಳೆ ರಭಸವಾಗಿ ಬೀಳುತ್ತಿರುವುದರಿಂದ ದೊಡ್ಡದಾಗಿ ಬೆಳೆದು ನಿಂತಿರುವ ಮರದ ಒಣ ಕೊಂಬೆಗಳನ್ನು ತಕ್ಷಣ ಕಡಿಸಬೇಕು. ಮರದ ಕೊಂಬೆಗಳು ಮನೆ ಅಥವಾ ವಿದ್ಯುತ್ ಕಂಬಗಳಿಗೆ ಧಕ್ಕೆ ಉಂಟು ಮಾಡಿದರೆ ಜನರ ಜೀವನ ಅಸ್ತವ್ಯಸ್ಥವಾಗುತ್ತದೆ. ಹೊಸನಗರದಲ್ಲಿ ಸದ್ಯ ಮಳೆ ಬೀಳದೆ ಇದ್ದರೂ ತಾಲೂಕು ಸುತ್ತಮುತ್ತ ಹೆಚ್ಚಾಗಿ ಸಿಡಿಲು ಸಹಿತ ಬಿರುಸಿನ ಮಳೆಯಾಗಿ ಮರದ ರೆಂಬೆಗಳು ಕೆಲವು ಮನೆಗಳು ಮೇಲೆ ಬಿದ್ದು ಅಪಾರ ಪ್ರಮಾಣದ ಹಾನಿಯಾಗಿರುವ ಘಟನೆ ನಡೆದಿದೆ. ಆದ್ದರಿಂದ ಈಗಲೇ ಸರ್ಕಾರದಿಂದ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ.

ಮರದ ಕೊಂಬೆ ಕಡಿಯಲು ಅರ್ಜಿ: ನಿವೃತ್ತ ನೌಕರರ ಸಂಘದ ಅಧ್ಯಕ್ಷ ಡಾ. ದಿನಮಣಿ ಪಪಂ ಮುಖ್ಯಾಧಿಕಾರಿ ಹರೀಶ್‌ರವರಿಗೆ ಅರ್ಜಿ ಸಲ್ಲಿಸಿ, ತೋಟಗಾರಿಕ ಇಲಾಖೆಗೆ ಹೋಗುವ ರಸ್ತೆಯಲ್ಲಿ ಬೃಹತ್ ಗಾತ್ರದ ಎರಡು ಬೆಲೆಬಾಳದ ಮರಗಳಿವೆ. ಭಾರೀ ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಕೊಂಬೆಗಳನ್ನು ಕಡಿಸಿರಿ, ಇಲ್ಲವಾದರೇ ಮನೆಗಳಿಗೆ ವಿದ್ಯುತ್ ಕಂಬಗಳಿಗೆ ಹಾನಿ ಮಾಡುವ ಜೊತೆಗೆ ಸಾರ್ವಜನಿಕರ ಜೀವಕ್ಕೂ ಹಾನಿಯಾಗಬಹುದು ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಶಾಸಕ ಬೇಳೂರು ಗೋಪಾಲಕೃಷ್ಣ ಹಾಗೂ ಪಟ್ಟಣ ಪಂಚಾಯತಿ ಆಡಳಿತಾಧಿಕಾರಿ ಭರತ್ ರಾಜ್ ಮಳೆ ಬರುವ ಮುಂಚೆ ಅನಾಹುತ ಮಾಡುವಂತಹ ಮರದ ಕೊಂಬೆಗಳನ್ನು ಕಡಿಸಲು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಪಟ್ಟಣ ಪಂಚಾಯತಿ ಅಧಿಕಾರಿಗಳಿಗೆ ಸೂಚಿಸುವುದು ಸೂಕ್ತ ಎನಿಸುತ್ತಿದೆ.ಇಲ್ಲವಾದರೇ ಅನಾಹುತವಾದ ಮೇಲೆ ಸಾಂತ್ವನ ಹೇಳುವುದಕ್ಕಿಂತ ಮುಂಚಿತವಾಗಿ ಜಾಗೃತಿ ವಹಿಸುವುದು ಸೂಕ್ತ ಎಂದು ಸಾರ್ವಜನಿಕರು ಅಭಿಪ್ರಾಯವಾಗಿದೆ.

ಸಿವಿಲ್ ಸೇವೆಗಳಲ್ಲಿ ಪ್ರಾತಿನಿಧ್ಯ ನೀಡಲು ಸರ್ಕಾರಕ್ಕೆ ಮನವಿ

• **ಶಿವಮೊಗ್ಗ:** ಈಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅರಣ್ಯದಂಚಿನ ಹಾಡಿಗಳಲ್ಲಿ ವಾಸ ಮಾಡುತ್ತಿರುವ ಬುಡಕಟ್ಟು ಜನಾಂಗಗಳಾದ ಜೇನುಕುರುಬ, ಇರುಳಿಗ, ಕೊರಗ, ಸೋಲಿಗ, ಯರವ ಪಣಿಯನ್, ಹಸಲರು, ಗೌಡಲು, ಸಿದ್ದಿ, ಬೆಟ್ಟಕುರುಬ, ಕಾಡುಕುರುಬ, ಕುಡಿಯ, ಮಲೆಕುಡಿಯ ಜನಾಂಗಗಳಿಗೆ ರಾಜ್ಯ ಸಿವಿಲ್ ಸೇವೆಗಳಲ್ಲಿ ಪ್ರಾತಿನಿಧ್ಯ ನೀಡುವ ಸಲುವಾಗಿ ವಿಶೇಷ ನೇರ ನೇಮಕಾತಿ ಕೈಗೊಳ್ಳುವುದಾಗಿ ಸದನದಲ್ಲಿ ಹೇಳಿದ್ದಾರೆ.

ಈ ಕಾರ್ಯ ಸ್ವಾಗತಾರ್ಹ. ಆದರೆ ಈ ಪಟ್ಟಿಯಲ್ಲಿ ಈಗಲೂ ಅರಣ್ಯದಂಚಿನಲ್ಲಿ ವಾಸಿಸುತ್ತಾ ಇನ್ನೂ ಅರಣ್ಯವನ್ನೇ ನಂಬಿರುವ ಅಪ್ಪಟ ಅರಣ್ಯವಾಸಿಗಳಾದ ಹಕ್ಕಿಪಿಕ್ಕಿ, ಪಾರ್ಧಿ, ಹರಣಿಸಿಕಾರಿ, ವಾಗಿರಿ, ಅಡವಿಚೆಂಚರು ಸಮುದಾಯಗಳನ್ನು ಈ ಪಟ್ಟಿಯಿಂದ ಕೈಬಿಟ್ಟಿರುವುದು ಆಘಾತ ಉಂಟು ಮಾಡಿದೆ ಎಂದು ಕರ್ನಾಟಕ ಅಲೆಮಾರಿ ಹಕ್ಕಿಪಿಕ್ಕಿ ಬುಡಕಟ್ಟು ಸಂರಕ್ಷಣ ಸಮಿತಿ ಬೇಸರ ವ್ಯಕ್ತಪಡಿಸಿದೆ.

ಹಕ್ಕಿಪಿಕ್ಕಿ ಎಂದೇ ಕರೆಯಲಾಗುವ ಈ ಐದೂ ಸಮುದಾಯಗಳು ಮೂಲತಃ ಅರಣ್ಯವಾಸಿಗಳು ಮತ್ತು ಅಪ್ಪಟ ಆದಿವಾಸಿಗಳಾಗಿದ್ದಾರೆ. ಇದನ್ನು ಅನೇಕ ಮಂದಿ ಮಾನವಶಾಸ್ತ್ರಜ್ಞರು, ಕುಲಶಾಸ್ತ್ರೀಯ ಅಧ್ಯಯನಕಾರರು, ಸಂಶೋಧಕರೇ ಮುಂತಾದ ಪ್ರಾಜ್ಞರು ತಮ್ಮ ಗ್ರಂಥಗಳಲ್ಲಿ ಸಾಬೀತುಪಡಿಸಿದ್ದಾರೆ.

ನಮ್ಮ ಸಮುದಾಯಕ್ಕೆ ಎಲ್ಲಿಯೂ ಪ್ರಾತಿನಿಧ್ಯ ಸಿಕ್ಕಿಲ್ಲ, ಸಾಮಾಜಿಕವಾಗಿ, ಔದ್ಯೋಗಿಕವಾಗಿ, ಶೈಕ್ಷಣಿಕವಾಗಿ, ಅತ್ಯಂತ ದಮನಿತರಾಗಿರುವ ನಮ್ಮನ್ನು ಸದರಿ ಪಟ್ಟಿಯಲ್ಲಿ ಸೇರಿಸಬೇಕೆಂದು ಕೋರುತ್ತಾ ಹಾಗೇನಾದರೂ ಸೇರಿಸದೇ ಹೋದರೆ ನಾಡಿನಾದ್ಯಂತ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಸಮಿತಿಯ ರಾಜ್ಯಾಧ್ಯಕ್ಷ ಜಗ್ಗು ಪ್ರಕಟಣೆಯ ಮೂಲಕ ಎಚ್ಚರಿಸಿದ್ದಾರೆ.

ಮಾ.26ರಂದು ನಿತ್ಯೋತ್ಸವ ಯೂಟ್ಯೂಬ್ ಚಾನಲ್‌ನಲ್ಲಿ ಆಲ್ಬಂ ಸಾಂಗ್ ಬಿಡುಗಡೆ

‘ಉದ್ಭಾಂಜನೇಯ’ ಆಲ್ಬಂ ಸಾಂಗ್ ಶೀರ್ಷಿಕೆ ಅನಾವರಣ

• **ಭದ್ರಾವತಿ:** ಕ್ಷೇತ್ರದ ಪುರಾಣ ಪ್ರಸಿದ್ಧ ಗಂಗೂರಿನ ಉದ್ಭಾಂಜನೇಯ ಸ್ವಾಮಿ ಕುರಿತ ಇತಿಹಾಸ ಬಹುತೇಕ ಮಂದಿಗೆ ತಿಳಿದಿದ್ದು, ಈ ಬಾರಿ ಶ್ರೀ ಕ್ಷೇತ್ರದ ವಾರ್ಷಿಕೋತ್ಸವ ಮಹೋತ್ಸವದ ಹಿನ್ನಲೆಯಲ್ಲಿ ನಿತ್ಯೋತ್ಸವ ಮೂವೀಸ್‌ರವರ ಯೂಟ್ಯೂಬ್ ಚಾನಲ್‌ಗಾಗಿ ''ಉದ್ಭಾಂಜನೇಯ'' ಹೆಸರಿನಲ್ಲಿ ನಿರ್ಮಿಸಿರುವ ಆಲ್ಬಂ ಸಾಂಗ್ ಬಿಡುಗಡೆಗೊಳಿಸಲಾಗುತ್ತಿದೆ.

ಗೀರಿಶ್ ಮಲ್ನಾಡ್‌ರವರ ಸಾರಥ್ಯದಲ್ಲಿ ನಿತ್ಯೋತ್ಸವ ಮೂವೀಸ್‌ರವರ ಮೂರನೇ ಕಾಣಿಕೆಯಾಗಿ ಉದ್ಭಾಂಜನೇಯ ಸ್ವಾಮಿಯನ್ನು ಕುರಿತು ಸಾಹಿತ್ಯ ಮತ್ತು ರಾಗ ಸಂಯೋಜನೆ ಮಾಡಿರುವ ಹಾಗು ಶ್ರೀ ಕ್ಷೇತ್ರದ ಪರಿಸರದಲ್ಲಿ ಚಿತ್ರೀ ಕರಣಗೊಳಿಸಲಾಗಿರುವ 'ಉದ್ಭಾಂಜನೇಯ' ಹೆಸರಿನಲ್ಲಿ ಯೂಟ್ಯೂಬ್ ಚಾನಲ್‌ಗಾಗಿ ನಿರ್ಮಿಸಿರುವ ಆಲ್ಬಂ ಸಾಂಗ್ ಮಾ.26ರಂದು ಬಿಡುಗಡೆಗೊಳಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ ಆಲ್ಬಂ ಸಾಂಗ್ ಶೀರ್ಷಿಕೆಯನ್ನು ಹಳೇನಗರದ ಡಾ. ಪುನೀತ್ ರಾಜಕುಮಾರ್ ರಸ್ತೆಯ ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಅನಾವರಣಗೊಳಿಸಲಾಯಿತು.



ಭದ್ರಾವತಿ: 'ಉದ್ಭಾಂಜನೇಯ' ಹೆಸರಿನಲ್ಲಿ ಯೂಟ್ಯೂಬ್ ಚಾನಲ್‌ಗಾಗಿ ನಿರ್ಮಿಸಿರುವ ಆಲ್ಬಂ ಸಾಂಗ್ ಶೀರ್ಷಿಕೆಯನ್ನು ಡಾ. ಪುನೀತ್ ರಾಜಕುಮಾರ್ ರಸ್ತೆಯ ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಅನಾವರಣಗೊಳಿಸಲಾಯಿತು.

ಶಿವಮೊಗ್ಗ ಜಿಲ್ಲಾ ಸಾಂಸ್ಕೃತಿಕ ಕಲಾವಿದರ ಸಂಘದ ಅಧ್ಯಕ್ಷ ಬಿ.ಎ ಮಂಜುನಾಥ್ ಮಾತನಾಡಿ, ಕ್ಷೇತ್ರದಲ್ಲಿ ಬಹಳಷ್ಟು ಪ್ರತಿಭಾವಂತ ಕಲಾವಿದರಿದ್ದಾರೆ. ಇವರೆಲ್ಲ ಪ್ರಸ್ತುತ ಬೆಳ್ಳಿತೆರೆ ಹಾಗು ಕಿರುತೆರೆಯಲ್ಲಿ ಬಹಳಷ್ಟು ಸಾಧನೆ ಮಾಡಿದ್ದಾರೆ. ಗೀರಿಶ್ ಮಲ್ನಾಡ್‌ರವರು ಸಹ ಪ್ರತಿಭಾವಂತರಾಗಿದ್ದು, ಭವಿಷ್ಯದಲ್ಲಿ ಇವರಲ್ಲಿನ ಪ್ರತಿಭೆ ಉನ್ನತ ಸ್ಥಾನದೆಡಗೆ ಕರೆದೊಯ್ಯುವ ವಿಶ್ವಾಸವಿದೆ ಎಂದರು.

ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕರಾದ ಪವನ್‌ಕುಮಾರ್ ಉಡುಪ, ತಾಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಶ್ರೀನಿವಾಸ್, ಮಾಜಿ ಅಧ್ಯಕ್ಷ ರಾಮಕೃಷ್ಣ, ನೃತ್ಯ ಸಂಯೋಜಕ ಮನೋಜ್, ಛಾಯಾಗ್ರಾಹಕ ಕೃಷ್ಣ, ಶರವಣ, ಮನೋಜ್, ಸಿದ್ದು, ಗಾಯಕರಾದ ಚರಣ್, ಶಂಕರ್ ಬಾಬು, ಚಿದಾನಂದ, ಹನುಮಂತಯ್ಯ, ರಾಜು ಮತ್ತು ತುಕಾರಾಂ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಶಿವಮೊಗ್ಗ ಜಿಲ್ಲಾ ಸಾಂಸ್ಕೃತಿಕ ಕಲಾವಿದರ ಸಂಘದ ಖಜಾಂಚಿ ಪ್ರಶಾಂತ್ ಅಪ್ಪು ನಿರೂಪಿಸಿದರು.

ನಾಟಕಗಳು ಲೋಪದೋಷ ತಿದ್ದುವ ದಾರಿದೀಪ

• **ಚಂದ್ರಗುತ್ತಿ:** ಬೆನ್ನೂರು ಗ್ರಾಮವು ಒಂದು ಇತಿಹಾಸ ಪ್ರಸಿದ್ಧ ಗ್ರಾಮ ಎಂಬುದು ಇಲ್ಲಿನ ಪುರಾತನ ಶಿಲಾ ಶಾಸನಗಳೇ ಸಾಕ್ಷಿಯಾಗಿವೆ. ಈ ಗ್ರಾಮದ ಪ್ರಾಚೀನ ವೈಭವಕ್ಕೆ ಇವು ಕನ್ನಡಿ ಹಿಡಿಯುತ್ತವೆ ಎಂದು ತಾಪಂ ಮಾಜಿ ಅಧ್ಯಕ್ಷ ಹೆಚ್. ಗಣಪತಿ ಹುಲ್ತಿಕೊಪ್ಪ ಅಭಿಪ್ರಾಯಪಟ್ಟರು.

ಚಂದ್ರಗುತ್ತಿ ಸಮೀಪದ ಬೆನ್ನೂರು ಗ್ರಾಮದಲ್ಲಿ ಶ್ರೀ ಕಾಳಿಕಾಂಬಾ ದೇವಿಯ ನೂತನ ಮೂರ್ತಿ ಪ್ರತಿಷ್ಠಾಪನಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ಸಾಮಾಜಿಕ ನಾಟಕದ ಸಭಾ ಕಾರ್ಯಕ್ರಮದಲ್ಲಿಅವರು ಮಾತನಾಡಿದರು.

ನಾಟಕಗಳು ಕೇವಲ ಮನರಂಜನೆಯ ಮಾಧ್ಯಮಗಳಲ್ಲ, ಸಮಾಜದಲ್ಲಿ ಬೇರೂರಿರುವ ಅನ್ಯಾಯ, ಅಕ್ರಮ ಹಾಗೂ ಲೋಪದೋಷಗಳನ್ನು ತೆರೆದಿಟ್ಟು, ಸ್ವಸ್ಥ ಸಮಾಜ ನಿರ್ಮಾಣ ಮಾಡುವಲ್ಲಿ ಇವು ಪ್ರಮುಖ ಪಾತ್ರ ವಹಿಸುತ್ತವೆ. ವಿಶೇಷವಾಗಿ ಜಾತಿ ಪದ್ಧತಿ ಹಾಗೂ ಮೂಢನಂಬಿಕೆಗಳನ್ನು ಹೋಗಲಾಡಿಸಲು ನಾಟಕಗಳು ಉತ್ತಮ ಅಸ್ತ್ರಗಳಾಗಿವೆ ಎಂದರು.

ಗ್ರಾಮಸ್ಥರೆಲ್ಲರೂ ಒಗ್ಗೂಡಿ ದೇವಿಯ ಪುನರ್ ಪ್ರತಿಷ್ಠಾಪನೆಯ ಸಂಕಲ್ಪ ಮಾಡಿರುವುದು ಶ್ಲಾಘನೀಯ. ಸಮಾಜದಲ್ಲಿ ಇಂತಹ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿದ್ದರೆ ಮಾತ್ರ ನಾಡು ಸುಭಿಕ್ಷವಾಗಿರಲು ಸಾಧ್ಯ. ಭಕ್ತಿ ಮತ್ತು ನಂಬಿಕೆಗಳು ಮನುಷ್ಯನನ್ನು ಸನ್ಮಾರ್ಗದಲ್ಲಿ ನಡೆಸುತ್ತವೆ ಎಂದರು.



ಕಾರ್ಯಕ್ರಮ ಉದ್ಘಾಟಿಸಿದ ಗ್ರಾಪಂ ಮಾಜಿ ಅಧ್ಯಕ್ಷ ಮಾರ್ಯಪ್ಪ ಬೆನ್ನೂರು ಮಾತನಾಡಿ, ಹಿರಿಯರ ಮಾರ್ಗದರ್ಶನದಲ್ಲಿ ಯುವಕರು ಗ್ರಾಮದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಿಕೊಳ್ಳಬೇಕು. ಕೃಷಿ ಕಾಯಕದ ನಡುವೆಯೂ ದೇವರ ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಮನಸ್ಸಿಗೆ ಶಾಂತಿ ನೀಡುತ್ತದೆ ಎಂದರು.

ಮಾಜಿ ತಾಪಂ ಸದಸ್ಯ ಸುನೀಲ್‌ಗೌಡ ಮಾತನಾಡಿದರು. ಗ್ರಾಮಾಅಭಿವೃದ್ಧಿ ಸಮಿತಿ ಅಧ್ಯಕ್ಷ ಅಶೋಕ್‌ಗೌಡ ಅಧ್ಯಕ್ಷತೆ ವಹಿಸಿದ್ದರು. ಗ್ರಾಮದ ಹಿರಿಯರಾದ ಬಸವರಾಜ್‌ಗೌಡ್ರು, ಗ್ರಾಮ ಸಮಿತಿ ಉಪಾಧ್ಯಕ್ಷ ರಮೇಶ, ಕಾರ್ಯದರ್ಶಿ ನಿತಿನ್, ಪ್ರಮುಖರಾದ ಮಹಾಬಲೇಶ್ವರ, ಶಿವಾಜಿ ರಾವ್ ಸಂಬಾಪುರ, ಚಂದ್ರಪ್ಪ, ಕೃಷ್ಣಶೇಟ್, ಮಹೇಶ್ ಬೆನ್ನೂರು, ಸೇರಿದಂತೆ ಗ್ರಾಮದ ಅನೇಕರು ಉಪಸ್ಥಿತರಿದ್ದರು.

ಕಿರುಸುದ್ದಿ

ಸೌಹಾರ್ದತೆ ಮೂಡಿಸುವ ಯುಗಾದಿ, ರಂಜಾನ್

ಚಳ್ಳಕೆರೆ: ಯುಗಾದಿ ಹಾಗೂ ರಂಜಾನ್ ಹಬ್ಬಗಳು ಸರ್ವಧರ್ಮ ಸಮಾನತೆಯ ಪ್ರತೀಕ. ಎಲ್ಲರೂ ಭೇದಭಾವವಿಲ್ಲದೆ ಒಗ್ಗಟ್ಟಿನಿಂದ ಬದುಕಬೇಕು ಎಂದು ಶಾಸಕ ಟಿ. ರಘುಮೂರ್ತಿ ಹೇಳಿದರು. ನಗರದ ಈದ್ಗಾ ಮೈದಾನದಲ್ಲಿ ನಡೆದ ರಂಜಾನ್ ಹಬ್ಬದ ವಿಶೇಷ ಪ್ರಾರ್ಥನೆಯಲ್ಲಿ ಭಾಗವಹಿಸಿ ಮಾತನಾಡಿ, ಯುಗಾದಿ ಮತ್ತು ರಂಜಾನ್ ಒಂದೇ ದಿನ ಬಂದಿರುವುದು ಸಮಾಜದಲ್ಲಿ ಏಕತೆ ಹಾಗೂ ಸಹೋದರತ್ವವನ್ನು ಇನ್ನಷ್ಟು ಬಲಪಡಿಸಿದೆ. ಉಪವಾಸ ಆಚರಿಸಿದ ಎಲ್ಲರಿಗೂ ಶುಭವಾಗಲಿ ಎಂದು ಹಾರೈಸಿದರು. ವೀರಭದ್ರಯ್ಯ ಶಶಿಧರ, ಸೈಯದ್ ಮುಜುಬುಲ್ಲ, ಅತಿಕ್ ಕಲೀಮ್, ದಾದಾಪೀರ್ ಇದ್ದರು.



ಚಿತ್ರದುರ್ಗದ ಕಟ್ಟಿಗೆಳೆಯರ ಬಳಗದ ವತಿಯಿಂದ ಆಯೋಜಿಸಿದ್ದ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ ಪಡೆದ ಡಾ ಕಲಮರಹಳ್ಳಿ ಮಲ್ಲಿಕಾರ್ಜುನ ಮತ್ತು ಡಾ.ಬಿ.ಎಂ.ಗುರುನಾಥ್ ಅವರನ್ನು ಅಭಿನಂದಿಸಲಾಯಿತು. ತಾರಿಣಿ ಶುಭದಾಯಿನಿ, ಸಿ.ಎಚ್.ರೇವಣ್ಣ ಮಂಜುನಾಥ, ಶಿವಣ್ಣ, ಸಾಯಿಪ್ರಸಾದ್, ಸಂತೋಷ್ ಇದ್ದರು.

ಸರ್ಕಾರಿ ವಿಜ್ಞಾನ ಕಾಲೇಜಿನ ಮಹಿಳಾ ತಂಡ ಚಾಂಪಿಯನ್

ಚಿತ್ರದುರ್ಗ: ಸರ್ಕಾರಿ ವಿಜ್ಞಾನ ಕಾಲೇಜಿನ ಮಹಿಳಾ ತಂಡಕ್ಕೆ 2025-26 ನೇ ಸಾಲಿನ ಖೋಖೋ ಚಾಂಪಿಯನ್ ಪ್ರಶಸ್ತಿ ದೊರೆತಿದೆ. ಇತ್ತೀಚೆಗೆ ನಡೆದ ದಾವಣಗೆರೆ ವಿಶ್ವವಿದ್ಯಾಲಯದ ಅಂತರ್ ಕಾಲೇಜು ಮಹಿಳಾ ಕ್ರೀಡಾಕೂಟದಲ್ಲಿ ಸರ್ಕಾರಿ ವಿಜ್ಞಾನ ಕಾಲೇಜಿನ ಮಹಿಳಾ ತಂಡವು 2025-26ರ ಖೋಖೋ ಮಹಿಳಾ ತಂಡದ ಚಾಂಪಿಯನ್ನಾಗಿ ಹೊರ ಹೊಮ್ಮಿದೆ. ಈ ರೋಮಾಂಚಕಾರಿಯ ಫೈನಲ್ ಪಂದ್ಯದಲ್ಲಿ ಸರ್ಕಾರಿ ವಿಜ್ಞಾನ ಕಾಲೇಜಿನ ತಂಡ ಚಳ್ಳಕೆರೆ ಹೆಚ್‌ಪಿಸಿಸಿ ಕಾಲೇಜಿನ ತಂಡವನ್ನು ಮಣಿಸಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ನಡೆದ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಎನ್. ರವಿಕಾಂತ್ ಎಂ ಎನ್. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ ಮಾತನಾಡಿ, ಸರ್ಕಾರಿ ಕಾಲೇಜಿನ



ವಿದ್ಯಾರ್ಥಿಗಳು ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಹೆಚ್ಚಿನ ಮಟ್ಟದ ಸಾಧನೆ ಸಾಧಿಸುತ್ತಿದೆ. ಅಂತಹ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಬೇಕಾದ್ದು ಕಾಲೇಜಿನ ಆದ್ಯ ಕರ್ತವ್ಯ. ಹಾಗಾಗಿ ಇನ್ನು ಹೆಚ್ಚಿನ ಮಟ್ಟದಲ್ಲಿ ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಭಾಗವಹಿಸಿ ಹೆಚ್ಚಿನ ಯಶಸ್ವಿಗೊಳಿಸಲಿ ಎಂದರು.

27ರಿಂದ ತ್ರಿಪುರಸುಂದರಿ ತಿಪ್ಪಿನಘಟ್ಟಮ್ಮ ದೇವಿ ಜಾತ್ರಾ ಮಹೋತ್ಸವ



ಚಿತ್ರದುರ್ಗ: ನವದುರ್ಗೆಯರಲ್ಲಿ ತ್ರಿಪುರ ಸುಂದರಿ ಎಂದೇ ಪ್ರಸಿದ್ಧಿ ಪಡೆದಿರುವ ತಿಪ್ಪಿನಘಟ್ಟಮ್ಮ ದೇವಿ ಜಾತ್ರ ಮಹೋತ್ಸವ ಮಾ.27ರ ರಾತ್ರಿ ನೂರಾರು ಭಕ್ತರ ಸಮ್ಮುಖದಲ್ಲಿ ಕಂಕಣಧಾರಣೆ, ಮದುವಣಗಿತ್ತಿ ಪೂಜಾ ವಿಧಿ-ವಿಧಾನದೊಂದಿಗೆ ಆರಂಭವಾಗಲಿದೆ. ಮಾ.31 ರಂದು ಉಜ್ಜಯನಿ ಮಠದ ರಸ್ತೆಯಲ್ಲಿರುವ ಪಾದದ ಗುಡಿಯಿಂದ ಉತ್ಸವ ಮೂರ್ತಿಯನ್ನು ಜೋಗಿಮಟ್ಟಿ ರಸ್ತೆಯಲ್ಲಿರುವ ಮೂಲ ಸನ್ನಿಧಿಗೆ ಕರೆತರಲಾಗುವುದು. ಏ.01 ರಂದು ಬ್ರಾಹ್ಮೀ ಮುಹೂರ್ತದಲ್ಲಿ ದೇಗುಲ ಸಮೀಪದ ಮಜ್ಜನ ಬಾವಿಯಲ್ಲಿ ದೇವಿಯ ಗಂಗಾಪೂಜೆ, ಕುಂಭಾಭಿಷೇಕ ಮತ್ತು ಜಲ್ದಿ ಪೂಜೆ ನಂತರ ದೇಗುಲ ತಲುಪುವುದು. ಮಧ್ಯಾಹ್ನ 3 ಗಂಟೆಯ ನಂತರ ಐಯುಡಿಪಿ ಬಡಾವಣೆ, ಟೀಚರ್ಸ್ ಕಾಲಾನಿ, ವಿವೇಕಾನಂದ ನಗರ, ಜಟ್‌ಪಟ್ ನಗರದ ಭಕ್ತರ ಮನೆಗಳಲ್ಲಿ ಪೂಜೆ ಸ್ವೀಕಾರ.

ಏ.2 ರಂದು ಧವಳಗಿರಿ ಬಡಾವಣೆ, ಕೋಡೇನಹಟ್ಟಿ, ವಿದ್ಯಾನಗರ, ರೈಲ್ವೆಸ್ಟೇಷನ್, ಜೆಸಿಆರ್-ವಿಪಿ ಬಡಾವಣೆ, ದರ್ಜಿ ಕಾಲಾನಿಯ ಭಕ್ತರ ಮನೆಗಳಲ್ಲಿ ಪೂಜೆ ಸ್ವೀಕಾರ. ಏ.3 ರಂದು ಎಸ್.ಆರ್.ಲೇಔಟ್ ಭಕ್ತರ ಮನೆಗಳಲ್ಲಿ ಪೂಜೆ ಸ್ವೀಕಾರ. ಮಧ್ಯಾಹ್ನ 12 ರಿಂದ ದೇವಿಗೆ ಮೀಸಲು ಪಾನಕ ಪರಿಹಾರ ಹೆಡೆ ಬಿಡಾರಾ ಹಿಟ್ಟಿನ ಆರತಿ ಹಾಗೂ ಬೇವಿನ ಸೀರೆ ಸೇವೆ ಜರುಗಲಿದೆ. ಏ.4 ರಂದು ಕನಕನಗರ, ಮಲ್ಲಾಪುರ ಗೊಲ್ಲರಹಟ್ಟಿ, ಮಲ್ಲಾಪುರ, ಪಿಳ್ಳೇಕೆರೆನಹಳ್ಳಿ, ಗೋಪಾಲಪುರ ರಸ್ತೆಯ ಭಕ್ತರ ಮನೆಗಳಲ್ಲಿ ಪೂಜೆ ಸ್ವೀಕಾರ. ಏ.5 ರಂದು ಮೂಲ ದೇಗುಲ ಮುಂಭಾಗ ಬೆಳಗ್ಗೆ 10ಕ್ಕೆ ಜಗಳೂರು ತಾಲೂಕಿನ ಪಾತಲಿಂಗೇಶ್ವರ ಗುಡಿಕಟ್ಟಿನ ಮಾನಂಗಿ ಗ್ರಾಮದ ಪೋತರಾಜ್ ಮತ್ತು ಸಹೋದರರಿಂದ ವಿಶೇಷ ಸೇವೆ ನೆರವೇರಲಿದೆ. ಅಂದು ಜೋಗಿಮಟ್ಟಿ ರಸ್ತೆ, ಸುಣ್ಣದಗುಮ್ಮಿ, ಜಟ್‌ಪಟ್ ನಗರ, ಆಡುಮಲ್ಲೇಶ್ವರ ರಸ್ತೆ, ರಾಜೇಂದ್ರ ನಗರ ಸೇರಿ ಇತರೆಡೆ ಭಕ್ತರ ಮನೆಗಳಲ್ಲಿ ಮಹಾಮಂಗಳಾರತಿ ಪೂಜೆ ಸ್ವೀಕಾರ. ಏ.6 ರಂದು ಸಂತೆಪೇಟೆ, ಹೊರಪೇಟೆ, ಚನ್ನಕೇಶವಪುರ, ಚರ್ಚ್ ಬಡಾವಣೆ, ಕೆಳಗೋಟೆ ಸೇರಿ ವಿವಿಧೆಡೆಯ ಭಕ್ತರ ಮನೆಗಳಲ್ಲಿ ಪೂಜೆ ಸ್ವೀಕರಿಸಿ ಕ್ಯಾತಲಿಂಗೇಶ್ವರ ಸ್ವಾಮಿ ದೇಗುಲಕ್ಕೆ ಕರೆತರುವುದು. ಏ.08 ರಂದು ದೊಡ್ಡಪೇಟೆ, ಚಿಕ್ಕಪೇಟೆ, ಆನೆಬಾಗಿಲು, ಬುರುಜನಹಟ್ಟಿ, ಹೊಳಲ್ಕೆರೆ ರಸ್ತೆ, ನೆಹರು ನಗರದ ಭಕ್ತರಿಂದ ಪೂಜೆ ಸ್ವೀಕರಿಸಿದ ಬಳಿಕ ಗಂಗಾ ಪೂಜೆಯೊಂದಿಗೆ ಉಜ್ಜಯನಿಮಠ ರಸ್ತೆಯಲ್ಲಿರುವ ಪಾದದ ಗುಡಿಯಲ್ಲಿ ಗುಡಿತುಂಬುವ ಕಾರ್ಯಕ್ರಮ. ಏ.10 ರಂದು ಕಂಕಣ ವಿಸರ್ಜನೆ, ಜೋಗುಟದೊಂದಿಗೆ ಜಾತ್ರೆ ಸಂಪನ್ನಗೊಳ್ಳಲಿದೆ.

ಪಕ್ಷದ ಸದಸ್ಯ ಅಲ್ಲದ ವ್ಯಕ್ತಿಗೆ ಮಂಡಲ ಅಧ್ಯಕ್ಷ ಸ್ಥಾನ | ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಗೂಳಿಹಟ್ಟಿ ಜಗದೀಶ್ ಅಸಮಾಧಾನ

ಆಯ್ಕೆ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆ

ಹೊಸದುರ್ಗ: ಇಲ್ಲಿನ ಮಂಡಲ ಬಿಜೆಪಿ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಯಲ್ಲಿ ನಿಯಮಗಳ ಸಂಪೂರ್ಣ ಉಲ್ಲಂಘನೆ ಆಗಿದೆ. ಪಕ್ಷದ ಸದಸ್ಯನೂ ಅಲ್ಲದ ಅಣ್ಣಪ್ಪ ಸ್ವಾಮಿ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ ಅಣ್ಣಪ್ಪ ಸ್ವಾಮಿಯವರು ತರಾತುರಿಯಲ್ಲಿ ಬಿಜೆಪಿ ಕಾರ್ಯಕರ್ತರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದಾರೆ ಎಂದು ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಗೂಳಿಹಟ್ಟಿ ಜಗದೀಶ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಭಾನುವಾರ ನಡೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಕಳೆದ ಜಿಪಂ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ವಿರುದ್ಧವೇ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದ ಅಣ್ಣಪ್ಪ ಸ್ವಾಮಿ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿರುವುದು ಶಿಸ್ತಿನ ಪಕ್ಷದ ಕಾರ್ಯಕರ್ತರಿಗೆ ಮಾಡಿದ ಅವಮಾನ ಎಂದರು.

ಪಕ್ಷದ ಅಧ್ಯಕ್ಷರಾಗುವುದಕ್ಕೆ ಹಲವು ನಿಯಮಗಳಿವೆ. ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜ್ಯ ರೈತ ಮೋರ್ಚಾ ಉಪಾಧ್ಯಕ್ಷ ರಾಜೇಶ್ ಬುರುಡೆಕಟ್ಟೆ, ಹೇರೂರು ಮಂಜುನಾಥ, ಶಿವನೇಕಟ್ಟೆ ಶಶಿ ಹೆಸರು ಮುಂಚೂಣಿಯಲ್ಲಿತ್ತು. ಅಧ್ಯಕ್ಷ ಸ್ಥಾನಕ್ಕೆ ಅರ್ಹತೆಯೇ ಇಲ್ಲದ ಅಣ್ಣಪ್ಪಸ್ವಾಮಿಯನ್ನು ಒತ್ತಡಕ್ಕೆ ಮಣಿದು ಅಧ್ಯಕ್ಷರನ್ನಾಗಿ ನೇಮಿಸಿ ಇಂದಿಗೆ 9 ತಿಂಗಳಾಗಿದೆ. ಈವರೆಗೂ ಅಧ್ಯಕ್ಷರ ಪದಗ್ರಹಣವಾಗಿಲ್ಲ ಆದರೂ ಮಂಡಲ ಪದಾಧಿಕಾರಿಗಳನ್ನ ನೇಮಕ ಮಾಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಧ್ಯಕ್ಷನಾಗಿ 9 ತಿಂಗಳಾದರೂ ಪಕ್ಷದ ಜವಬ್ದಾರಿ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು. ಜವಾಬ್ದಾರಿ ತೆಗೆದುಕೊಳ್ಳದೆ ಮಂಡಲದ ಜವಬ್ದಾರಿಯನ್ನೂ ಹೇಗೆ ಹಂಚಿಕೆ ಮಾಡಿದ್ದೀರಾ, ಪಕ್ಷದ ಹಿರಿಯರನ್ನು, ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಕಾರ್ಯಕರ್ತರ ಗಮನಕ್ಕೂ ಬಾರದೆ ಹಾಗೆ ತಾಲೂಕು ಘಟಕಕ್ಕೆ ವಿವಿಧ ಪದಾಧಿಕಾರಿಗಳನ್ನು ಘೋಷಣೆ ಮಾಡಿದ್ದಾರೆ. ಒಂದು ತಾಲೂಕಿಗೆ ಮೂರು ಪ್ರಧಾನ ಕಾರ್ಯದರ್ಶಿ ಹುದ್ದೆ ಸೃಷ್ಟಿಸಲು ನಿಮಗೆ ಅಧಿಕಾರ ಕೊಟ್ಟಿದ್ದು ಯಾರು ಎಂದು ಪ್ರಶ್ನಿಸಿದರು.



ಅಧ್ಯಕ್ಷರಾಗಿ ಆಯ್ಕೆಯಾದಾಗಿನಿಂದಲೂ ಬೂತ್ ಪ್ರವಾಸ ಕೈಗೊಂಡಿಲ್ಲ, ಬೂತ್ ಅಧ್ಯಕ್ಷರ ನೇಮಕ ಆಗಿಲ್ಲ, ಬಿಎಲ್‌ಒಗಳ ನೇಮಕ ಮಾಡಿಲ್ಲ, ಇದ್ಯಾವುದೇ ಪಕ್ಷದ ಕಾರ್ಯಗಳನ್ನು ಮಾಡದೆ ಪದಾಧಿಕಾರಿಗಳನ್ನು ಘೋಷಣೆ ಮಾಡಲಾಗಿದೆ. ಪಕ್ಷದಲ್ಲಿ ಉಂಟಾಗಿರುವ ಗೊಂದಲಗಳಿಗೆ ಉತ್ತರಿಸದೆ ಹೋದಲ್ಲಿ ನಿಮ್ಮ ಸರ್ವಾಧಿಕಾರಿ ಧೋರಣೆ ಬಗ್ಗೆ ಪಕ್ಷದ ರಾಜ್ಯಾಧ್ಯಕ್ಷರಿಗೆ ದೂರು ನೀಡಲಾಗುವುದು, ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಪಕ್ಷದ ನಿಯಮಗಳೇ ಅನ್ವಯವಾಗಿಲ್ಲ, ಅಧ್ಯಕ್ಷರಾಗಬೇಕಾದರೆ, ಮುಂಚಿತವಾಗಿ ಕಾರ್ಯದರ್ಶಿಯಾಗಿ ಕೆಲಸ ಮಾಡಿರಬೇಕು. ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಆಯ್ಕೆಯಾಗಬೇಕಾದರೆ, ಮಹಾಶಕ್ತಿ ಕೇಂದ್ರದ ಅಧ್ಯಕ್ಷರಾಗಿ ಕೆಲಸ ಮಾಡಬೇಕು. ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಆಗಬೇಕಾದರೆ, ಸಕ್ರಿಯ ಸದಸ್ಯರಾಗಿರಬೇಕು. ಸಕ್ರಿಯ ಆಗಬೇಕಾದರೆ, ಮೊದಲು ಪಕ್ಷದಲ್ಲಿ ಪ್ರಾಥಮಿಕ ಸದಸ್ಯತ್ವ ಪಡೆದಿರಬೇಕು. ಇವೆಲ್ಲಾ ನಿಯಮಗಳನ್ನು ಧಿಕ್ಕರಿಸಿ ಪದಾಧಿಕಾರಿಗಳನ್ನ ಆಯ್ಕೆ ಮಾಡಲಾಗಿದೆ ಎಂದು ದೂರಿದರು.

ಪಕ್ಷಕ್ಕೆ ನಿಷ್ಠಾವಂತರಾಗಿ ದುಡಿದ ಕಾರ್ಯಕರ್ತರನ್ನ ಕಡೆಗಣಿಸಲಾಗಿದೆ. ನಮ್ಮ ಕೆಲವು ನಾಯಕರ ನಡೆಗಳಿಂದ ಪಕ್ಷದ ಕಾರ್ಯಕರ್ತರು ಮನೆ ಸೇರಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಪಕ್ಷಕ್ಕೆ

> **ವಿಧಾನಸಭಾ ಕ್ಷೇತ್ರದ ಚುನಾವಣೆಗಳಲ್ಲಿ ಮಾಡದಕೆರೆ, ಕಸಬಾ ಹೋಬಳಿಗಳಲ್ಲಿ ಬಿಜೆಪಿ ಪಕ್ಷಕ್ಕೆ ಒಳ್ಳೆಯ ಲೀಡ್ ಬರುತ್ತದೆ. ಆದರೆ, ಶ್ರೀರಾಂಪುರ ಮತ್ತು ಮತ್ತೋಡು ಹೋಬಳಿಗಳಲ್ಲಿ ಮತ ಪ್ರಮಾಣ ಕಡಿಮೆಯಾಗಿ ಸೋತು, ಮನೆ ಕಡೆಗೆ ಹೋಗುತ್ತಿದ್ದೇವೆ. ಶ್ರೀರಾಂಪುರ ಭಾಗಕ್ಕೆ ಸಂಘಟನೆಗೆ ಹೆಚ್ಚಿನ ಹೊತ್ತು ನೀಡಲು ಆ ಭಾಗದ ಕಾರ್ಯಕರ್ತರಿಗೆ ಹೆಚ್ಚಿನ ಜವಾಬ್ದಾರಿಯನ್ನ ನೀಡಬೇಕಿತ್ತು.**
> ■ **ಗೂಳಿಹಟ್ಟಿ ಜಗದೀಶ್**, ಬಿಜೆಪಿ ಮುಖಂಡ

ಮೊದಲು ಗೆಲ್ಲುವಂತಹ ಅವಕಾಶವಿರುವುದು ಹೊಸದುರ್ಗ ಕ್ಷೇತ್ರದಲ್ಲಿ ಮಾತ್ರ. ಆದರೆ, ಸ್ಥಳೀಯ ಸಮಸ್ಯೆ ಮತ್ತು ಗೊಂದಲಗಳಿಂದ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಗೆಲುವಿಗೆ ಸಾಧ್ಯವಾಗುತ್ತಿಲ್ಲ, ಕಳೆದ 2018ರ ಎಂಎಲ್‌ಎ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿದ್ದ ಗೂಳಿಹಟ್ಟಿ ಶೇಖರ್ 30 ಸಾವಿರ ಅಂತರಗಳಿಂದ ಗೆದ್ದಿದ್ದರು. ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ 7 ಸಾವಿರ ಲೀಡ್ ಆಗಿದೆ.

ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿಗಳ ಆಯ್ಕೆ



ಹೊಸದುರ್ಗ: ಬಿಜೆಪಿ ಯುವ ಮುಖಂಡ ಬೋಕಿಕೆರೆ ನಾಗರಾಜ್, ಚಿತ್ತಪ್ಪ ಹಾಗೂ ಇತ್ತೀಚೆಗೆ ಆರ್‌ಎಸ್‌ಎಸ್‌ನಿಂದ ಬಿಜೆಪಿಗೆ ಬಂದ ಪನ್ನಗ ರಾಯ್ಕರ್ ಇವರನ್ನು ಮಂಡಲ ಪ್ರಧಾನ ಕಾರ್ಯದರ್ಶಿಗಳನ್ನಾಗಿ ಆಯ್ಕೆ ಮಾಡಲಾಗಿದೆ. ಪಕ್ಷ, ದೇಶ, ಹಾಗೂ ರಾಷ್ಟ್ರೀಯ ವಿಚಾರಧಾರೆಗಳನ್ನು ಎತ್ತಿ ಹಿಡಿಯುವ ಕೆಲಸವನ್ನು ನಮ್ಮ ಪದಾಧಿಕಾರಿಗಳು ಮಾಡಲಿದ್ದಾರೆ ಎಂದು ಮಂಡಲ ಅಧ್ಯಕ್ಷ ಅಣ್ಣಪ್ಪಸ್ವಾಮಿ ತಿಳಿಸಿದ್ದಾರೆ.

ಎಂಎಲ್‌ಸಿ ಮತ್ತು ಪದವೀಧರ ಕ್ಷೇತ್ರಗಳ ಚುನಾವಣೆಯಲ್ಲಿ ಅಭ್ಯರ್ಥಿಗಳ ಗೆಲುವು ಪಡೆದಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಓಬಿಸಿ ಮೋರ್ಚಾ ಮಂಡಲ ಅಧ್ಯಕ್ಷ ಹೇರೂರು ಮಂಜುನಾಥ, ಮಂಡಲ ಉಪಾಧ್ಯಕ್ಷ ಸಾಚಾ ಮಂಜಯ್ಯ, ಯುವ ಮೋರ್ಚಾ ಅಧ್ಯಕ್ಷ ಕಲ್ಲೇಶ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಂಪ, ಮಂಜುನಾಥ, ರಮೇಶ, ಸುಮಂತ, ಅಶೋಕ್ ಮಾವಿನಕಟ್ಟೆ ಮಲ್ಲಿಕಾರ್ಜುನ, ಜಗದೀಶ್ ಎಸ್ ಕೆ ಹಳ್ಳಿ, ಮತ್ತಿತರರಿದ್ದರು.



ಚಿಕ್ಕಜಾಜೂರು ಸಮೀಪದ ಕಲ್ಲವನಾಗತಿಹಳ್ಳಿ ಗ್ರಾಪಂ ಸದಸ್ಯ ಕೆ.ಎಚ್. ರಂಗನಾಥ್ ವಿದ್ಯಾರ್ಥಿಗಳಿಗೆ 30 ಸಾವಿರ ರೂ. ಮೌಲ್ಯದ ಬಟ್ಟೆಯನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ವಿತರಿಸಿದರು. ರಂಗನಾಥ್ ಅವರನ್ನು ಶಾಲೆ ಪರವಾಗಿ ಸನ್ಮಾನಿಸಲಾಯಿತು. ಪ್ರಶಾಂತ್, ಲತಾ, ಲೋಹಿತ್, ಹಾಲೇಶ್, ಮಲ್ಲಿಕಾರ್ಜುನ, ಮಾರುತಿ ಇದ್ದರು.

ಇಂದು ಮರುಳಾರಾಧ್ಯ ಶಿವಾಚಾರ್ಯ ಭಗವತ್ಪಾದರ ಪುಣ್ಯ ಸ್ಮರಣೆ

ಚಿತ್ರದುರ್ಗ: ಲಿಂಗೈಕ್ಯ ಶ್ರೀ ಮರುಳಾರಾಧ್ಯ ಶಿವಾಚಾರ್ಯ ಮಹಾಭಗವತ್ಪಾದರ 31 ನೇ ವರ್ಷದ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮವು ಮಾ.23ರ ಸೋಮವಾರ ನಗರದ ರಂಗಯ್ಯನ ಬಾಗಿಲ ಬಳಿಯಲ್ಲಿನ ಶ್ರೀ ಉಜ್ಜಯಿನಿ ಮಠದಲ್ಲಿ ನಡೆಯಲಿದೆ ಎಂದು ಉಜ್ಜಯಿನಿ ಮಠದ ಅಭಿಷೇಕ ದೇವರು ಹಾಗೂ ಕಾರ್ಯದರ್ಶಿ ಯು.ಎಂ.ಆರ್. ಈಶ್ವರ ಪ್ರಸಾದ್ ತಿಳಿಸಿದ್ದಾರೆ.

ಶ್ರೀಗಳ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದ ಅಂಗವಾಗಿ ಮಾ.23ರ ಬೆಳಿಗ್ಗೆ 5 ಗಂಟೆಯ ಬ್ರಾಹ್ಮೀ ಮಹೋರ್ತದಲ್ಲಿ ವಟುಗಳಿಗೆ ಲಿಂಗದೀಕ್ಷಾ ಕಾರ್ಯಕ್ರಮವೂ ವಿದ್ವಾನ್ ಡಾ. ವೀರೇಶ್ ಹೀರೇಮಠ ನೇತೃತ್ವದಲ್ಲಿ ನಡೆಯಲಿದೆ. ಇದೇ ಸಂದರ್ಭದಲ್ಲಿ ಮಠದ ಶಕ್ತಿದೇವತೆ ಚೌಡೇಶ್ವರಿ ಅಮ್ಮನವರ ಅಪ್ಪಣೆಯಂತೆ 10 ಗಂಟೆಗೆ 508 ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮವನ್ನು ನಡೆಸಲಾಗುವುದು. ಅಂದು ಲಿಂ ಜಗದ್ಗುರುಗಳ ಕರ್ತೃಗದ್ದುಗೆಗೆ ಹಾಗೂ ಶ್ರೀ ಮರುಳಸಿದ್ದೇಶ್ವರ ಸ್ವಾಮಿಗೆ ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ ನೆರವೇರಿಸಲಾಗುತ್ತದೆ.

ಮಧ್ಯಾಹ್ನ 12 ಗಂಟೆಗೆ ಜನಜಾಗೃತಿ ಮತ್ತು ಧರ್ಮಸಭಾ ಕಾರ್ಯಕ್ರಮ ನಡೆಯಲಿದ್ದು, ಇದರಲ್ಲಿ ಲಕ್ಷೇಶ್ವರದ ಕರೇವಾಡಿ ಮಠದ ಶ್ರೀ ಮಳೆ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು, ಮುನ್ನೂರಿನ ಓಂಕಾರೇಶ್ವರ ಮಠದ ಶ್ರೀರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಉಕ್ಕಡಗಾತ್ರಿಯ ಶ್ರೀ ಹಾಲಶಂಕರ ಶಿವಾಚಾರ್ಯ ಸ್ವಾಮಿಗಳು, ಬೀದರ್ ಜಿಲ್ಲೆಯ ಎಣುಕಲ್ಲುಗುಡ್ಡದ ಶ್ರೀವೀರಭದ್ರ ಮಹಾಸ್ವಾಮಿಗಳು, ದೇವದುರ್ಗದ ಶಿಖರಮಠದ ಶ್ರೀ ಸಿದ್ಧರಾಮ ಶಿವಾಚಾರ್ಯ ಮಹಾಸ್ವಾಮಿಗಳು ಭಾಗವಹಿಸಲಿದ್ದಾರೆ.

ಸಂಸದ ಗೋವಿಂದ ಕಾರಜೋಳ, ಸಚಿವ ಡಿ.ಸುಧಾಕರ್, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಶಾಸಕರಾದ ಕೆ.ಸಿ. ವೀರೇಂದ್ರ, ಮಾಜಿ ಶಾಸಕರಾದ ಎಸ್.ಕೆ. ಬಸವರಾಜನ್, ಜ್ಯೋತಿ ವಿಜಯ ಕುಮಾರ್, ನಗರಸಭೆಯ ಕಛೇರಿ ವ್ಯವಸ್ಥಾಪಕರಾದ ಟಿ. ಜಯಪ್ಪ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಜಿ.ಟಿ.ಸುರೇಶ್, ತಿಪ್ಪಕ್ಕ, ನಿವೃತ್ತ ಶಿಕ್ಷಕ ಆರ್.ಆರ್.ಚಂದ್ರಶೇಖರಪ್ಪ, ಜಂಗಮ ಸಮಾಜ ಅಧ್ಯಕ್ಷ ಮಲ್ಲಿಕಾರ್ಜುನಯ್ಯ, ನಿರಂಜನ ದೇವರಮನಿ ಆಗಮಿಸಲಿದ್ದಾರೆ.

ಪುಸ್ತಕಗಳನ್ನು ಓದುವುದರಿಂದ ಜ್ಞಾನ ಹೆಚ್ಚಾಗುತ್ತದೆ : ಸಾಹಿತಿ ಡಾ.ಲೋಕೇಶ್ ಅಗಸನಕಟ್ಟೆ

ಚಿತ್ರದುರ್ಗ: ಪುಸ್ತಕಗಳನ್ನು ಓದುವುದರಿಂದ ಜ್ಞಾನ ಹೆಚ್ಚಾಗುತ್ತದೆ. ಹಾಗಾಗಿ ಲೇಖಕರು ಹೊಸ ಹೊಸ ವಿಚಾರಗಳನ್ನು ಇಟ್ಟುಕೊಂಡು ಪುಸ್ತಕಗಳನ್ನು ಬರೆಯಬೇಕು ಎಂದು ಎಂದು ಸಾಹಿತಿ ಡಾ. ಲೋಕೇಶ ಅಗಸನಕಟ್ಟೆ ತಿಳಿಸಿದರು.

ಕಟ್ಟೆಗೆಳೆಯರ ಬಳಗದ ವತಿಯಿಂದ ನಗರದ ಸರ್ಕಾರಿ ನೌಕರ ಭವನದಲ್ಲಿ ಆಯೋಜಿಸಿದ್ದ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ ಪಡೆದ ಡಾ ಕಲಮರಹಳ್ಳಿ ಮಲ್ಲಿಕಾರ್ಜುನ ಅವರ ಸಂಶೋಧನಾ ಗ್ರಂಥ ಕಾಡುಗೊಲ್ಲ ಬುಡಕಟ್ಟು ಕುಲ ಕಥನ ಮತ್ತು ಡಾ.ಬಿ.ಎಂ.ಗುರುನಾಥ್ ಅವರ ಕವನಸಂಕಲನ ನಕ್ಷತ್ರ ತಬ್ಬಿ ಮಲಗಿದ ಹೊತ್ತು ಪುಸ್ತಕಗಳ ಕುರಿತು ಅಭಿನಂದನಾ ಸಮಾರಂಭದಲ್ಲಿ ಕವನ ಸಂಕಲನ ಕುರಿತು ಅವರು ಮಾತನಾಡಿದರು.

ಡಾ.ಬಿ.ಎಂ.ಗುರುನಾಥ್ ಅವರ ಸೂಕ್ಷ್ಮ ಸಂವೇದನೆ, ತನ್ನ ಅಂತರಾತ್ಮದ ಅಭಿಪ್ರಾಯಗಳನ್ನು ಅತ್ಯಂತ ಸ್ಪುಟವಾಗಿ ಚಿತ್ರಿಸಿದ್ದಾರೆ. ತಮ್ಮ ಬದುಕು ಬವಣೆ ತನ್ನ ಸುತ್ತಲಿನ ಸಾಮಾಜಿಕ ಸ್ಥಿತಿಗತಿಗಳನ್ನು ಕವನದ ಮೂಲಕ ಬರೆದಿದ್ದಾರೆ. ಒಬ್ಬ ಕವಿಗೆ ಇರಬೇಕಾದ ಸೂಕ್ಷ್ಮತೆಯನ್ನು ಇಲ್ಲಿ ಚಿತ್ರಿದಸಿದ್ದಾರೆ ಎಂದರು.

ಲೇಖಕ ಡಾ.ಕಲಮರಹಳ್ಳಿ ಮಲ್ಲಿಕಾರ್ಜುನ ಅವರ ಸಂಶೋಧನಾ ಗ್ರಂಥ ಕಾಡುಗೊಲ್ಲ ಬುಡಕಟ್ಟು ಕುಲ ಕಥನ ಪುಸ್ತಕ ಕುರಿತು ವಿಮರ್ಶಕಿ ತಾರಿಣಿ ಶುಭದಾಯಿನಿ ಮಾತನಾಡಿ, ಬುಡಕಟ್ಟು ಸಮುದಾಯದವರ ಸಾಮಾಜಿಕ, ಶೈಕ್ಷಣಿಕ, ಪೌರಾಣಿಕ, ನೈತಿಕ ಹಾಗೂ ತಮ್ಮ ನೆಲಮೂಲ ಸಂಸ್ಕೃತಿಯನ್ನು ಈ ಕೃತಿ ನಮಗೆ ಪರಿಚಯಿಸುತ್ತದೆ ಎಂದು ಹೇಳಿದರು.

ಸಾಮಾನ್ಯವಾಗಿ ಮಲೆಮಹದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಯತ್ತಪ್ಪ, ಈರಣ್ಣ ಕರಡಿಬುಳ್ಳಪ್ಪ ಈ ಎಲ್ಲಾ ಸಾಂಸ್ಕೃತಿಕ ವೀರರ ಸಮಾಜೋಪಯೋಗಿ ಕಾರ್ಯಗಳು ಮತ್ತು ಅವರ ಮಾದರಿಯಾದಂತಹ ಜೀವನ ಕ್ರಮದ ಹಿನ್ನೆಲೆ ಇದೆ. ಇಂದು ಬುಡಕಟ್ಟು ಜನಾಂಗವಾದ ಕಾಡುಗೊಲ್ಲರು ಇಂದಿಗೂ ತಮ್ಮ ಹಟ್ಟಿಗಳಲ್ಲಿ ತಮ್ಮ ಪೌರಾಣಿಕ ಇತಿಹಾಸದ ಜೀವನ ಕ್ರಮವನ್ನು ರೂಢಿಸಿಕೊಂಡು ಬದುಕುತ್ತಿದ್ದಾರೆ. ತಮ್ಮದೇ ಆದ ವಿಶಿಷ್ಟ ಬದುಕನ್ನು ಸಾಗಿಸುವುದನ್ನು ತುಂಬಾ ಸೂಕ್ಷ್ಮವಾಗಿ ಲೇಖಕರು ನಮಗೆ ತಿಳಿಸಿದ್ದಾರೆ. ಶಿಷ್ಟ ಮತ್ತು ಬುಡಕಟ್ಟು ಬದುಕಿನ ರೀತಿಯನ್ನು ಈ ಕೃತಿಯಲ್ಲಿ ಕಾಣಬಹುದು ಇಂದಿಗೂ ಗೊಲ್ಲರು ತಮ್ಮ ಕುಲದಲ್ಲಿ ಹಸು, ಕರು, ಕುಲ ದೇವರು, ಮನೆದೇವರುಗಳ ಜತೆಗೆ ತಮ್ಮ ಸಾಂಸ್ಕೃತಿಕ ವೀರರನ್ನೇ ದೇವರುಗಳೆಂದು ಪೂಜಿಸುವ ಕ್ರಮವಿದೆ ಇಂದಿಗೂ ಕೂಡ ಇತರೆ ಸಮುದಾಯದವರ ಜತೆಗೆ ಬೆರೆಯದೇ ತಮ್ಮ ಹಟ್ಟಿಯಲ್ಲಿ ಕಳ್ಳಿಗುಡಿ ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸಿಸುವುದನ್ನು ಕಾಣಬಹುದು ಎಂದು ಹೇಳಿದರು.

ಸಂಪತ್‌ಕುಮಾರ್ ಮಾತನಾಡಿ, ನಗರದ ಸಮಾನ ಮನಸ್ಕರು ಸೇರಿಕೊಂಡು ಕಟ್ಟೇಗೆಳೆಯರ ಬಳಗ ರಚಿಸಿಕೊಂಡಿದ್ದೇವೆ. ಈ ಬಳಗದ ಉದ್ದೇಶ ನಮ್ಮ ಸುತ್ತಲಿನ ಸಾಹಿತ್ಯ ಸಂಸ್ಕೃತಿ, ಇತಿಹಾಸ, ವಿವಿಧ ಸಮುದಾಯಗಳ ಉದಯೋನ್ಮುಖ ಪ್ರತಿಭೆಗಳನ್ನು ಹೊರಗೆಳೆದು ಪ್ರೋತ್ಸಾಹಿಸುವುದೇ ಈ ಬಳಗದ ಗುರಿ ಎಂದರು. ಸಿ.ಎಚ್.ರೇವಣ್ಣ, ಮಂಜುನಾಥ, ಶಿವಣ್ಣ, ಸಾಯಿಪ್ರಸಾದ್, ಸಂತೋಷ್, ರಾಘವೇಂದ್ರ, ರವಿಶಂಕರ್, ಪಿ.ಎಂ.ಗುರುನಾಥ್ ಭಾಗವಹಿಸಿದ್ದರು.

ಮಳೆಯಿಂದ ಮಾವಿನ ಬೆಳೆ ಕುಸಿತ ಭೀತಿ

ಚಿತ್ರದುರ್ಗ: ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಅಕಾಲಿಕ ಮಳೆಯಿಂದ ಮಾವಿನ ಕಾಯಿಗಳು ಉದುರಿ ವ್ಯಾಪಕ ಹಾನಿಯಾಗಿದೆ. ಅದರಲ್ಲೂ ಹೊಳಲ್ಕೆರೆ ತಾಲೂಕಿನಲ್ಲಿ ಹೆಚ್ಚು ನಷ್ಟವಾಗಿದೆ. ಮೊದಲೇ ಮಾವಿನ ಬೆಳೆ ವಿಸ್ತೀರ್ಣ ಕಡಿಮೆ ಆಗುತ್ತಿದ್ದು ಇದರಿಂದ ಈ ಬಾರಿ ಮತ್ತಷ್ಟು ಇಳುವರಿ ಕುಸಿತ ಆಗುವ ಸಾಧ್ಯತೆ ಇದೆ.

ಕಳೆದ 25 ವರ್ಷಗಳಿಂದ ತಾಲೂಕಿನ ಬಿ.ದುರ್ಗ, ಕಸಬಾ, ತಾಳ್ಯ ಹೋಬಳಿಗಳಲ್ಲಿ ಮಳೆಯಾಶ್ರಿತ ಬೆಳೆಯಾಗಿ 500 ಎಕರೆಯಲ್ಲಿ ಹತ್ತು ಸಾವಿರಕ್ಕೂ ಅಧಿಕ ಮಾವಿನ ಗಿಡ ಬೆಳೆಯಲಾಗುತ್ತಿದ್ದು, ಕಳೆದ ಐದು ವರ್ಷದಲ್ಲಿ ಇದರ ವಿಸ್ತೀರ್ಣ ತೋಟಗಾರಿಕೆ ಅಂಕಿ ಅಂಶಗಳ ಪ್ರಕಾರ 2018-19 ರಲ್ಲಿ 1354 ಹೆಕ್ಟೇರಿಗೆ ಕುಸಿತ ಕಂಡು ಈಗ 2024-25ಕ್ಕೆ 439.32 ಹೆಕ್ಟೇರ್ ಪ್ರದೇಶಕ್ಕಿಳಿದಿದೆ.

ತಾಲೂಕಿನ ಬಹುತೇಕ ರೈತರು ನಾಟಿ ಮಾಡಿ ಐದಾರು ವರ್ಷಗಳವರೆಗೆ ಅಂತರ ಬೆಳೆಯಾಗಿ ರಾಗಿ, ಮೆಕ್ಕೆಜೋಳ ಬೆಳೆಯುತ್ತಾರೆ. ನಂತರದ ದಿನಗಳಲ್ಲಿ ಅಂತರ ಬೆಳೆ ಬೆಳೆಯಲು ಸಾಧ್ಯವಾಗದ ಕಾರಣ ಮಾವು ಬೆಳೆಯನ್ನೆ ನೆಚ್ಚಿರುತ್ತಾರೆ. ನಮ್ಮ ಭಾಗದಲ್ಲಿ ಡಿಸೆಂಬರ್, ಜನವರಿಯಲ್ಲಿ ಹೂವು ಆರಂಭವಾಗುತ್ತದೆ. ಆಗ ಇಬ್ಬನಿಕ್ಕೆ ಸಿಲುಕಿ ಹೂವು ಉದುರುತ್ತದೆ. ಇನ್ನು ಕಾಯಿ ಕಟ್ಟುವ ಸಂದರ್ಭದಲ್ಲಿ ಮಳೆ ಆರಂಭವಾಗಿ ಆಲಿಕಲ್ಲು ಮಳೆಯಾದರೆ ಕಾಯಿ ಉದುರುತ್ತದೆ. ಮಾವು ಗೇಣಿ ಪಡೆದ ಗೇಣಿದಾರರು ಹೂವು, ಕಾಯಿ, ಹಣ್ಣು ಎಲ್ಲಾ ಹಂತದಲ್ಲಿಯೂ ರಾಸಾಯನಿಕ ಸಿಂಪಡಿಸಿ ಆದಾಯ ಪಡೆಯುತ್ತಾರೆ.

2.18 ಕೋಟಿ ರೂ. ವೆಚ್ಚದ ಕಟ್ಟಡ ಕಾಮಗಾರಿಗೆ ಶಾಸಕ ಚಂದ್ರಪ್ಪ ಭೂಮಿಪೂಜೆ

ಭರಮಸಾಗರದಲ್ಲಿ ಅಗ್ನಿಶಾಮಕ ಠಾಣೆ ನಿರ್ಮಾಣ

ಚಿತ್ರದುರ್ಗ: ಬೇಸಿಗೆಯಲ್ಲಿ ಆಕಸ್ಮಿಕ ಬೆಂಕಿ ತಗಲುವುದರಿಂದ ರೈತರು ನಷ್ಟ ಅನುಭವಿಸಬಾರದು. ಬೆಂಕಿ ಅನಾಹುತ ತಪ್ಪಿಸಲು ಅಗ್ನಿಶಾಮಕ ಠಾಣೆ ಮಂಜೂರು ಮಾಡಿಸಿದ್ದೇನೆಂದು ಶಾಸಕ ಎಂ.ಚಂದ್ರಪ್ಪ ತಿಳಿಸಿದರು.

ಚಿತ್ರದುರ್ಗ ತಾಲ್ಲೂಕಿನ ಭರಮಸಾಗರದಲ್ಲಿ 2.18 ಕೋಟಿ ರೂ. ವೆಚ್ಚದಲ್ಲಿ 2 ನೇ ಅಗ್ನಿಶಾಮಕ ಠಾಣೆ ನಿರ್ಮಾಣ ಕಾಮಗಾರಿಗೆ ಭಾನುವಾರ ಭೂಮಿಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಹೋಬಳಿ ಮಟ್ಟದಲ್ಲಿ ಅಗ್ನಿಶಾಮಕ ಠಾಣೆ ನಿರ್ಮಾಣ ಮಾಡುವುದು ಕಷ್ಟ, ಆದರೂ ಸರ್ಕಾರದಿಂದ ಮಂಜೂರು ಮಾಡಿಸಿದ್ದೇನೆ. ಬೇಸಿಗೆ ಕಾಲದಲ್ಲಿ ಬಣವೆ, ಹೊಲ, ತೋಟಗಳಿಗೆ ಬೆಂಕಿ ಬಿದ್ದು, ರೈತರು ನಷ್ಟ ಅನುಭವಿಸುವುದನ್ನು ನೋಡಿದ್ದೇನೆ. ಅದಕ್ಕಾಗಿ ಮತ್ತೊಂದು ಅಗ್ನಿಶಾಮಕ ಠಾಣೆಯನ್ನು ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು.

ರೈತರಿಗೆ ಅತ್ಯವಶ್ಯಕವಾಗಿರುವ ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಕೆಲಸ ಮಾಡಿದ್ದೇನೆ. 250 ರಿಂದ



300 ಕೋಟಿ ರೂ.ಗಳನ್ನು ಖರ್ಚು ಮಾಡಿ ವಿದ್ಯುತ್ ಪವರ್ ಸ್ಟೇಷನ್ ಕಟ್ಟಿಸುತ್ತಿದ್ದೇನೆ. ಸೂಳೆಕೆರೆ ನೀರು ಎಲ್ಲೆಲ್ಲಿ ಸರಬರಾಜಿಲ್ಲವೋ ಅಂತಹ ಹಳ್ಳಿಗಳಿಗೆ ಹಿರಿಯೂರಿನ ವಾಣಿವಿಲಾಸಸಾಗರದಿಂದ ನೀರು ಕೊಟ್ಟಿದ್ದೇನೆ. ಯಾವ ಊರಿಗೆ ಏನು ಕೊಟ್ಟರೆ ರೈತರಿಗೆ, ಜನಸಾಮಾನ್ಯರಿಗೆ ಒಳ್ಳೆಯದಾಗುತ್ತದೆನ್ನುವುದನ್ನು ಅರ್ಥಮಾಡಿಕೊಂಡು ಕೆಲಸ ಮಾಡುತ್ತಿದ್ದೇನೆ ಎಂದರು.

ಜಿಲ್ಲೆಯಲ್ಲಿಯೇ ಎಲ್ಲೂ ಇಲ್ಲದಂತ ಸಂದರ್ಭದಲ್ಲಿ ಪ್ರಥಮ ಬಾರಿಗೆ ಭರಮಸಾಗರದಲ್ಲಿ ಐ.ಟಿ.ಐ.ಕಾಲೇಜು ಕಟ್ಟಿಸಿದ್ದೇನೆ. ಶಾಲಾ-ಕಾಲೇಜು ಕಟ್ಟಡ, ರಸ್ತೆ, ಕುಡಿಯುವ ನೀರು, ಹೀಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಿದ್ದೇನೆ. ಮುಂದಿನ ಶೈಕ್ಷಣಿಕ ವರ್ಷದಿಂದ ಪಿ.ಯು.ಸಿ.ಕಾಲೇಜು ಕೂಡ ಆರಂಭಿಸಲಾಗುವುದು ಎಂದು ಹೇಳಿದರು.

ಭರಮಸಾಗರ ಬಿಜೆಪಿ.ಮಂಡಲ ಅಧ್ಯಕ್ಷ ಎನ್.ಟಿ.ಬಸವರಾಜ್, ಮಂಡಲದ ಮಾಜಿ ಅಧ್ಯಕ್ಷ ಶೈಲೇಶ್, ಡಿ.ಎಸ್.ಪ್ರವೀಣ್‌ಕುಮಾರ್, ಮಂಜುನಾಥ್, ಕಲ್ಲೇಶ್, ಮೋಹನ್, ರಾಜಣ್ಣ, ಕೊಟ್ರೇಶ್, ಲೋಲಾಕ್ಷಮ್ಮ, ತಿಪ್ಪೇಶ್, ಅಂಜಿ, ಅರುಣ್‌ಕುಮಾರ್, ತಿಪ್ಪಣ್ಣ, ಬಸವರಾಜ್, ಸೋಮಶೇಖರ್, ನಾಗೇಶ್ ಇದ್ದರು.

ಮುರುಘಾಮಠದಲ್ಲಿ ನಾಲ್ಕು ದಿನಗಳ ಕಾಲ ಜರುಗಿದ ಕಾರ್ಯಕ್ರಮ

ರಂಜಿಸಿದ ನೂತನ ವರ್ಷಾಚರಣೆಯ ವಚನ ಗಾಯನ

ಚಿತ್ರದುರ್ಗ: ಚಿತ್ರದುರ್ಗದ ಜಗದ್ಗುರು ಮುರುಘರಾಜೇಂದ್ರ, ಬೃಹನ್ಮಠದ ಮೂಲಪುರುಷರೂ ಆದ ಅಲ್ಲಮಪ್ರಭು ದೇವರ ಜಯಂತಿಯೂ ಬರುವುದರಿಂದ ಚಿತ್ರದುರ್ಗದ ಮುರುಘಾಮಠದಲ್ಲಿ ಮಾರ್ಚ್ 17 ರಿಂದ 20 ರವರೆಗೆ ನಾಲ್ಕು ದಿನಗಳ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ವಿಶೇಷವಾಗಿ ಅಲ್ಲಮಪ್ರಭು ದೇವರ ವ್ಯಕ್ತಿತ್ವ ಸಾಧನೆಯ ಕುರಿತಾಗಿ ರಾಜ್ಯಮಟ್ಟದ ಸ್ವರಚಿತ ಕವನ ವಾಚನವು ನಡೆದು ವಿಶೇಷ ಗಮನ ಸೆಳೆಯಿತು.

ಮುಖ್ಯವಾಗಿ ವಿಶೇಷ ಕಾರ್ಯಕ್ರಮ ಸಮಾರೋಪ ಸಮಾರಂಭವು ಮಠದ ಮೂಲಕರ್ತೃ ಮುರಿಗೆಯ ಶಾಂತವೀರ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಲೀಲಾವಿಶ್ರಾಂತಿ ತಾಣದ ಸನ್ನಿಧಾನದಲ್ಲಿ ಅಲ್ಲಮಪ್ರಭುಗಳ ವ್ಯಕ್ತಿತ್ವ ಸಾಧನೆಯ ಜತೆಗೆ ಬಸವಾದಿ ಶಿವಶರಣರ ತತ್ವಚಿಂತನೆಯ ಬಗೆಗೆ ಬೆಳಕು ಚೆಲ್ಲುವ ಸಮಾರಂಭ ಅದರೊಂದಿಗೆ ಅಲ್ಲಮಪ್ರಭುಗಳು ಸೇರಿದಂತೆ ನೂತನ ವರ್ಷದ ಯುಗಾದಿ ಬಗ್ಗೆ ಕವಿಗಳ ರಚನೆಯ ಕವನ ಸೇರಿದಂತೆ ಶ್ರೋತೃವರ್ಗಕ್ಕೆ ವಚನ ಗಾಯನ ಕೇಳಿಸುವ ರಸ ನಿಮಿಷಗಳಿಗೆ ಸಾಕ್ಷಿಯಾಯಿತು.

ಗೋಧೂಳಿಯ ಸಂದರ್ಭ, ಸೂರ್ಯ ಜಾರಿ ಚಂದ್ರ ಮೇಲೆ ಬರುವ ಹೊತ್ತಿಗೆ ಅಲ್ಲಲ್ಲಿನ ಗಿಡ ಮರಗಳಲ್ಲಿನ ಪುಷ್ಪ ಸುಗಂಧ ಬೀರಿ ಸುವಾಸನೆ ಮೂಗಿಗೆ ತಾಗಿಸುತ್ತಿದ್ದವು. ಇದೇ ವೇಳೆಗೆ ವಚನ ಸಂಗೀತದ ಅಲೆಯೂ ತೇಲಿ ಭಕ್ತಿ ಭಾವದಿಂದ ಆಲಿಸುತ್ತಿದ್ದ ಶ್ರೋತೃವರ್ಗದ ಮನಕೆ ಮುದ ನೀಡುತ್ತಿತ್ತು. ಈ ನಡುವೆ ಮಠದ ಆವರಣ ತಳಿರು ತೋರಣಗಳಿಂದ ಶೋಭಿಸುತ್ತಿದ್ದರೆ ಮಠದ ಕಾರ್ಯಕರ್ತರು ಬಂದ ಅಭಿಮಾನಿ ಭಕ್ತರುಗಳಿಗೆ ಪ್ರೀತಿಯಿಂದ ಸ್ವಾಗತಿಸಿ



ಪಾನಕ ಹಾಗೂ ಕೋಸಂಬರಿ ಪ್ರಸಾದವನ್ನು ನೀಡಿ ಕಳಿಸುತ್ತಿದ್ದರು. ಅದನ್ನು ಸವಿದವರು ಮಠದ ಮೂಲಕರ್ತೃವಿನ ದರ್ಶನ ಪಡೆದು ಮೇಲುಪ್ಪರಿಗೆಯಲ್ಲಿ ನಡೆಯುತ್ತಿದ್ದ ಸಂಗೀತ ಸುಧೆ ಕೇಳಲು ಧಾವಿಸುತ್ತಿದ್ದರು.

ಕೇಳುತ್ತ ಕೇಳುತ್ತ ಕತ್ತಲಾವರಿಸುತ್ತಿದ್ದಂತೆ ಪಶ್ಚಿಮ ದಿಗಂತದೆಡೆಗೆ ಎಲ್ಲರ ಕಣ್ಣು ಮನ ನೆಟ್ಟು ತದೇಕ ಚಿತ್ತದಿಂದ ಚಂದ್ರದರ್ಶನ ಮಾಡಿದವರನ್ನು ಎಲ್ಲಿ ಎಲ್ಲಿ ಎಂದು ಕೇಳುತ್ತ ಅಗೋ ಅಲ್ಲಿ ಕೆಂಪು ಮೋಡದ ಮರ ಗಿಡದ ಕೆಳಗೆ ಹಾಗೆ ನೋಡ್ತಾ ಬನ್ನಿ ಎಂದು ಹೇಳುತ್ತಿದ್ದ ಪರಿ. ಈ ನಡುವೆ ಜಮುರಾ ಕಲಾಲೋಕದ ಹಿರಿಯ ಕಲಾವಿದರೂ ಗಾನಯೋಗಿ ಸಂಗೀತ ಬಳಗದ ಅಧ್ಯಕ್ಷರಾದ ವಿದ್ವಾನ್ ತೋಟಪ್ಪ ಉತ್ತಂಗಿ ಅವರು ತಮ್ಮದೇ ರಾಗಸಂಯೋಜನೆಯ ಹತ್ತಾರು ವಚನ ತತ್ವಪದ ಹಾಗೂ ಕವನಗಳನ್ನು ಹಾಡಿದರು. ಆ ಗೀತೆಗಳ ರಚನೆ, ರಾಗ ಮತ್ತು ಹಾಡಿದವರ ಪಟ್ಟಿ ಈ ರೀತಿ ಇದೆ. ಮುಖ್ಯ ಕಲಾವಿದರು ತೋಟಪ್ಪ ಉತ್ತಂಗಿ ಅವರೊಂದಿಗೆ ಕರಿಬಸಪ್ಪ ತಬಲಾ ಸಾಥ್ ನೀಡಿದರು. ಜ್ಞಾನಮೂರ್ತಿ ಟಿ.ಪಿ., ಬಸವರಾಜ ಕಟ್ಟಿ, ವರದಾ ಶಂಕರ, ಹೆಚ್.ಕೆ. ಮಮತ, ಜ್ಯೋತಿ ಗಿರೀಶ್, ಸುಮ ರಾಜಶೇಖರ್, ರೇಖಾ ವಿಜಯಕುಮಾರ್, ಲತಾ ಕಟ್ಟಿ, ಮಂಗಳಾ ವರದಾಶಂಕರ್ ಗಾಯನಕ್ಕೆ ಧ್ವನಿ ನೀಡಿದರು.



ದಾವಣಗೆರೆ ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ತಾಲೂಕಿನ ಶಿವನಹಳ್ಳಿ ಸಮೀಪವಿರುವ ದಕ್ಷಿಣ ಕೇದಾರ ಧಾಮ ಮಠಕ್ಕೆ ಭೇಟಿ ನೀಡಿ, ಕೇದಾರ ಪಂಚಪೀಠದ ಉತ್ತರಾಧಿಕಾರಿಗಳಾದ ಡಾ. ಶ್ರೀಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿಯವರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಬಿಜೆಪಿ ದಾವಣಗೆರೆ ವಿಭಾಗ ಪ್ರಭಾರಿ ಮೇಘರಾಜ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಪಕ್ಷದ ಮುಖಂಡರಾದ ಹಾಲಪ್ಪ, ಜಯಪ್ರಕಾಶ್ ಮಾಗಿ, ಶಿವನಗೌಡ ಪಾಟೀಲ್, ಫಣಿಯಾಪುರ ಲಿಂಗರಾಜ್, ಪ್ರವೀಣ್ ಇನ್ನಿತರರಿದ್ದರು.

ಕಿರುಸುದ್ದಿ

ಇಂದು ಬಿಜೆಪಿ ಅಭ್ಯರ್ಥಿ ನಾಮಪತ್ರ ಸಲ್ಲಿಕೆ

• **ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ಟಿ. ದಾಸಕರಿಯಪ್ಪ ಮಾ.23ರ ಸೋಮವಾರ ಬೃಹತ್ ಮೆರವಣಿಗೆ ಮೂಲಕ ತೆರಳಿ, ನಾಮಪತ್ರ ಸಲ್ಲಿಸಲಿದ್ದಾರೆ. ಬೆಳಗ್ಗೆ 10 ಗಂಟೆಗೆ ನಗರದೇವತೆ ಶ್ರೀದುರ್ಗಾಂಬಿಕಾ ದೇವಿಗೆ ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಿದ ನಂತರ ನಗರದ ಪ್ರಮುಖ ರಸ್ತೆಗಳ ಮಾರ್ಗವಾಗಿ ಚುನಾವಣಾಧಿಕಾರಿ ಕಚೇರಿಯಾದ ಪಾಲಿಕೆ ಕಚೇರಿಗೆ ತೆರಳಿ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸುವರು. ಪಕ್ಷದ ನಾಯಕರಾದ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್, ಡಾ.ಜಿ.ಎಂ. ಸಿದ್ದೇಶ್ವರ್, ಎಸ್.ಎ. ರವೀಂದ್ರನಾಥ, ಬಿ. ಶ್ರೀರಾಮುಲು, ಗೋವಿಂದ ಕಾರಜೋಳ, ಶಾಸಕ ಬಿ.ಪಿ. ಹರೀಶ, ಎಂ.ಪಿ. ರೇಣುಕಾಚಾರ್ಯ, ಭಾರತಿ ಶೆಟ್ಟಿ, ಶಿವನಗೌಡ ನಾಯ್ಕ ಸೇರಿದಂತೆ ಪಕ್ಷದ ನಾಯಕರು ಹಾಗೂ ಸುಮಾರು 20 ಸಾವಿರಕ್ಕೂ ಅಧಿಕ ಕಾರ್ಯಕರ್ತರು ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಇಂದು ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ಸಲ್ಲಿಕೆ

• **ದಾವಣಗೆರೆ:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಮಾ.23ರ ಮಧ್ಯಾಹ್ನ 3 ಗಂಟೆಗೆ ನಾಮಪತ್ರ ಸಲ್ಲಿಸಲಿದ್ದಾರೆ. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಸೇರಿದಂತೆ ಪ್ರಮುಖರು ಪಾಲ್ಗೊಳ್ಳುವರು.

ಬೇಸರ ಸಹಜ, ಶೀಘ್ರ ವಿಶ್ವಾಸಕ್ಕೆ ತಗೆದುಕೊಳ್ಳುವೆವು : ಸಮರ್ಥ್

• **ದಾವಣಗೆರೆ:** ಒಂದು ಕ್ಷೇತ್ರಕ್ಕೆ ಅನೇಕ ಆಕಾಂಕ್ಷಿಗಳು ಇದ್ದೇ ಇರುತ್ತಾರೆ. ಅಲ್ಪಸಂಖ್ಯಾತರು 30 ವರ್ಷ ನಮ್ಮ ತಾತನವರ ಜೊತೆಗೆ ನಿಕಟ ಸಂಪರ್ಕ ಹೊಂದಿದ್ದರು. ನಾವು ಕೂಡ ಅವರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದೇವೆ. ಚುನಾವಣೆಯಲ್ಲಿ ಒಂದಷ್ಟು ಬೇಸರಗಳು ಮೂಡುವುದು ಸಹಜ. ಶೀಘ್ರದಲ್ಲಿಯೇ ಅವೆಲ್ಲಾ ಸರಿಯಾಗಲಿವೆ. ನಾವೆಲ್ಲಾ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ದುರ್ಗಮ್ಮನ ಗುಡಿಯೊಳಗೆ ಹೋಗಿ ಅಮ್ಮನಿಗೆ ಕೈ ಮುಗಿಯುತ್ತಿದ್ದಂತೆಯೇ ಅಧಿಕೃತವಾಗಿ ಟಿಕೆಟ್ ಘೋಷಣೆಯಾಗಿದ್ದು, ಇದು ಅತ್ಯಂತ ಶುಭ ಸೂಚನೆ. ಪ್ರತಿಸಲದಂತೆ ಈ ಬಾರಿಯೂ ದಾವಣಗೆರೆ ದಕ್ಷಿಣದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂದರು. ಚುನಾವಣೆಗೆ ಪ್ರಚಾರವನ್ನು ಈಗ ಆರಂಭಿಸುವುದಲ್ಲ, ಹುಟ್ಟಿನಿಂದಲೇ ನಾವು ಪ್ರಚಾರ ಆರಂಭಿಸಿದ್ದೇವೆ. ಎಲ್ಲರೊಂದಿಗೆ ಮೊದಲಿನಿಂದಲೂ ಒಡನಾಟ ಇಟ್ಟುಕೊಂಡಿದ್ದೇನೆ. ಹಾಗಾಗಿಯೇ ಪಕ್ಷ ನನ್ನನ್ನು ಗುರುತಿಸಿ ಟಿಕೆಟ್ ಕೊಟ್ಟಿದೆ. ಪಕ್ಷವು ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದು, ಗೆಲುವು ಸಾಧಿಸಬಲ್ಲವರನ್ನೇ ಆಯ್ಕೆ ಮಾಡಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಯುವಕರ ಭವಿಷ್ಯಕ್ಕಾಗಿ ನಾವು ಬದ್ಧರಾಗಿದ್ದೇವೆ ಎಂದು ತಿಳಿಸಿದರು. ಇದೇ ವೇಳೆ ಕುರುಬ ಸಮಾಜದ ಯುವಕರು ಸಮರ್ಥ್ ಶಾಮನೂರುಗೆ ಕಂಬಳಿ ಹೊದಿಸಿ ಸನ್ಮಾನಿಸಿದರು.

ಟಿಕೆಟ್ ತಪ್ಪಿದ್ದಕ್ಕೆ ಆಕ್ರೋಶ

• **ದಾವಣಗೆರೆ:** ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ತಪ್ಪಿದ್ದರಿಂದ ಆಕ್ರೋಶಗೊಂಡ ಮುಸ್ಲಿಮರು ಭಾನುವಾರ ಕೈಯಲ್ಲಿ ಕಪ್ಪು ಬಾವುಟಗಳನ್ನು ಹಿಡಿದು, ಜಸ್ಟೀಸ್ ಫಾರ್ ಮೈನಾರಿಟೀಸ್, ಜಸ್ಟೀಸ್ ಫಾರ್ ಅಹಿಂದ ಎಂಬ ಘೋಷಣೆ ಮೊಳಗಿಸುವ ಮೂಲಕ ಪ್ರತಿಭಟಿಸಿದರು. ನಗರದ ಅಕ್ತರ್ ರಜಾ ವೃತ್ತದಲ್ಲಿ ಮುಸ್ಲಿಮರು ಕಾಂಗ್ರೆಸ್ ಪಕ್ಷ ಹಾಗೂ ರಾಜ್ಯ ಮತ್ತು ರಾಷ್ಟ್ರೀಯ ನಾಯಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಮರು ಬಹುಸಂಖ್ಯಾತ ಮತದಾರರಿದ್ದಾರೆ. ಸುಮಾರು 75 ಸಾವಿರಕ್ಕೂ ಅಧಿಕ ಮುಸ್ಲಿಮ್ ಮತದಾರರಿದ್ದರೂ ಈವರೆಗೂ ನಮ್ಮ ಸಮುದಾಯಕ್ಕೆ ಟಿಕೆಟ್ ನೀಡಿಲ್ಲ. ಅಹಿಂದ ವರ್ಗಗಳ ಹೆಸರನ್ನು ಹೇಳಿಕೊಂಡೇ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನಾಯಕರಿಗೆ ಅಲ್ಪಸಂಖ್ಯಾತರು, ಹಿಂದುಳಿದವರು, ದಲಿತರು ಟಿಕೆಟ್ ನೀಡುವ ಮನಸ್ಸಿಲ್ಲ ಎಂದು ಅವರು ಕಿಡಿಕಾರಿದರು.

ಪುಟ್ಟಮ್ಮ ನಿಧನ



• **ತ್ಯಾವಣಿಗೆ:** ಗ್ರಾಮದ ನೆಟ್ಟೆಗಟ್ಟೆರ ದಿ.ಸಿದ್ದಪ್ಪ ಅವರ ಪತ್ನಿ ಪುಟ್ಟಮ್ಮ ಇವರು ಭಾನುವಾರ ನಿಧನ ಹೊಂದಿದರು. ಇವರಿಗೆ ಓರ್ವ ಪುತ್ರ ಇದ್ದಾರೆ. ಮೃತರ ಅಂತ್ಯಕ್ರಿಯೆ ಗ್ರಾಮದ ಜಮೀನಿನಲ್ಲಿ ಭಾನುವಾರ ಸಂಜೆ ನೆರವೇರಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ರಾಮಜ್ಯೋತಿ ರಥಯಾತ್ರೆ ಹುತಾತ್ಮ ಧರ್ಮವೀರರ ಮನೆಗೆ ಶ್ರೀನಿವಾಸ್ ಭೇಟಿ

• **ದಾವಣಗೆರೆ:** ರಾಮಜ್ಯೋತಿ ರಥಯಾತ್ರೆ ಸಂಧರ್ಭದಲ್ಲಿ ಹುತಾತ್ಮರಾದ ಧರ್ಮವೀರರ ಮನೆಗಳಿಗೆ ಭಾನುವಾರ ದಾವಣಗೆರೆ ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ಟಿ. ದಾಸಕರಿಯಪ್ಪ ಭೇಟಿ ನೀಡಿದರು.



ಹುತಾತ್ಮರಾದ ಶಿವಾಜಿರಾವ್ ಘಾಟಿ, ಆರ್.ಜಿ. ಶ್ರೀನಿವಾಸ್, ರಾಮಕೃಷ್ಣ ಸವಳಗಿ, ದುರುಗೆಪ್ಪ, ಅಂಬರೀಶ್, ಚಂದ್ರಶೇಖರರಾವ್ ಶಿಂಧೆ, ವಿಠ್ಠಲರಾವ್, ಚಿನ್ನಪ್ಪ ಅವರುಗಳ ಮನೆಗೆ ಭೇಟಿ ನೀಡಿದ ಶ್ರೀನಿವಾಸ ದಾಸಕರಿಯಪ್ಪ, ಕುಟುಂಬಸ್ಥರೊಂದಿಗೆ ಮಾತನಾಡಿ ಮತಯಾಚನೆ ಮಾಡಿದರು. ಇದೇ ವೇಳೆ ಕ್ಷೇತ್ರ ವ್ಯಾಪ್ತಿಯ ಬಸಾಪುರ ಹಾಗೂ ವಿವಿಧ ವಾರ್ಡ್‌ಗಳಲ್ಲಿ ಪಕ್ಷದ ಮುಖಂಡರ ಮತ್ತು ಸ್ಥಳೀಯರ ಮನೆಗಳಿಗೆ ಭೇಟಿ ನೀಡಿ ಮತಯಾಚನೆ ಮಾಡಿದರು.

ಈ ಸಂದರ್ಭದಲ್ಲಿ ಪಕ್ಷದ ಹಿರಿಯ ಮುಖಂಡರಾದ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಮಟ್ಟಿಕಲ್ಲು ಕರಿಬಸಪ್ಪ, ಶಿವನಗೌಡ ಪಾಟೀಲ್, ಬಾಲರಾಜ್, ಟಿಂಕರ್ ಮಂಜಣ್ಣ, ಚೇತನ ಶಿವಕುಮಾರ್, ಭಾಗ್ಯ ಪೀಸಾಳೆ ಇದ್ದರು.

ಬದಲಾವಣೆಗೆ ಉಪಚುನಾವಣೆ ಮುನ್ನುಡಿ; ರಾಜಶೇಖರ ವಿಶ್ವಾಸ
ಕಾಂಗ್ರೆಸ್ ತಿರಸ್ಕರಿಸುವುದು ನಿಶ್ಚಿತ

• **ದಾವಣಗೆರೆ:** ಕಾಂಗ್ರೆಸ್‌ನಿಂದಾಗಿ ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿರುವ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಈ ಬಾರಿ ಗೆಲ್ಲುವ ಮೂಲಕ ಬಿಜೆಪಿ ಹೊಸ ಇತಿಹಾಸ ನಿರ್ಮಾಣ ಮಾಡಲಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಎನ್. ರಾಜಶೇಖರ ವಿಶ್ವಾಸ ವ್ಯಕ್ತಪಡಿಸಿದರು.



ಉಪಚುನಾವಣೆ ದಕ್ಷಿಣ-ಕಣ

ಕಾಂಗ್ರೆಸ್ ನೀತಿ ಸಂಹಿತೆ ಉಲ್ಲಂಘಿಸಿದೆ: ಜಾಧವ್

ಮಾ.20ರಂದು ಅಲ್ಪಸಂಖ್ಯಾತ ಮತದಾರರಿಗೆ ಆಹಾರ ಕಿಟ್ ವಿತರಿಸುವ ಮೂಲಕ ಕಾಂಗ್ರೆಸ್ ಪಕ್ಷವು ನೀತಿ ಸಂಹಿತೆ ಉಲ್ಲಂಘಿಸಿದೆ. ಈ ಬಗ್ಗೆ ಕ್ಷೇತ್ರದ ಚುನಾವಣಾಧಿಕಾರಿಗೆ ದೂರು ನೀಡಿದ್ದೇವೆ. ಜಿಲ್ಲಾ ಉಸ್ತುವಾರಿ ಸಚಿವ, ಸಂಸದರು ಹಾಗೂ ಕಾಂಗ್ರೆಸ್ ಅಭ್ಯರ್ಥಿಯ ಭಾವಚಿತ್ರ, ಕಾಂಗ್ರೆಸ್ ಪಕ್ಷದ ಚಿಹ್ನೆ ಇರುವ ಕಿಟ್‌ನ್ನು ರಂಜಾನ್ ಹಬ್ಬಕ್ಕೆಂದು ಅಲ್ಪಸಂಖ್ಯಾತರಿಗೆ ಲೋಡ್ ಗಟ್ಟಲೇ ವಿತರಿಸಿದ್ದಾರೆ. ಅಕ್ಕಿ, ಶ್ಯಾವಿಗೆ, ಬೇಳೆ, ಸಕ್ಕರೆ ಇರುವ ಕಿಟ್ ವಿತರಿಸುವ ಮೂಲಕ ರಾಜ ಮಾರ್ಗದಲ್ಲಿ ಚುನಾವಣೆ ನಡೆಸಲಾಗದ ಕಾಂಗ್ರೆಸ್ ವಾಮಮಾರ್ಗದಲ್ಲಿ ಚುನಾವಣೆ ಗೆಲ್ಲಲು ಹೊರಟಿದೆ ಎಂದು ಆರೋಪಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಭಾನುವಾರ ಮಾಧ್ಯಮ ಕೇಂದ್ರ ಉದ್ಘಾಟನೆ ನಂತರ ಸುದ್ದಿಗಾರ ರೊಂದಿಗೆ ಮಾತನಾಡಿ, ಅಭಿವೃದ್ಧಿ ಕಾಣದ ದಾವಣಗೆರೆ ದಕ್ಷಿಣ ಕ್ಷೇತ್ರದ ಜನರು ಕಾಂಗ್ರೆಸ್ಸಿನಿಂದ ರೋಸಿ ಹೋಗಿದ್ದಾರೆ. ಇದೀಗ ಉಪ ಚುನಾವಣೆಯಲ್ಲಿ ಬದಲಾವಣೆಗೆ ಮುನ್ನುಡಿ ಬರೆಯಲಿದ್ದಾರೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದಿಂದ ಬಂದ ಅನುದಾನ, ಸ್ಮಾರ್ಟ್ ಸಿಟಿ ಯೋಜನೆ ಸೇರಿದಂತೆ ನಮ್ಮ ಸರ್ಕಾರಗಳಲ್ಲಿ ಆದ ಅಭಿವೃದ್ಧಿ ಕಾರ್ಯಗಳನ್ನು ಬಿಟ್ಟರೆ ಕಾಂಗ್ರೆಸ್ ಶಾಸಕರ ಅನುದಾನದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಆಗಿಲ್ಲ, ಉತ್ತಮ ಆಸ್ಪತ್ರೆ, ಶಾಲಾ-ಕಾಲೇಜು, ತುರ್ತು ಚಿಕಿತ್ಸಾ ಅಂಬ್ಯುಲೆನ್ಸ್, ಸರ್ಕಾರಿ ಆಸ್ಪತ್ರೆ ಯಾವುದೂ ಆಗದೇ ಮತದಾರರು ಈ ಸಲ ಬದಲಾವಣೆಗೆ ಮುಂದಾಗಿದ್ದಾರೆ ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಎರಡೂವರೆ ವರ್ಷಗಳಿಂದ ದಾವಣಗೆರೆ ದಕ್ಷಿಣದಲ್ಲಿ ಕಾನೂನು, ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಹಿಂದೂ ಹಬ್ಬ, ಮೆರವಣಿಗೆಗಳನ್ನು ಮಾಡಲಾಗದಂತಹ ವಾತಾವರಣ ನಿರ್ಮಾಣವಾಗಿದೆ. ಹಳೆ ಭಾಗದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸರ್ಕಾರ, ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿವೆ. ದಕ್ಷಿಣದ ಮತದಾರರು ಉಪ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸಾರಾಸಗಟಾಗಿ ತಿರಸ್ಕರಿಸಲಿದ್ದು, ರಾಜ್ಯ ಮತ್ತು ರಾಷ್ಟ್ರೀಯ ನಾಯಕರ ನೇತೃತ್ವದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ ಜಯ ಸಾಧಿಸಲಿದ್ದಾರೆ ಎಂದು ಅವರು ತಿಳಿಸಿದರು.

ಉಪ ಚುನಾವಣೆಯಲ್ಲಿ ಅಭ್ಯರ್ಥಿ ಆಯ್ಕೆಗೆ ಕಾಂಗ್ರೆಸ್ಸಿನ ರಾಜ್ಯ, ರಾಷ್ಟ್ರೀಯ ನಾಯಕರು ಬೆಂಗಳೂರಿನಲ್ಲಿ ಹರಸಾಹಸ ಮಾಡಿದ್ದು, ಕಾಂಗ್ರೆಸ್ ಪಕ್ಷದಲ್ಲಿ ಪ್ರಜಾಪ್ರಭುತ್ವ ಇದೆಯೇ ಅಥವಾ ಕೇವಲ ಒಂದು ಕುಟುಂಬಕ್ಕಷ್ಟೇ ಸೀಮಿತವೇ ಎಂಬುದನ್ನು ಪ್ರತಿಯೊಂದು ಸಮಾಜದವರೂ ಗಂಭೀರವಾಗಿ ಆಲೋಚಿಸಬೇಕಾಗಿದೆ. ಕಾಂಗ್ರೆಸ್ಸಿನಲ್ಲಿ ಆಗುತ್ತಿರುವ ಬೆಳವಣಿಗೆಗಳು ಸ್ವತಃ ಕಾಂಗ್ರೆಸ್ಸಿನ ಕಾರ್ಯಕರ್ತರನ್ನೇ ಭ್ರಮನಿರಸನಗೊಳಿಸಿವೆ ಎಂದು ಅವರು ಟೀಕಿಸಿದರು.

ಪಕ್ಷದ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಮಾತನಾಡಿ, ಒಂದೇ ಮನೆಯಲ್ಲಿ ಸಚಿವರು, ಸಂಸದರು ಇದ್ದರೂ ಸಹ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಗೆ ಟಿಕೆಟ್ ಕೇಳಿದ್ದಕ್ಕೆ ಅಲ್ಪಸಂಖ್ಯಾತರ ಮಧ್ಯೆಯೇ ಹೊಡೆದಾಟವನ್ನು ಹಚ್ಚಿದ್ದಾರೆ. ನಾವು ಈವರೆಗೂ ಅಲ್ಪಸಂಖ್ಯಾತರ ಮತಗಳಿಂದಲೇ ಸೋತಿದ್ದರೂ, ಒಮ್ಮೆಯೂ ಅಲ್ಪಸಂಖ್ಯಾತರ ಬಗ್ಗೆ ಒಂದೇ ಒಂದು ಕೆಟ್ಟ ಮಾತನಾಡಿಲ್ಲ, ಇದನ್ನು ಅಲ್ಪ ಸಂಖ್ಯಾತರು ಅರ್ಥ ಮಾಡಿಕೊಳ್ಳಬೇಕು. ಈ ಸಲ ದಕ್ಷಿಣ ಕ್ಷೇತ್ರದ ಮತದಾ ರರು ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದು ಕರೆ ನೀಡಿದರು.

ಪಕ್ಷದ ಮುಖಂಡರಾದ ಎಂ.ಡಿ. ಲಕ್ಷ್ಮೀನಾರಾಯಣ, ಗಾಯತ್ರಿ ಸಿದ್ದೇಶ್ವರ್, ಬಿ.ಜಿ. ಅಜಯ ಕುಮಾರ, ಲೋಕಿಕೆರೆ ನಾಗರಾಜ, ದೇವರಮನಿ ಶಿವಕುಮಾರ, ರಾಜನಹಳ್ಳಿ ಶಿವಕುಮಾರ, ಬಿ. ರಮೇಶ ನಾಯ್ಕ, ಬಿ.ಎಂ. ಸತೀಶ ಕೊಳೇನಹಳ್ಳಿ, ಬಿ.ಎಸ್. ಜಗದೀಶ, ಹೆಚ್.ಪಿ. ವಿಶ್ವಾಸ ಇನ್ನಿತರರಿದ್ದರು.

ಪಟ್ಟು ಬಿಡದೇ ಬಿ.ಫಾರಂ ತಂದ ಮಲ್ಲಿಕಾರ್ಜುನ್
ಶಾಮನೂರು ಕುಟುಂಬದ 3ನೇ ತಲೆಮಾರು ರಾಜಕೀಯ ಪ್ರವೇಶ

▸ **ಪವಮಾನ ಐರಣಿ**



ಉಪಚುನಾವಣೆ ದಕ್ಷಿಣ-ಕಣ

ದಿಗಂತ ವಿಶೇಷ

• **ದಾವಣಗೆರೆ:** ದಾವಣಗೆರೆ-ಕಗ್ಗಂಟಾಗಿದ್ದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಗೊಂದಲ ಬಗೆಹರಿದಿದ್ದು, ಉಪಚುನಾವಣೆಗೆ ಪುತ್ರನಿಗೆ ಕಾಂಗ್ರೆಸ್ ಬಿ-ಫಾರಂ ತರುವಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಯಶಸ್ವಿಯಾಗಿದ್ದಾರೆ. ಹಿರಿಯ ಕಾಂಗ್ರೆಸ್ ಶಾಸಕ, ಮಾಜಿ ಸಚಿವ ಡಾ. ಶಾಮನೂರು ಶಿವಶಂಕರಪ್ಪ ನಿಧನದಿಂದ ತೆರವಾಗಿರುವ ಕ್ಷೇತ್ರಕ್ಕೆ ಅವರ ಮೊಮ್ಮಗ ಸಮರ್ಥ್ ಶಾಮನೂರು ಕಾಂಗ್ರೆಸ್ ಹುರಿಯಾಳಾಗಿ ಕಣಕ್ಕಿಳಿಯುವ ಮೂಲಕ ಶಾಮನೂರು ಕುಟುಂಬದ ಮೂರನೇ ತಲೆಮಾರು ರಾಜಕೀಯ ಪ್ರವೇಶಿಸಿದಂತಾಗಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಸಮರ್ಥ ಶಾಮನೂರು ಮಲ್ಲಿಕಾರ್ಜುನ್ ಅವರಿಗೆ ಬಿ-ಫಾರಂ ನೀಡಿರುವುದನ್ನು ಕಾಂಗ್ರೆಸ್ ಅಧಿಕೃತವಾಗಿ ಘೋಷಿಸಿದೆ. ತೀವ್ರ ಕುತೂಹಲ ಕೆರಳಿಸಿದ್ದ ಹಾಗೂ ಜಿದ್ದಾಜಿದ್ದಿನಿಂದ ಕೂಡಿದ್ದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಕಾಂಗ್ರೆಸ್ ಟಿಕೆಟ್ ಕೊನೆಗೂ ಸಮರ್ಥ್ ಶಾಮನೂರುಗೆ ದಕ್ಕಿದೆ.

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ದಾವಣಗೆರೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ದಂಪತಿಯ ಹಿರಿಯ ಪುತ್ರ ಸಮರ್ಥ್ ಶಾಮನೂರು ಟಿಕೆಟ್ ಘೋಷಣೆಗೂ ಮುನ್ನವೇ ಸಾಂಕೇತಿಕವಾಗಿ ನಾಮಪತ್ರ ಸಲ್ಲಿಸಿದ್ದರು. ಮಾ.23ರಂದು ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸೇರಿದಂತೆ ಕಾಂಗ್ರೆಸ್ ರಾಜ್ಯ ನಾಯಕರ ಉಪಸ್ಥಿತಿಯಲ್ಲಿ ಬೃಹತ್ ಮೆರವಣಿಗೆಯೊಂದಿಗೆ ಶಕ್ತಿ ಪ್ರದರ್ಶಿಸುವ ಮೂಲಕ ಅಧಿಕೃತವಾಗಿ ನಾಮಪತ್ರ ಸಲ್ಲಿಸಲಿದ್ದಾರೆ.

27 ವರ್ಷ ಹರೆಯದ ಸಮರ್ಥ ಶಾಮನೂರು, ಬಿಸಿನೆಸ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಬಿ.ಎ ಪದವಿಯನ್ನು ಯುನೈಟೆಡ್ ಕಿಂಗಡಮ್‌ನ ಎಕ್ಸೆಟರ್ ವಿಶ್ವವಿದ್ಯಾಲಯದಲ್ಲಿ ಪೂರೈಸಿದ್ದಾರೆ. 2023ರ ವಿಧಾನಸಭಾ ಚುನಾವಣೆ ಹಾಗೂ 2024ರ ಲೋಕಸಭಾ ಚುನಾವಣೆಯಲ್ಲಿ ಕಾರ್ಯಕರ್ತರೊಂದಿಗೆ ಬೆರೆತು ಕಾಂಗ್ರೆಸ್ ಗೆಲುವಿಗೆ ಶ್ರಮಿಸಿದ್ದಾರೆ. ಇಂಡಿಯನ್ ಕೇನ್ ಪವರ್ ಲಿಮಿಟೆಡ್ ಕಾರ್ಯನಿರ್ವಾಹಕ ನಿರ್ದೇಶಕರಾಗಿರುವ ಯುವ ಉದ್ಯಮಿ ಸಮರ್ಥ ಶಾಮನೂರು, ದಾವಣಗೆರೆ ಟೆನಿಸ್ ಅಸೋಸಿಯೇಷನ್ ಅಧ್ಯಕ್ಷರಾಗಿಯೂ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ತಮ್ಮದೇ ಕುಟುಂಬದ ಎಸ್.ಎಸ್ ಕೇರ್ ಟ್ರಸ್ಟ್ ಮತ್ತು ಎಸ್.ಎಸ್ ಜನಕಲ್ಯಾಣ ಟ್ರಸ್ಟ್ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದಾರೆ.

ರೊಟ್ಟಿ ಬುತ್ತಿ ಹಂಚಿ ಕಾರ್ಣೀಕ ನುಡಿದ ಶ್ರೀಗಳು

• **ನ್ಯಾಮತಿ:** ತಾಲೂಕಿನ ಕುರುವ, ಗೋವಿನಕೋವಿ, ರಾಂಪುರ ಗ್ರಾಮಗಳ ಮಧ್ಯೆ ಹರಿಯುವ ತುಂಗಾ ಭದ್ರಾ ನದಿಯ ನಡುಗಡ್ಡೆಯಲ್ಲಿರುವ ಗೆಡ್ಡೆ ಶ್ರೀರಾಮೇಶ್ವರಸ್ವಾಮಿಯ ರಥೋತ್ಸವ ಅಂಗವಾಗಿ ಮೂರನೇ ದಿನವಾದ ಶನಿವಾರ ಸಂಜೆ ರಾಂಪುರ ಹಾಲಸ್ವಾಮೀಜಿ ಮಠದ ಶ್ರೀ ಸದ್ಗುರು ಶಿವಕುಮಾರ ಸ್ವಾಮೀಜಿಯವರು ನಾಲ್ಕು ದಿಕ್ಕುಗಳ ಭಕ್ತರಿಗೆ ರೊಟ್ಟಿ ಬುತ್ತಿಯನ್ನು ಹಂಚುವ ಮೂಲಕ ವರ್ಷದ ಕಾರ್ಣೀಕ ಭವಿಷ್ಯವಾಣಿಯನ್ನು ನುಡಿದರು.



ಶನಿವಾರ ಬೆಳಗ್ಗೆ ಗೆಡ್ಡೆ ಶ್ರೀರಾಮೇಶ್ವರಸ್ವಾಮಿಯ ರಥೋತ್ಸವ ಒಳಗೊಂಡಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆದು ಸಂಜೆಯ ಪರಿವಾರ ದೇವರು ಗಳಿಗೆ ಪೂಜೆ ಸಲ್ಲಿಸಿ ಹೊನ್ನ ಕಲಶ ಶಿಖರ ಏರಿತ್ತು ಅಂಗೈಯಲ್ಲಿನ ಲಿಂಗ ನಕ್ಕಿತ್ತು ಎಂಬ ಈ ವರ್ಷದ ಕಾರ್ಣಿಕ ಭವಿಷ್ಯವಾಣಿಯನ್ನು ಹೇಳಿದರು.

ರೊಟ್ಟಿ ಬುತ್ತಿಯನ್ನು ನಾಲ್ಕು ದಿಕ್ಕುಗಳ ಭಕ್ತರನ್ನು ಕರೆದು ಹಂಚಿಕೆ ಮಾಡುವ ಪದ್ಧತಿ ನೂರಾರು ವರ್ಷಗಳಿಂದ ನಡೆಯುತ್ತಾ ಬಂದಿದ್ದು ರೊಟ್ಟಿ ಬುತ್ತಿ ಯಾವ ದಿಕ್ಕಿನ ಭಕ್ತರಿಗೆ ಅತೀ ಹೆಚ್ಚು ಸಿಗುತ್ತದೆಯೊ ಆ ದಿಕ್ಕಿನಲ್ಲಿ ಮಳೆ, ಬೆಳೆ ಸಮೃದ್ಧವಾಗಿ ಆಗುತ್ತದೆ ಎಂಬ ನಂಬಿಕೆ ಈ ನಾಡಿನ ಭಕ್ತರಲ್ಲಿದೆ.

ಅಲ್ಲಮಪ್ರಭು ಜ್ಞಾನ, ವೈರಾಗ್ಯದ ಪ್ರತೀಕ: ಗುರುಬಸವ ಶ್ರೀ

• **ತಾವರೆಕೆರೆ:** ಜ್ಞಾನ ಮತ್ತು ವೈರಾಗ್ಯದ ಪ್ರತೀಕವಾಗಿ ವಿಶ್ವ ವಿಖ್ಯಾತರಾದ ಅಲ್ಲಮಪ್ರಭುಗಳು ಶರಣ ಸಾಹಿತ್ಯದಲ್ಲಿ ಅಪ್ರತಿಮ ಸ್ಥಾನ ಪಡೆದಿದ್ದಾರೆ ಎಂದು ಪಾಂಡೋಮಟ್ಟಿ ವಿರಕ್ತ ಮಠದ ಡಾ. ಶ್ರೀಗುರುಬಸವ ಸ್ವಾಮೀಜಿ ಹೇಳಿದರು.



ಪಾಂಡೋಮಟ್ಟಿ ಗ್ರಾಮದ ವಿರಕ್ತಮಠದಲ್ಲಿ ಶನಿವಾರ ಸಂಜೆ ಜ್ಞಾನನಿಧಿ ಅಲ್ಲಮ ಪ್ರಭುದೇವರ ಜಯಂತ್ಯುತ್ಸವ, 881ನೇ ಮಾಸಿಕ ಶಿವಾನುಭವ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಹೊಳಲ್ಕೆರೆ ಉಪನ್ಯಾಸಕ ಡಾ.ಜಿ.ವಿ. ಮಂಜುನಾಥ್ ಮಾತನಾಡಿ, ಕನ್ನಡನಾಡು ಕಂಡ ಅಪರೂಪದ ಅನುಭವಿ ಅಲ್ಲಮ ಪ್ರಭುದೇವರು ಸಾಮಾನ್ಯ ಮನುಷ್ಯರಲ್ಲ; ಅವರು ಅಲೆಮಾರಿ. ಲೋಕದ ಬಂಧನಗಳಿಗೆ ಸಿಕ್ಕಿಬಿದ್ದವರಲ್ಲ, ಅವರ ಆತ್ಮಜ್ಞಾನ ಗಾಢವಾಗಿತ್ತು ಎಂದು ಹೇಳಿದರು.

ಜೀವ ವೈವಿಧ್ಯ ನಿಗಮ ಮಂಡಳಿ ಅಧ್ಯಕ್ಷ ವಡ್ನಾಳ್ ಜಗದೀಶ್ ಮಾತನಾಡಿದರು. ಈ ಸಂದರ್ಭದಲ್ಲಿ ಎಂಎಸ್ಸಿ (ಅಗ್ರಿ) ಚಿನ್ನದ ಪದಕ ವಿಜೇತೆ ಹೊನ್ನೆಮರದಹಳ್ಳಿ ಜಿ.ಎ. ವತ್ಸಲ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಕುಮಾರಿ ಡಾ. ಇಂಚರ, ಮಾಲೂರು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಕೆ.ಆರ್. ಬಸವರಾಜ್ ಮತ್ತಿತರರಿದ್ದರು.



ತ್ಯಾವಣಿಗೆ ಸಮೀಪದ ದೊಡ್ಡಘಟ್ಟ ಗ್ರಾಮದಲ್ಲಿ ಪ್ರೀಮಿಯರ್ ಲೀಗ್ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯನ್ನು ಭಾನುವಾರ ಆಯೋಜಿಸಲಾಗಿತ್ತು.

ಇಂದಿನಿಂದ ಎರಡು ದಿನ ಕನ್ನಡ ಭಾಷಾ ಬೋಧನೆ ಕೌಶಲ್ಯಗಳ ಕಾರ್ಯಾಗಾರ

• **ದಾವಣಗೆರೆ:** ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಬೇರು ಚಿಗುರು ವೇದಿಕೆ ಸಹಯೋಗದಲ್ಲಿ ಕನ್ನಡ ಭಾಷಾ ಬೋಧನೆ ಕೌಶಲ್ಯಗಳು ಎಂಬ ವಿಷಯದ ಕುರಿತು ಎರಡು ದಿನಗಳ ಕಾರ್ಯಾಗಾರವನ್ನು ಮಾ.23, 24ರಂದು ನಗರದ ಕೇಶವಮೂರ್ತಿ ರೋಟರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಪ್ರಾಧಿಕಾರದ ಸದಸ್ಯ ಸಂಚಾಲಕ ಪ್ರೊ.ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಮಾ.23ರಂದು ಬೆಳಗ್ಗೆ 10.30ಕ್ಕೆ ತಮ್ಮ ಅಧ್ಯಕ್ಷತೆಯ ಕಾರ್ಯಕ್ರಮವನ್ನು ಖ್ಯಾತ ಸಂಸ್ಕೃತಿ ಚಿಂತಕ ಪ್ರೊ. ನಟರಾಜ್ ಬೂದಾಳ ಉದ್ಘಾಟಿಸುವರು. ಬೇರು-ಚಿಗುರು ವೇದಿಕೆ ಅಧ್ಯಕ್ಷ ಡಾ.ಹೆಚ್.ಜಿ. ವಿಜಯಕುಮಾರ, ಕಾರ್ಯದರ್ಶಿ ಡಿ. ಅಂಜಿನಪ್ಪ ಸೇರಿದಂತೆ ವಿವಿಧ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರು, ಪ್ರಾಧಿಕಾರದ ಜಿಲ್ಲಾ ಜಾಗೃತಿ ಸಮಿತಿ ಸದಸ್ಯರು ಹಿರಿಯ ಸಾಹಿತಿಗಳು, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಮಾ.24ರಂದು ಸಂಜೆ 3.30ಕ್ಕೆ ನಡೆಯುವ ಸಮಾರಂಭದಲ್ಲಿ ಸಾಹಿತಿ ಡಾ. ಕುಮಾರಚಲ್ಯ ಸಮಾರೋಪ ನುಡಿಗಳನ್ನಾಡುವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೇರು-ಚಿಗುರು ವೇದಿಕೆಯ ಅಧ್ಯಕ್ಷ ಡಾ. ವಿಜಯಕುಮಾರ್ ವಹಿಸಿಕೊಳ್ಳಲಿದ್ದಾರೆ ಎಂದರು.

ಒಟ್ಟು ಐದು ಗೋಷ್ಠಿಗಳು ನಡೆಯಲಿದೆ. ಪ್ರೊ.ಎಂ. ಮಂಜಣ್ಣ ಕನ್ನಡ ಭಾಷೆಯ ಪ್ರಾಚೀನತೆ, ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಕನ್ನಡ ಭಾಷಾ ಬೋಧನೆಯಲ್ಲಿ ಗದ್ಯ ಮತ್ತು ಪದ್ಯ ಕುರಿತು ಉಪನ್ಯಾಸ ನೀಡುವರು. ಶೈಕ್ಷಣಿಕ ವಲಯದಲ್ಲಿ ಮುಂದಿನ ಯುವ ತಲೆಮಾರು ರೂಪಿಸುವ ಶಿಕ್ಷಕರನ್ನು ಕೇಂದ್ರೀಕರಿಸಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ತಿಳಿಸಿದರು.

ರುದ್ರಾಕ್ಷಿಬಾಯಿ, ಸೌಮ್ಯ, ಅಜಯ್ ಕುಮಾರ್, ಬಸವ ರಾಜ್, ಹರೀಶ್, ಸಚಿನ್ ಇದ್ದರು.

ಮಾದಿಗ ದಂಡೋರ ಸಂಘಟನೆಯ ಜಿಲ್ಲಾಧ್ಯಕ್ಷ ಹೆಚ್.ಸಿ. ಗುಡ್ಡಪ್ಪ ಕರೆ
ನ್ಯಾಯ ಸಿಗದಿದ್ದರೆ ನಿರಂತರ ಹೋರಾಟಕ್ಕೆ ಸಜ್ಜಾಗಿ

• **ದಾವಣಗೆರೆ:** ವಿಶೇಷ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರ್ಕಾರ ಕೈಗೊಳ್ಳುವ ತೀರ್ಮಾನದಿಂದ ಮಾದಿಗ ಸಮಾಜಕ್ಕೆ ನ್ಯಾಯ ಸಿಗದಿದ್ದರೆ, ಸಮಾಜಬಾಂಧವರು ತಮ್ಮ ಮನೆಗಳಿಗೆ ಬೀಗ ಜಡಿದು ಹೆಂಡತಿ ಮಕ್ಕಳೊಂದಿಗೆ ಬೀದಿಗಿಳಿದು ನಿರಂತರ ಚಳುವಳಿಗೆ ಸಜ್ಜಾಗಬೇಕೆಂದು ಮಾದಿಗ ದಂಡೋರ ಸಂಘಟನೆಯ ಜಿಲ್ಲಾಧ್ಯಕ್ಷ ಹೆಚ್.ಸಿ. ಗುಡ್ಡಪ್ಪ ಕರೆ ನೀಡಿದರು.



ನಗರದ ಶಂಕರ ವಿಹಾರ ಬಡಾವಣೆಯಲ್ಲಿ ಶನಿವಾರ ನಡೆದ ಜಿಲ್ಲಾ ಮಾದಿಗ ದಂಡೋರದ ಉನ್ನತ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರ 56,432 ಹುದ್ದೆಗಳನ್ನು ಹಳೆ ಮೀಸಲಾತಿ ಪ್ರಕಾರವೇ ಭರ್ತಿ ಮಾಡಿಕೊಳ್ಳುವ ತೀರ್ಮಾನ ಕೈಗೊಂಡಿರುವುದರಿಂದ ಕಳೆದ 30 ವರ್ಷಗಳಿಂದ ಒಳ ಮೀಸಲಾತಿಗಾಗಿ ಹೋರಾಟ ಮಾಡಿದ ಮಾದಿಗ ಸಮಾಜಕ್ಕೆ ಅನ್ಯಾಯವಾಗಿದೆ. ಇದರ ವಿರುದ್ಧ ರಾಜ್ಯಾದ್ಯಂತ ತೀವ್ರ ಸ್ವರೂಪದ ಹೋರಾಟ ನಡೆದ ಹಿನ್ನೆಲೆಯಲ್ಲಿ ಮಾ.27ರಂದು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಮಾದಿಗ ಸಮಾಜಕ್ಕೆ ನ್ಯಾಯ ಕಲ್ಪಿಸಿಕೊಡುವುದಾಗಿ ಸರ್ಕಾರ ಭರವಸೆ ನೀಡಿರುವುದು ಸ್ವಾಗತಾರ್ಹ ಎಂದರು.

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 101 ಜಾತಿಗಳಲ್ಲಿ ಹೆಚ್ಚಿನ ಜನಸಂಖ್ಯೆ ಹೊಂದಿರುವ ಮಾದಿಗ ಸಮಾಜವು ಶೈಕ್ಷಣಿಕ, ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ನ್ಯಾಯದಿಂದ ವಂಚಿತವಾಗಿದೆ. ಸಂವಿಧಾನದ ಆಶಯದಂತೆ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿಯು ವರ್ಗೀಕರಣದಿಂದಲೇ ಸಮಾಜದ ಕಲ್ಯಾಣ ಸಾಧ್ಯ ಎಂದು ತಿಳಿಸಿದರು.

ರಾಜ್ಯ ಸರ್ಕಾರಗಳು ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಕಲ್ಪಿಸಬಹುದೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದರ ಫಲವಾಗಿ ಕರ್ನಾಟಕ ಸರ್ಕಾರ ನಾಗಮೋಹನದಾಸ್ ಆಯೋಗ ರಚಿಸಿತ್ತು. ಮಾದಿಗ ಮತ್ತು ಅದರ ಉಪಜಾತಿಗಳಿಗೆ ಶೇ.6ರಷ್ಟು, ಹೊಲೆಯ ಮತ್ತು ಅದರ ಉಪಜಾತಿಗಳಿಗೆ ಶೇ.5ರಷ್ಟು, ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳಿಗೆ ಶೇ.1ರಷ್ಟು ಹಾಗೂ ಸ್ಪರ್ಶ ಜಾತಿಗಳಿಗೆ ಶೇ.4ರಷ್ಟು ಮೀಸಲಾತಿ ವರ್ಗೀಕರಣ ಮಾಡುವಂತೆ ಆಯೋಗವು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ತಿಳಿಸಲಾಗಿದೆ. ಅದರಂತೆ ಒಳ ಮೀಸಲಾತಿ ಹಂಚಿಕೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಸಂಘಟನೆಯ ಜಿಲ್ಲಾ ಉಪಾಧ್ಯಕ್ಷ ಹೆಚ್. ಚಿದಾನಂದಪ್ಪ, ಮುಖಂಡರಾದ ಕಳವೂರ್ ರಂಗಪ್ಪ, ಗಂಗನರಸಿ ಶಿವರಾಜ್, ಮಳಲಕೆರೆ ಶೇಖರಪ್ಪ, ಬಿ. ಮಲ್ಲೇಶಪ್ಪ, ಮೂಡೇನಹಳ್ಳಿ ಶಿವಕುಮಾರ್, ಈಚಗಟ್ಟದ ಕೆಂಚಪ್ಪ ಸಭೆಯಲ್ಲಿ ಹಾಜರಿದ್ದರು.

ಮೀಸಲಾತಿ ಸಂರಕ್ಷಣಾ ಒಕ್ಕೂಟದ ಕಾರ್ಯಾಧ್ಯಕ್ಷ ರಾಘವೇಂದ್ರ ನಾಯ್ಕ
ಮಾ.24ಕ್ಕೆ ಬೆಂಗಳೂರು ಚಲೋ ಚಳವಳಿ

• **ದಾವಣಗೆರೆ:** ಪರಿಶಿಷ್ಟ ಜಾತಿಗಳ ಮೀಸಲಾತಿ ವರ್ಗೀಕರಣ ಸಂಬಂಧ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗ ನೀಡಿರುವ ವರದಿಯಲ್ಲಿನ ಲೋಪದೋಷ ಖಂಡಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಮಾರ್ಚ್ 24ರಂದು ಬೆಂಗಳೂರು ಚಲೋ ಚಳವಳಿ ಹಮ್ಮಿಕೊಳ್ಳಲಾಗಿದೆ.



ಶನಿವಾರ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಕಾರ್ಯಾಧ್ಯಕ್ಷ ರಾಘವೇಂದ್ರ ನಾಯ್ಕ ಮಾತನಾಡಿ, ಮೀಸಲಾತಿ ವರ್ಗೀಕರಣದಿಂದ ಅನ್ಯಾಯಕ್ಕೊಳಗಾಗುವ ಸಮುದಾಯಗಳ ಜನರು ಈ ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪ್ರತಿಭಟನೆ ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ನಾಗಮೋಹನದಾಸ್ ವರದಿಯು ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ವರದಿಯ ಮುಂದುವರೆದ ಭಾಗದಂತಿದೆ. ಈ ವರದಿಯ ಸಾರಾಂಶಗಳು ವಾಸ್ತವಿಕ ಅಂಕಿ-ಅಂಶಗಳಿಂದ ದೂರವಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಶಿಕ್ಷಣ, ಉದ್ಯೋಗ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಅಂಕಿ-ಅಂಶಗಳು ದಮನಿತ ಸಮುದಾಯಗಳಲ್ಲಿ ಅನುಮಾನ ಮೂಡಿಸಿವೆ. ಈ ದತ್ತಾಂಶಗಳನ್ನು ಯಾವ ಮೂಲದಿಂದ ಪಡೆಯಲಾಗಿದೆ ಎಂಬುದನ್ನು ಆಯೋಗವು ಸ್ಪಷ್ಟಪಡಿಸಬೇಕು. ಕಳೆದ 14 ವರ್ಷಗಳ ಅವಧಿಯಲ್ಲಿ ಕೆಲವು ಜಾತಿಗಳ ಜನಸಂಖ್ಯೆ ಕೇವಲ ಶೇ.1.13ರಷ್ಟು ಹೆಚ್ಚಳವಾಗಿದ್ದರೆ, ಇನ್ನೂ ಕೆಲವು ಜಾತಿಗಳ ಸಂಖ್ಯೆ ಶೇ.10-12ರಷ್ಟು ಏರಿಕೆಯಾಗಿರುವುದು ಅವೈಜ್ಞಾನಿಕವಾಗಿದೆ ಎಂದು ಆರೋಪಿಸಿದರು.

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ಜಯದೇವ ನಾಯ್ಕ, ಭೋವಿ ಸಮಾಜದ ಮುಖಂಡ ಜಯಣ್ಣ, ಮುಖಂಡರಾದ ಚಂದ್ರನಾಯ್ಕ ಹಾಲೇಕಲ್, ಚಿನ್ನಸಮುದ್ರ ಶೇಖರನಾಯ್ಕ, ಹನುಮಂತ ನಾಯ್ಕ, ಅರುಣಕುಮಾರ್, ರವಿನಾಯ್ಕ ಸುದ್ದಿಗೋಷ್ಠಿಯಲ್ಲಿದ್ದರು.

ಸಂಪಾದಕೀಯ

ಶಾಂತಿಯ ಸಮಾಜಕ್ಕೆ ಅರಿವೇ ಗುರು

ಸಮಾಜ ಸ್ವಾತಂತ್ರ್ಯಪೂರ್ವದ ಚಿಂತನೆಯೊಂದನ್ನು ನಿರ್ಲಕ್ಷಿಸಿದೆ ಎಂಬ ಮಾತೊಂದನ್ನು ಇತ್ತೀಚೆಗೆ ಚಿಂತಕರೊಬ್ಬರು ಆಡಿದ್ದರು. ಸಾಮಾನ್ಯವಾಗಿ ಸ್ವಾತಂತ್ರ್ಯಪೂರ್ವದ ಚಿಂತನೆ ಎಂದರೆ ವಸಾಹತುಶಾಹಿ ಎಂದೇ ಭಾವಿಸಲಾಗುತ್ತದೆ. ಆದರೆ ಸ್ವಾತಂತ್ರ್ಯಪೂರ್ವ ಎಂದರೆ ಒಂದು ಕಾಲಘಟ್ಟವೂ ಹೌದು. ಪೂರ್ವದ ಪಾಠಗಳನ್ನು ಮರೆಯಲೇಬೇಕು ಎನ್ನುವಂತಿಲ್ಲ. ಅಲ್ಲದೆ ಸ್ವಾತಂತ್ರ್ಯಾನಂತರದ ಹಲವಾರು ಘಟನೆಗಳಿಗೆ ಪೂರ್ವದ ಪಾಠ ಪರಿಹಾರವಾಗಬಲ್ಲದು. ಆದ್ದರಿಂದ ಸ್ವಾತಂತ್ರ್ಯಪೂರ್ವ ಎಂದರೆ ಕೇವಲ ವಸಾಹತುಪ್ರಜ್ಞೆಯಲ್ಲ.

ಇಂದಿಗೂ ಸಮಾಜದಲ್ಲಿ ಮತೀಯ ಸಾಮರಸ್ಯ ಎಂಬುದು ಮರೀಚಿಕೆ. ಎಲ್ಲೆಲ್ಲೂ ಅಸಹನೆ, ಸಂದೇಹ. ಕೆಲವು ದಿನಗಳ ಹಿಂದೆಯಷ್ಟೇ ಹಿಂದುಗಳ ಯುಗಾದಿ ಮತ್ತು ಮುಸಲ್ಮಾನರ ರಂಜಾನ್ ಹಬ್ಬ ಜೊತೆಜೊತೆಯಾಗಿ ಬಂತು. ಸದ್ಭಾವನೆ ಮತ್ತು ಪರಸ್ಪರ ಸಹೋದರತ್ವದ ದೃಷ್ಟಿಯಿಂದ ಇದು ಸಮಾಜದಲ್ಲಿ ಚೇತೋಹಾರಿ ವಾತಾವರಣವನ್ನು ನಿರ್ಮಿಸಬೇಕಿತ್ತು. ಆದರೆ ರಾಜ್ಯದ ಹಲವಾರು ಕಡೆಗಳಲ್ಲಿ ಕಾನೂನು ಸುವ್ಯವಸ್ಥೆಯ ಕಾರಣಕ್ಕೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ವಾತಾವರಣ ಸೃಷ್ಟಿಯಾಯಿತು. ಗಲಭೆ ನಡೆಯಬಹುದೆಂದು ಶಾಂತಿಸಭೆಗಳನ್ನು ನಡೆಸಲಾಯಿತು. ಇವೆಲ್ಲವನ್ನೂ ಏಕಮುಖದಿಂದ ಅವಲೋಕಿಸಿದರೆ ಸಾಮಾನ್ಯ ಘಟನೆ ಎನಿಸಬಹುದು.

ಆದರೆ ಸ್ವಾತಂತ್ರ್ಯ ಬಂದು ಏಳುವರೆ ದಶಕಗಳಾದರೂ ದೇಶದಲ್ಲಿ ಇಂಥ ಸ್ಥಿತಿ ಇದೆ ಎನ್ನುವುದು ಯೋಚಿಸತಕ್ಕ ಸಂಗತಿ. ಅದರಲ್ಲೂ ಸಂವಿಧಾನ ಹೇಳುವ ಸಮಾನತೆ ಮತ್ತು ಸೌಹಾರ್ದತೆಗಳು ಸಮಾಜದಲ್ಲಿ ಯಾವ ಪರಿಯಲ್ಲಿ ನೆಲೆಸಿದೆ ಎನ್ನುವುದಕ್ಕೆ ಇದು ಸಾಕ್ಷಿಯೂ ಹೌದು. ಎರಡು ಸಮುದಾಯದ ಹಬ್ಬಗಳನ್ನು ಜೊತೆಯಲ್ಲಿ, ಸಂತೋಷದಿಂದ ಆಚರಿಸಲು ಯಾಕೆ ಸಾಧ್ಯವಾಗುತ್ತಿಲ್ಲ ಎನ್ನುವುದನ್ನು ಗಂಭೀರವಾಗಿ ಚಿಂತಿಸಬೇಕಿದೆ. ನಾನಾ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಅವು ಶಾಂತಿಗೆ ಭಂಗ ತರುವ ಮಟ್ಟಕ್ಕೆ ಹೋಗುತ್ತದೆ ಎಂದರೆ ಸಂವಿಧಾನ ಕರ್ತೃಗಳ ಆಶಯ ಸಂಪೂರ್ಣ ಈಡೇರಲಿಲ್ಲ ಎಂದೇ ಅರ್ಥ. ಮುಸಲ್ಮಾನರ ಮೆರವಣಿಗೆಯನ್ನು ಇತರ ಮತೀಯರು ಸಂದೇಹದಿಂದ ಯಾಕೆ ನೋಡುತ್ತಾರೆ ಎನ್ನುವುದನ್ನು ಆ ಸಮುದಾಯದ ಮುಖಂಡರು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಹಾಗಾದರೆ ಅದನ್ನು ಸಮಾಜದ ತಪ್ಪು ಎನ್ನಬಹುದೇ ಎಂದರೆ ಅದೂ ಸಾಧ್ಯವಿಲ್ಲ. ಈ ಹಿಂದೆ ಎಲ್ಲೆಲ್ಲಿ ಗಣೇಶ ಮೆರವಣಿಗೆಯ ಮೇಲೆ ಕಲ್ಲೆಸೆತ ಮತ್ತು ಇತರ ಶಾಂತಿಭಂಗದ ಪ್ರಯತ್ನಗಳು ನಡೆದವೋ ಅಲ್ಲೆಲ್ಲಾ ಮುಸಲ್ಮಾನರ ಮೆರವಣಿಗೆಯನ್ನು ಸಮಾಜ ಸಂದೇಹದಿಂದಲೇ ನೋಡುತ್ತದೆ.

ಎಲ್ಲರಿಗೂ ತಮ್ಮ ಮತಗಳನ್ನು ಆಚರಿಸಲು ಪೂರ್ಣ ಸ್ವಾತಂತ್ರ್ಯವಿದೆ. ಆದರೆ ಸಂಶಯ ಮತ್ತು ಭಯ ಆ ಸ್ವಾತಂತ್ರ್ಯವನ್ನು ಅನುಭವಿಸಲು ಅಡ್ಡಿಯಾಗುತ್ತಿದೆ. ಎಲ್ಲಾ ಮತಗಳಲ್ಲಿ ಹಬ್ಬಗಳೆಂದರೆ ನಾನಾ ಕಾರಣಗಳಿಂದ ವ್ಯಕ್ತಿಯ ಉನ್ನತಿಯ ಮಾರ್ಗಗಳು. ಆದರೆ ಅಂಥ ಸುಸಂದರ್ಭದಲ್ಲೂ ಹುನ್ನಾರಕ್ಕೆ ಹೊಂಚುಹಾಕುವ ಮನಸ್ಸುಗಳು ಇಂದಿಗೂ ಇದೆ ಎನ್ನುವುದು ಖೇದಕರ. ಸ್ವಾತಂತ್ರ್ಯಪೂರ್ವದಲ್ಲಿ ಇಂಥ ಭಾವನೆಗಳಿಂದಲೇ ಗಲಭೆಗಳು ನಡೆಯುತ್ತಿದ್ದವು ಮತ್ತು ಅವು ಮುಂದೆ ದೇಶವಿಭಜನೆಯವರೆಗೂ ತಲುಪಿತು ಎನ್ನುವುದನ್ನು ಸಮಾಜ ಮರೆಯಬಾರದು. ತುಷ್ಟೀಕರಣ ರಾಜಕೀಯಕ್ಕೆ ಬಲಿಯಾಗುವ ಸಮಾಜ ಮತೀಯ ಸಾಮರಸ್ಯವನ್ನು ಕೆಡಿಸುತ್ತದೆ ಎನ್ನುವುದನ್ನು ಸಮಾಜ ಅರಿಯಬೇಕು. ಅದರಲ್ಲೂ ಅಲ್ಪಸಂಖ್ಯಾತ ಎನಿಸಿಕೊಂಡವರು ಮುಖ್ಯವಾಗಿ ಅರಿಯಬೇಕು. ಆಗಲೇ ಸಮಾಜ ಸರ್ವಜನಾಂಗದ ಶಾಂತಿಯ ತೋಟವಾಗುತ್ತದೆ.

ಜೇಮ್ಸ್ ಹ್ಯಾರಿಸನ್ ಎಂಬ ಮಹಾನ್ ರಕ್ತದಾನಿ, ನಿಜವಾದ ಹೀರೋ

ಜೇಮ್ಸ್ ಹ್ಯಾರಿಸನ್ 1173 ಬಾರಿ ರಕ್ತದಾನ ಮಾಡಿ ಯಾರೂ ಸದ್ಯಕ್ಕೆ ಮುರಿಯಲಾಗದ ದಾಖಲೆ ಬರೆದಿದ್ದಾರೆ.

ನೇರ ನೋಟ
ದು.ಗು. ಲಕ್ಷ್ಮಣ
dugulakshman@yahoo.com



ರಕ್ತದಾನಶ್ರೇಷ್ಠದಾನಎಂಬಮಾತನ್ನುಆಗಾಗಕೇಳುತ್ತಲೇಇರುತ್ತೇವೆ. ಒಂದು ಜೀವ ಉಳಿಸಲು ನಮ್ಮ ರಕ್ತವನ್ನು ದಾನ ಮಾಡುವುದು ಯಜ್ಞಯಾಗ ಹೋಮ ಮಾಡಿದ್ದಕ್ಕಿಂತಲೂ ಶ್ರೇಷ್ಠ ಕಾರ್ಯ ಎಂದು ವೇದಿಕೆಗಳಮೇಲಿನಿಂದಆಗೊಮ್ಮೆಈಗೊಮ್ಮೆಭಾಷಣವನ್ನುಮಾಡಿರುತ್ತೇವೆ. ದೇಶದಾದ್ಯಂತ ಹಲವಾರು ಖಾಸಗಿ ಸಂಸ್ಥೆಗಳು 'ಬ್ಲಡ್‌ಬ್ಯಾಂಕ್'ಗಳನ್ನು ಈ ಹಿನ್ನೆಲೆಯಲ್ಲಿ ಸ್ಥಾಪಿಸಿ ವಿವಿಧ ಬಗೆಯ ರಕ್ತ ಮಾದರಿಗಳನ್ನು, ಪ್ಲಾಸ್ಮಾ, ಪ್ಲೇಟ್‌ಲೆಟ್‌ಗಳನ್ನು ಶೇಖರಿಸಿ, ಕೆಡದಂತೆ ರಕ್ಷಿಸಿಡುವ ಸಂಗತಿ ಎಲ್ಲರಿಗೂ ತಿಳಿದಿರುವಂತಹುದೇ.

ಹಿಂದೆಲ್ಲರಕ್ತದಾನಮಹಾಪಾಪಎಂದೇಹೇಳಲಾಗುತ್ತಿತ್ತು. ಅಗತ್ಯವಿರುವವರಿಗೆ ರಕ್ತ ನೀಡಿದರೆ ರಕ್ತ ನೀಡಿದವರ ಆರೋಗ್ಯ ಕ್ಷೀಣಿಸಿ, ಅವರ ಆಯುಸ್ಸು ಕುಸಿಯುತ್ತದೆಂಬಮೂಢನಂಬಿಕೆಯನ್ನುಯಾರೋಬಿತ್ತಿಬಿಟ್ಟಿದ್ದರು. ಹಾಗಾಗಿ ರಕ್ತದಾನ ಮಾಡಲು ಯಾರೂ ಅಷ್ಟಾಗಿ ಮುಂದೆ ಬರುತ್ತಿರಲಿಲ್ಲ. ರಕ್ತದಾನ ಮಾಡಬಲ್ಲ ಆರೋಗ್ಯವಂತ ವ್ಯಕ್ತಿಗಳು ಕೂಡ ಏನಾದರೊಂದು ನೆಪ ಹೇಳಿ ಜಾರಿಕೊಳ್ಳುತ್ತಿದ್ದರು. ಮೂಢನಂಬಿಕೆಯ 'ಪ್ರಭಾವ' ಅಷ್ಟರಮಟ್ಟಿಗೆಹರಡಿತ್ತು.


ಆದರೆ ವಿಜ್ಞಾನ ಬೆಳೆದಂತೆಲ್ಲ, ಜನರು ಹೆಚ್ಚು ವಿದ್ಯಾವಂತರಾದಂತೆಲ್ಲ, ವೈದ್ಯ ಪದವೀಧರರ ಸಂಖ್ಯೆ ಹೆಚ್ಚಿದಂತೆಲ್ಲ ಜನಮಾನಸದಲ್ಲಿ ಹುದುಗಿದ್ದ ಈ ಮೌಢ್ಯವನ್ನು ಕ್ರಮೇಣ ಕಳಚಿಹಾಕಲು ಸಾಧ್ಯವಾಯಿತು. ಸಣ್ಣ ಸಣ್ಣ ಊರುಗಳಲ್ಲೂ ಆರೋಗ್ಯವಂತ ಯುವಕ–ಯುವತಿಯರು ರಕ್ತದಾನ ಮಾಡಲು ಧೈರ್ಯವಾಗಿ ಮುಂದೆ ಬರತೊಡಗಿದರು. ಸೆಲೆಬ್ರಿಟಿಗಳ ಸ್ಮರಣಾರ್ಥ ರಕ್ತದಾನ ಮಾಡುವ ಹೊಸಬಗೆಯ 'ಸಂಸ್ಕೃತಿ'ಗೂ ಚಾಲನೆ ದೊರಕಿತು. ಹೀಗಾಗಿ ಈಗ ರಕ್ತದಾನವೆಂದರೆ ಹೆದರಿಕೊಳ್ಳುವವರ ಸಂಖ್ಯೆ ಮೊದಲಿಗಿಂತಸಾಕಷ್ಟುಕಡಿಮೆಯಾಗಿದೆ. ಅಲ್ಲೊಬ್ಬರುಇಲ್ಲೊಬ್ಬರುಈಗಲೂ ಹೆದರಿ ಹಿಂದೆ ಸರಿಯುವವರೂ ಇಲ್ಲದೇ ಇಲ್ಲ.

ನಮ್ಮ ದೇಶದಲ್ಲಿ ಅತಿ ಹೆಚ್ಚು ರಕ್ತದಾನ ಮಾಡಿದವರ ಸಾಲಿನಲ್ಲಿ ಮೊದಲ ಸ್ಥಾನದಲ್ಲಿ ಶೋಭಿಸುವವರು ಹರಿಯಾಣದ ಡಾ. ಸುರೇಶ್ ಕುಮಾರ್ ಸೈನಿ. ಪ್ಲೇಟ್‌ಲೆಟ್ ಸೇರಿದಂತೆ ಅವರು ಒಟ್ಟು 223 ಬಾರಿ ರಕ್ತದಾನ ಮಾಡಿ ಸಾವಿರಾರು ರೋಗಿಗಳನ್ನು ಬದುಕಿಸಿದ್ದಾರೆ. ಚಂಡೀಗಢದ ರಾಜನ್ ರೈಖಿ ಕೂಡ 222ಕ್ಕೂ ಅಧಿಕ ಬಾರಿ ರಕ್ತದಾನ ಮಾಡಿರುವವರ ಕ್ಲಬ್‌ಗೆ ಸೇರಿದ್ದಾರೆ. ಇನ್ನು ಬೆಂಗಳೂರಿನ ಮಧುರ ಅಶೋಕ್ ಕುಮಾರು 117 ಬಾರಿ, ಮಹಾರಾಷ್ಟ್ರದ ವಿಶ್ವಜಿತ್ ಕಾಶೀದ್ 185 ಬಾರಿ ರಕ್ತದಾನ ಮಾಡಿದ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ. ಕರ್ನಾಟಕದ ಆದಿಕೇಶವಪ್ರಕಾಶ ಶಾಸ್ತ್ರಿ–ನೆಗೆಟಿವ್ (o negative) ಎಂಬ ಅಪರೂಪದ ಗುಂಪಿನ ರಕ್ತವನ್ನು ಹಲವಾರು ಬಾರಿ ದಾನ ಮಾಡಿ ಪ್ರಶಂಸೆಗೆ ಭಾಜನರಾಗಿದ್ದಾರೆ.

ದೆಹಲಿಯ ರೋಟರಿ ಬ್ಲಡ್ ಬ್ಯಾಂಕ್ (ಆರ್‌ಬಿಬಿ) ಅತಿ ದೊಡ್ಡ ರಕ್ತ ಸಂಗ್ರಹಕೇಂದ್ರವಾಗಿದ್ದು, ಸುರಕ್ಷತೆ ಹಾಗೂ ವಿಶ್ವಾಸಾರ್ಹತೆಗೆ ಪಾತ್ರವಾಗಿದೆ. ರೆಡ್‌ಕ್ರಾಸ್ ಸೊಸೈಟಿ (ಐಆರ್‌ಸಿಎಸ್) ದೇಶಾದ್ಯಂತ ಒಂದು ನೂರಕ್ಕೂ ಹೆಚ್ಚು ರಕ್ತಕೇಂದ್ರಗಳೊಂದಿಗೆಸುಸಜ್ಜಿತಬ್ಲಡ್‌ಬ್ಯಾಕ್ ಎನಿಸಿಕೊಂಡಿದೆ. ಬೆಂಗಳೂರಿನ ರೋಟರಿ–ಟಿಟಿಕೆಬ್ಲಡ್ ಬ್ಯಾಂಕ್ (ಬಿಎಂಎಸ್‌ಟಿ) ಇದುವರೆಗೆವಾರ್ಷಿಕವಾಗಿ 90 ಸಹಸ್ರ ರೋಗಿಗಳಿಗೆ ರಕ್ತ ನೀಡಿದ ಹೆಗ್ಗಳಿಕೆ ಹೊಂದಿದೆ. ಬೆಂಗಳೂರಿನ ಗವಿಪುರಂನಲ್ಲಿರುವಸಂಘಪರಿವಾರದರಾಷ್ಟ್ರೋತ್ಥಾನರಕ್ತನಿಧಿ (ರಾಷ್ಟ್ರೋತ್ಥಾನ ಬ್ಲಡ್ ಬ್ಯಾಂಕ್) ಕೂಡಗುಣಮಟ್ಟದವಿಶ್ವಾಸಾರ್ಹ, ಸುರಕ್ಷತೆಯರಕ್ತ, ಪ್ಲಾಸ್ಮಾ, ಪ್ಲೇಟ್‌ಲೆಟ್ ಸಂಗ್ರಹದ ಪ್ರಮುಖ ಕೇಂದ್ರವೆನಿಸಿ ಸಾವಿರಾರು ಮಂದಿ ರಕ್ತದ ಅಗತ್ಯವಿರುವ ರೋಗಿಗಳ ಸಂಜೀವಿನಿ ಎಂದು ಖ್ಯಾತವಾಗಿದೆ.

ಆದರೆಇವೆಲ್ಲಸಂಗತಿಗಳಿಗಿಂತಅಚ್ಚರಿಹುಟ್ಟಿಸುವ, ಬೆರಗಾಗುವಮಹಾನ್ ರಕ್ತದಾನಿಯೊಬ್ಬನಿದ್ದ. ಆತ ಕಳೆದ 2025ರ ಫೆ. 17ರಂದು ಇಹಲೋಕ ತ್ಯಜಿಸಿದ. ಆತ ರಕ್ತದಾನ ಮಾಡಿದ್ದು ನೂರಲ್ಲ, ಇನ್ನೂರಲ್ಲ, ಐನೂರು ಬಾರಿಯೂ ಅಲ್ಲ, ಬರೋಬ್ಬರಿ 1173 ಬಾರಿ ರಕ್ತದಾನ ಮಾಡಿ ಇಡೀ ಜಗತ್ತಿಗೇ ಯಾರೂ ಸದ್ಯಕ್ಕೆ ಮುರಿಯಲಾಗದ ದಾಖಲೆ ಬರೆದಿದ್ದಾನೆ. ಆತ ಇನ್ಯಾರೂ ಅಲ್ಲ, ಆಸ್ಟ್ರೇಲಿಯಾದ ನ್ಯೂಸೌತ್‌ವೇಲ್ಸ್‌ನ ಜೇಮ್ಸ್ ಹ್ಯಾರಿಸನ್ ಎಂಬ ವ್ಯಕ್ತಿ. ಆತ 1173 ಬಾರಿ ರಕ್ತದಾನ ಮಾಡಿದ್ದು ಉತ್ಪ್ರೇಕ್ಷೆಯ ಸಂಗತಿಯಲ್ಲ, ಆದರೆ ವಾಸ್ತವ. ಅದಕ್ಕೆ ಅಧಿಕೃತ ವೈದ್ಯಕೀಯ ದಾಖಲೆಗಳೇ ಇವೆ.

1936ರಲ್ಲಿ ಜನಿಸಿದ ಜೇಮ್ಸ್ ಹ್ಯಾರಿಸನ್‌ಗೆ ವಯಸ್ಸು 14 ಆಗಿದ್ದಾಗ ಜೀವ ಹಿಂಡುವ ರೋಗವೊಂದಕ್ಕೆ ಆಸ್ಪತ್ರೆಗೆ ಸೇರಬೇಕಾಯ್ತು. ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿ ಆತನ ಶ್ವಾಸಕೋಶದ ಒಂದು ಭಾಗವನ್ನೇ ತೆಗೆದುಹಾಕಿದ್ದರು. ಅನಸ್ತೇಶಿಯಾದ ಪ್ರಭಾವ ಕಡಿಮೆಯಾಗಿ ಆಸ್ಪತ್ರೆಯ ಹಾಸಿಗೆಯಲ್ಲಿ ಹ್ಯಾರಿಸನ್ ಕಣ್ತೆರೆದು ನೋಡಿದಾಗ ಆತನ ಎದೆಯಸುತ್ತ 100 ಹೊಲಿಗೆಗಳನ್ನು ಹಾಕಲಾಗಿತ್ತು. ಆತನ ಜೀವವುಳಿಸಲು 13 ಯೂನಿಟ್ ರಕ್ತದ ಅಗತ್ಯವಿತ್ತು. ಯಾರು ಯಾರೋ ಅಪರಿಚಿತರು (ಹ್ಯಾರಿಸನ್‌ಗೆ ಅವರಾರೆಂದು ಗೊತ್ತೇ ಇರಲಿಲ್ಲ) ಆ ರಕ್ತವನ್ನು ಮಾನವೀಯ ನೆಲೆಯಲ್ಲಿ ಆತನಿಗೆ ದಾನ ಮಾಡಿದ್ದರು. ಅವರೆಲ್ಲ ಹೀಗೆ ರಕ್ತದಾನ ಮಾಡಿದ್ದರಿಂದಲೇ ನೀನು ಈಗ ಜೀವಂತವಾಗಿದ್ದೀಯಾ ಎಂದು ಪಕ್ಕದಲ್ಲಿ ಶುಶ್ರೂಷೆ ಮಾಡುತ್ತಿದ್ದ ಹ್ಯಾರಿಸನ್‌ನ ತಂದೆ ರೆಗ್ ಹೇಳಿದಾಗ, ಹ್ಯಾರಿಸನ್ ಮನದಲ್ಲಿ ನೂರಾರು ಭಾವನೆಗಳು ಹಾದುಹೋದವು. ಆಗಲೇ ಆತ ಒಂದು ನಿರ್ಧಾರಕ್ಕೆ ತಲುಪಿದ್ದ. ನನಗೆ ಪರಿಚಯವಿಲ್ಲದವರುನನ್ನನ್ನುಳಿಸಲುರಕ್ತದಾನಮಾಡಿದ್ದಾರೆ. ಹಾಗಾಗಿನಾನು ಕೂಡ ಜೀವನಪೂರ್ತಿ ಇತರರನ್ನು ಬದುಕಿಸುವುದಕ್ಕಾಗಿ ರಕ್ತದಾನ ಮಾಡುವೆ. ಇದೇ ಹ್ಯಾರಿಸನ್‌ನ ಆ ನಿರ್ಧಾರವಾಗಿತ್ತು.





ಆದರೆ ಆಗಿನ್ನೂ ಆತನಿಗೆ 14 ವರ್ಷದ ಹರೆಯ. ಆಗ ಆತ ರಕ್ತ ನೀಡುವಂತಿರಲಿಲ್ಲ. ನಾಲ್ಕುವರ್ಷದಬಳಿಕ (1954) ರಕ್ತದಾನಮಾಡುವುದಕ್ಕೆ ಅರ್ಹತಾ ವಯಸ್ಸು ಪ್ರಾಪ್ತವಾದ ಮೇಲೆ ಹ್ಯಾರಿಸನ್ ರಕ್ತದಾನ ಕೇಂದ್ರಕ್ಕೆ ತಾನೊಬ್ಬನೇ ನಡೆದುಹೋದ. ಕುರ್ಚಿಯೊಂದರಲ್ಲಿ ಕುಳಿತ. ಮೇಲೆ ತಿರುಗುತ್ತಿರುವ ಫ್ಯಾನ್, ಇನ್ನೊಂದೆಡೆ ಸೂಜಿ ಚುಚ್ಚಲು ಸಿದ್ಧಳಾಗಿ ನಿಂತ ನರ್ಸ್. ಒಮ್ಮೆ ಆತನಿಗೆ ಗಾಬರಿಯಾಯಿತು. ಗಾಬರಿಯಾಗಿದ್ದು ರಕ್ತದಾನಕ್ಕೆ ಹೆದರಿ ಅಲ್ಲ, ಆತ ಹೆದರಿದ್ದು ನರ್ಸ್ ಹಿಡಿದಿದ್ದ ಆ ಸೂಜಿಗೆ (ಸಿರಿಂಜ್)! ಚಿಕ್ಕಂದಿನಿಂದ ಆತನಿಗೆ ಸೂಜಿಯೆಂದರೆ ಇನ್ನಿಲ್ಲದ ಭಯ. ಎದೆಯ ಶಸ್ತ್ರಚಿಕಿತ್ಸೆಗೊಳಗಾದಾಗ ನೂರು ಕಡೆ ಸೂಜಿ ಚುಚ್ಚಿ ಹೊಲಿಗೆ ಹಾಕಿದ್ದರು. ನೂರು ಹೊಲಿಗೆ ನೋಡಿಯೇ ಗಾಬರಿಯಾದ ದೃಶ್ಯ ಇನ್ನೂ ಮಾಸಿರಲಿಲ್ಲ. ಆದರೆತಾನುದೃಢನಿರ್ಧಾರಮಾಡಿರುವೆ. ಆದರಿಂದ ಹಿಂದೆಸರಿಯುವುದು ತರವಲ್ಲ ಎಂದು ಮನಸ್ಸು ಹೇಳಿತು. ಸೂಜಿ ಹಾಗೂ ನರ್ಸ್ ಕಡೆ ನೋಡದೆ, ಮೇಲೆ ತಿರುಗುತ್ತಿರುವ ಫ್ಯಾನ್ ನೋಡುತ್ತ 'ನನ್ನ ರಕ್ತ ತೆಗೆಯಬಹುದು' ಎಂದ. ಸೂಜಿಗೆ ಕುರುಡಾಗಿ, ನೋವಿಗೆ ಕಿವುಡಾಗಿ ಕುಳಿತ.

ಈ ಪ್ರಕ್ರಿಯೆ ಮುಂದೆ ಎರಡು ವಾರಕ್ಕೊಮ್ಮೆ ನಡೆಯುತ್ತಾ ಹೋಯಿತು. ಪ್ರತಿ ಬಾರಿ ರಕ್ತ ತೆಗೆಯುವಾಗಲೂ ಸೂಜಿ ಮತ್ತು ನರ್ಸ್ ಕಡೆಗೆ ದೃಷ್ಟಿ ಹಾಯಿಸುತ್ತಲೇ ಇರಲಿಲ್ಲ. ಹೀಗೇ ಕೆಲವು ವಾರಗಳ ಬಳಿಕ, ಸಂಗ್ರಹವಾದ ಆತನ ರಕ್ತವನ್ನು ವಿಶ್ಲೇಷಿಸಿದಾಗ ಅದರಲ್ಲಿ ವಿಸ್ಮಯಕಾರಿ, ಅಪರೂಪದ ಪ್ರತಿನಿರೋಧಕ (antibody) ಇರುವುದು ವೈದ್ಯರಿಗೆ ಅಚ್ಚರಿ ಹುಟ್ಟಿಸಿತು. ಆಗ ಆಸ್ಟ್ರೇಲಿಯಾದಾದ್ಯಂತ ಹರಡಿದ್ದ RH ಎಂಬ ಭಯಾನಕ ಕಾಯಿಲೆಯನ್ನು ನಿಯಂತ್ರಿಸುವ ತಾಕತ್ತು ಆ ಪ್ರತಿನಿರೋಧಕಕ್ಕೆ ಇತ್ತು.

ವೈದ್ಯರಆವಿನೂತನಸಂಶೋಧನೆಗೆಮೊದಲು, ಆಸ್ಟ್ರೇಲಿಯಾದಸಾವಿರಾರು ಶಿಶುಗಳು RH ಖಾಯಿಲೆಯಿಂದಜನಿಸಿದಕೆಲವೇಕ್ಷಣದಲ್ಲಿಸಾವನ್ನಪ್ಪುತ್ತಿದ್ದವು. ಕೆಲವು ಮಕ್ಕಳಿಗೆ ಮಿದುಳಿನ ಆಘಾತ, ಕೆಲವು ಮಕ್ಕಳು ಅವಧಿಗೆ ಮುನ್ನವೇ ಜನಿಸಿ ಮರಣ– ಇದಕ್ಕೆಲ್ಲ ಜೇಮ್ಸ್ ಹ್ಯಾರಿಸನ್‌ನ ರಕ್ತವು ಸಂಜೀವಿನಿ ರೂಪದ ಪರಿಹಾರವಾಗಿತ್ತು. ಹ್ಯಾರಿಸನ್ ರಕ್ತದಾನಕ್ಕಾಗಿ ಮೀಸಲಿಡುತ್ತಿದ್ದ ಅವಧಿ 20 ನಿಮಿಷ. ಆದರ ಬದಲು 90 ನಿಮಿಷ ನೀಡಬಹುದೇ ಎಂದು ವೈದ್ಯರು ಕೇಳಿದಾಗಹ್ಯಾರಿಸನ್ ಕೂಡಲೇ ಒಪ್ಪಿದ. ಆ ಅವಧಿಯಲ್ಲಿ ಆತನರಕ್ತದಲ್ಲಿರುವ ಪ್ಲಾಸ್ಮಾವನ್ನುವೈದ್ಯರುಸಂಗ್ರಹಿಸುತ್ತಿದ್ದರು. ಅದನ್ನುಮರಣಶಯ್ಯೆಯಲ್ಲಿರುವ ಶಿಶುಗಳಿಗೆನೀಡಿದಾಗ ಅದ್ಭುತಪವಾಡವೆಂಬಂತೆ ಅವೆಲ್ಲ ಬದುಕುಳಿದವು. ಈ ಸಂಗತಿ ಗೊತ್ತಾದಾಗ ಹ್ಯಾರಿಸನ್‌ಗೆ ಆದ ಆನಂದ ಅಷ್ಟಿಷ್ಟಲ್ಲ. ತಪ್ಪದೇ ತನಗೆ 81 ವರ್ಷ ಆಗುವವರೆಗೂ ರಕ್ತ, ಪ್ಲಾಸ್ಮಾ ದಾನ ನೀಡುತ್ತಲೇ ಹೋದ.

2018ರಲ್ಲಿ ಹ್ಯಾರಿಸನ್‌ಗೆ ಬರೋಬ್ಬರಿ 81 ವರ್ಷ. ಈ ಬಾರಿ ಇಳಿವಯಸ್ಸಿನ ಕಾರಣದಿಂದಾಗಿ ರಕ್ತದಾನ ಮಾಡಲು ಆಸ್ಟ್ರೇಲಿಯಾದ ಕಾನೂನಿನ ಅನುಮತಿ ಬೇಕಿತ್ತು. ಅದನ್ನು ಪಡೆದು ಕೊನೆಯ ಬಾರಿ ಹ್ಯಾರಿಸನ್ ರಕ್ತದಾನಕ್ಕೆ ಮುಂದಾದ. ಆತನ ಸುತ್ತಲೂ, ಹ್ಯಾರಿಸನ್‌ನ ರಕ್ತ ಪಡೆದು ಬದುಕಿದ್ದ ಮುದ್ದುಮಕ್ಕಳನ್ನು ಎತ್ತಿಕೊಂಡ ನೂರಾರು ತಾಯಂದಿರು. ಅವರೆಲ್ಲರ ಕಣ್ಣಂಚಿನಲ್ಲಿ ಅಶ್ರುಧಾರೆ. ತಮ್ಮ ಮಕ್ಕಳನ್ನು ರಕ್ತನೀಡಿ ಬದುಕಿಸಿದ ನಿಜವಾದ 'ಹೀರೋ' ಕೊನೆಯ ಬಾರಿ ರಕ್ತದಾನ ಮಾಡುವುದನ್ನು ನೋಡಲು ಅವರೆಲ್ಲ ಅಲ್ಲಿ ನೆರೆದಿದ್ದರು. ಕಳೆದ 64 ವರ್ಷಗಳಿಂದ ಒಟ್ಟು 1173 ಬಾರಿ ರಕ್ತದಾನ ಮಾಡಿದ್ದ. ಅದರಿಂದಾಗಿ 2.4 ದಶಲಕ್ಷ ಶಿಶುಗಳು ಆಸ್ಟ್ರೇಲಿಯಾದಲ್ಲಿ ಬದುಕುಳಿದಿದ್ದವು.

''ನೀನೊಬ್ಬ ನಿಜವಾದ ಹೀರೋ. ನಮಗೆಲ್ಲ ನೀನೇ ದೇವರು'' ಎಂದು ಆ ತಾಯಂದಿರು ಕಣ್ತುಂಬಿ ಹೇಳಿದರೆ, ಹ್ಯಾರಿಸನ್ ಎಲ್ಲೋ ನೋಡುತ್ತ 'ನೋಡಿ, ನಾನು ಒಂದು ಸುರಕ್ಷಿತ ಕೋಣೆಯಲ್ಲಿ ಕುಳಿತು ರಕ್ತದಾನ ಮಾಡುತ್ತೇನೆ. ಅನಂತರ ನರ್ಸ್ ಕುಡಿಯಲು ಕಾಫಿ ಮತ್ತು ತಿನ್ನಲು ಬಿಸ್ಕೆಟ್ ಕೊಡುತ್ತಾರೆ. ಬಳಿಕ ಮೇಲೆದ್ದು ಮನೆಗೆ ಹೋಗುತ್ತೇನೆ. ನನಗ್ಯಾವತೊಂದರೆಯೂ ಇಲ್ಲ. ನನ್ನ ಕೊಡುಗೆ ಏನೂ ಇಲ್ಲ' ಎಂದು ತಣ್ಣಗೆ ಹೇಳುತ್ತಾ ಮನೆಯತ್ತ ನಡೆದೇಬಿಟ್ಟಿದ್ದ.

ಆಸ್ಟ್ರೇಲಿಯಾ ಸರ್ಕಾರ ಆತನ ಈ ಮಹಾನ್ ಸೇವೆಯನ್ನು ಪರಿಗಣಿಸಿ ದೇಶದ ಅತ್ಯುನ್ನತ 'ಮೆಡಲ್ ಆಫ್ ದಿ ಆರ್ಡರ್ ಆಫ್ ಆಸ್ಟ್ರೇಲಿಯಾ' ನಾಗರಿಕ ಪ್ರಶಸ್ತಿಯನ್ನು ನೀಡಿತ್ತು. ಹ್ಯಾರಿಸನ್ ತನ್ನ 88ನೇ ವಯಸ್ಸಿನಲ್ಲಿ ನೆಮ್ಮದಿಯಿಂದ ನಿದ್ದೆಮಾಡುತ್ತಿರುವಾಗಲೇ ಕಳೆದ 2025ರ ಫೆ. 17ರಂದು ಈ ಲೋಕಕ್ಕೆ ವಿದಾಯ ಹೇಳಿದ. ಪತ್ನಿ ಬಾರ್ಬರಾ ಲಿಂಡ್‌ಬೆಕ್ 2005ರಲ್ಲೇ ಸಾವಿಗೀಡಾಗಿದ್ದಳು. ಒಬ್ಬಳೇ ಮಗಳು ಟ್ರೇಸಿ ಮೆಲ್ಲೋಶಿಪ್. ತಮಾಷೆಯೆಂದರೆ, ಟ್ರೇಸಿಯ ಪುಟ್ಟ ಮಗು ಬದುಕುಳಿದಿದ್ದು ಕೂಡ ತಾತ ಹ್ಯಾರಿಸನ್‌ನ ರಕ್ತದಾನದಿಂದಲೇ!

ಅತಿ ಶ್ರೀಮಂತರನ್ನು, ಸಿನಿಮಾಗಳಲ್ಲಿ ನಟಿಸುವ ನಾಯಕನಾಯಕಿಯರನ್ನು, ಇನ್ಯಾರೋ ತರಕಲಾಂಡಿ ರಾಜಕೀಯ ಮುಖಂಡರನ್ನು ತಮ್ಮ 'ಹೀರೋ'ಗಳೆಂದು ಹಲವರು ಭ್ರಮಿಸಿ ಆರಾಧಿಸುತ್ತಾರೆ. ಹಾಲಿನ ಅಭಿಷೇಕ ಮಾಡುತ್ತಾರೆ. ಆದರೆ ಲಕ್ಷಾಂತರ ಮಕ್ಕಳಿಗೆ ತನ್ನ ರಕ್ತದಾನದ ಮೂಲಕ ಜೀವದಾನ ಮಾಡಿದ ಜೇಮ್ಸ್ ಹ್ಯಾರಿಸನ್ ಮುಂದೆ ಇವರೆಲ್ಲ ಅದೆಂಥ ಹೀರೋಗಳು?

ಹರೆಯದವರ ಸವಾಲುಗಳು

ಹರೆಯದ ಸವಾಲುಗಳನ್ನು ಎದುರಿಸಲು ಆತ್ಮಸ್ಥೈರ್ಯ, ಸಕಾರಾತ್ಮಕ ಚಿಂತನೆ, ಪೋಷಕ, ಉಪಾಧ್ಯಾಯರ ಸಕಾರಾತ್ಮಕ ಮಾರ್ಗದರ್ಶನ ಮತ್ತು ಬಾಲ್ಯದಲ್ಲಿ ಪೋಷಕರು ಕಲಿಸಿದ ಜೀವನ ಕೌಶಲಗಳು ಪೂರಕ.

ತಾರುಣ್ಯ ತಲ್ಲಣ
ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಜೀವನವೇ ಸವಾಲುಗಳ ಸರಪಳಿ. ಅದಕ್ಕೆ ಪರಿಹಾರ ಏನು ಎಂಬ ಪ್ರಶ್ನೆಗೆ, ಸವಾಲುಗಳನ್ನು ಎದುರಿಸಿ ಯಶಸ್ವಿಯಾಗಿ ನಿಭಾಯಿಸಿಕೊಂಡು ಮುನ್ನಡೆಯುವುದೇ ಜೀವನ. ಸವಾಲುಗಳಿಲ್ಲದ ಜೀವನ ನೀರಸವಾಗುತ್ತದೆ. ವ್ಯಕ್ತಿಯು ಜನಿಸಿದಾಗಿನಿಂದ ಅಂತ್ಯದವರೆಗೆ ಸವಾಲುಗಳಿರುತ್ತವೆ. ಜನಿಸಿದ ಮಗು ಮೈಲುಗಲ್ಲುಗಳನ್ನು ಸಾಧಿಸುವುದೂ ಸವಾಲುಗಳೇ. ಜನಿಸಿದ ಮೂರು ತಿಂಗಳಿಗೆ ಕವುಚಿ ಹಾಕಿಕೊಳ್ಳುವುದು ಮಗುವಿಗೆ ಒಂದು ಸವಾಲು. ಹಾಗೆ ಕವುಚಿಕೊಳ್ಳುವಾಗ ಮಗು ಪ್ರಯತ್ನಿಸಲೇಬೇಕು. ಮಗುಚಿಕೊಳ್ಳುವಾಗ ತನ್ನ ದೇಹಕ್ಕೆ ಪೆಟ್ಟಾಗದಿದ್ದ ಹಾಗೆ ಎಚ್ಚರಿಕೆ ವಹಿಸಬೇಕು. ನಿಂತುಕೊಳ್ಳುವ ಮೊದಲು ಸಮತೋಲನವನ್ನು ಕಾಪಾಡಿಕೊಳ್ಳಬೇಕು. ಅದಿಲ್ಲದಿದ್ದಲ್ಲಿ ಕೆಳಗೆ ಬಿದ್ದು ಶರೀರಕ್ಕೆ ಗಾಯವಾಗುತ್ತದೆ. ಹೀಗೆ ಬೀಳದಂತೆ, ಎಡವದಂತೆ ನಡೆಯುವುದು, ಮಾತನಾಡಲು ಕಲಿಯುವುದು ಇವೂ ಸವಾಲುಗಳೇ. ಮಗು ಸವಾಲುಗಳನ್ನು ಎದುರಿಸಿ, ಅವುಗಳನ್ನು ನಿಭಾಯಿಸಿಕೊಂಡು ಯಶಸ್ವಿಯಾಗಿ ಮೈಲುಗಲ್ಲುಗಳನ್ನು ದಾಟಿದಾಗ ಮಗುವಿಗೆ ತಾನೇನೋ ಸಾಧನೆ ಮಾಡಿದ್ದೇನೆ ಎಂಬ ವಿಶ್ವಾಸ ಉಂಟಾಗುತ್ತದೆ. ಆತ್ಮವಿಶ್ವಾಸದಿಂದ ಒಂದೊಂದೇ ಮೆಟ್ಟಿಲುಗಳನ್ನು ಏರುತ್ತದೆ. ಇದಕ್ಕೆ ಅವಶ್ಯವಿರುವುದು ಪೋಷಕರ ಪ್ರೀತಿಯ ಮಾತುಗಳು, ಪ್ರೋತ್ಸಾಹ ಮತ್ತು ಸಕಾರಾತ್ಮಕ ಮಾರ್ಗದರ್ಶನ.

ಮೇಲೆ ತಿಳಿಸಿದಂತೆ ಜೀವನವೇ ಸವಾಲುಗಳ ಸರಪಣಿ. ಹರೆಯದವರಲ್ಲಿ ಎದುರಾಗುವ ಸವಾಲುಗಳದ್ದೇ ಒಂದು ವಿಶೇಷ. ಹರೆಯವು ಸಂಕ್ರಮಣ ಕಾಲ. ಅತ್ತ ಬಾಲ್ಯವನ್ನು ತೊರೆದು, ಇತ್ತ ಸ್ವಾತಂತ್ರ್ಯವನ್ನು ಸಾಧಿಸದೇ ಇರುವ ಒಂದು ತ್ರಿಶಂಕು ಸ್ವರ್ಗ. ಹರೆಯದಲ್ಲಿ ಎದುರಾಗುವ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ನಿಭಾಯಿಸಿದರೆ, ''ತನ್ನತನ''ವನ್ನು ಕಂಡುಕೊಂಡು, ಸಾಧನೆಯತ್ತ ದಾಪುಗಾಲಿಡಬಹುದು. ಸವಾಲುಗಳನ್ನು ಎದುರಿಸಲಾಗದೇ ಆತ್ಮಸ್ಥೈರ್ಯ ಕಳೆದುಕೊಂಡು, ಹರೆಯದ ಮನಸ್ಸು ಗೊಂದಲದ ಗೂಡಾದರೆ ಸಾಧನೆಯಲ್ಲಿ ಹಿನ್ನಡೆಯಾಗುತ್ತದೆ. ಇಂಥವರ ಭವಿಷ್ಯ ಡೋಲಾಯಮಾನವಾಗುತ್ತದೆ. ಇನ್ನೊಂದು ಅಂಶವನ್ನು ಓದುಗರು ಗಮನಿಸಬೇಕು. ಹರೆಯದಲ್ಲಿ ಎದುರಾಗುವ ಸವಾಲುಗಳು ಮತ್ತು ಒತ್ತಡಗಳು ಒಂದೇ ಎಂದು ಹೇಳುವವರಿದ್ದಾರೆ. ಸವಾಲುಗಳು ಹರೆಯದ ಪ್ರತಿಯೊಬ್ಬ ವ್ಯಕ್ತಿಗೂ ಎದುರಾಗುತ್ತವೆ. ಆದರೆ ಒತ್ತಡಗಳು ಕೆಲವರಿಗೆ ಎದುರಾಗದೇ ಇರಬಹುದು. ಹಾಗಾಗಿ ಒತ್ತಡಗಳನ್ನು ಮತ್ತು ಸವಾಲುಗಳು ವಿಭಿನ್ನವಾದವು ಎನ್ನುವುದು ನನ್ನ ಅಭಿಪ್ರಾಯ.

ಹರೆಯದವರ ಸವಾಲುಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಬಹುದು. ಮೊದಲನೆಯದು ವ್ಯಕ್ತಿಯಲ್ಲಿ ಉಂಟಾಗುವ ಸಮಗ್ರ ಬದಲಾವಣೆಗಳಿಗೆ ಸಂಬಂಧಿಸಿದ ವೈಯಕ್ತಿಕ ಸವಾಲುಗಳು. ಎರಡನೆಯದು ಮನೋವಿಕಾಸದಿಂದ ಉಂಟಾಗುವ ಮಾನಸಿಕ ಸವಾಲುಗಳು. ಮೂರನೆಯದು ಸಾಮಾಜಿಕ ಸವಾಲುಗಳು. ನಾಲ್ಕನೆಯದು ಭಾವನಾತ್ಮಕವಾಗಿ ಎದುರಾಗುವ ಸವಾಲುಗಳು. ಉದಾಹರಣೆಗಳ ಮೂಲಕ ಇವುಗಳನ್ನು ತಿಳಿಯೋಣ.

ಹದಿನಾಲ್ಕು ವರ್ಷ ವಯಸ್ಸಿನ ರಾಹುಲ್ ಒಂಭತ್ತನೇ ತರಗತಿಯ ವಿದ್ಯಾರ್ಥಿ. ಶರೀರದಲ್ಲಿ ಎತ್ತರವಾಗಿ ಬೆಳೆದ. ಎಲ್ಲರೂ ಇದೇನೋ ರಾಹುಲ್ ಇಷ್ಟು ಎತ್ತರವಾಗಿದೀಯ. ನಿನ್ನನ್ನು ನೋಡಿದರೆ ದೊಡ್ಡವರ ಹಾಗೆ ಕಾಣುತ್ತೀಯಾ? ಎಂದು ಅವನ ಸಂಬಂಧಿಕರು ಹೇಳಿದ್ದನ್ನು ಕೇಳಿದ ರಾಹುಲ್ ಮನಸ್ಸಿಗೆ ಇರುಸುಮುರುಸಾಯಿತು. ಅದೇ ವಯಸ್ಸಿನ ತನ್ನ ಸಹಪಾಠಿ ಸುನಿಲ್ ಸ್ವಲ್ಪ ಕುಳ್ಳನಾಗಿದ್ದ. ಅರೇ ಇತರರಿಗಾಗದ್ದು ತನಗೇಕೆ ಹೀಗಾಗಿದೆ? ಇದು ಅಸಹಜವೇ ಎಂಬ ಗೊಂದಲ ರಾಹುಲ್‌ನಿಗೆ ಉಂಟಾಯಿತು. ಇದಕ್ಕೆ ಪರಿಹಾರವೇನು? ಎಂದು ಯೋಚಿಸಿದ. ಏನಾದರಾಗಲೀ ತಾಯಿಯನ್ನು ಕೇಳುವುದು ಒಳ್ಳೆಯದು ಎಂದು ಭಾವಿಸಿ, ತಾಯಿಯ ಹತ್ತಿರ ಹೋದ. ತಾಯಿಯನ್ನು ಕೇಳಿದಾಗ, ತಾಯಿ ''ಮಗನೇ ಈಗ ನೀನು ಹದಿನಾಲ್ಕು ವರ್ಷದವನು. ದೇಹದಲ್ಲಿ ಹಲವು ಬದಲಾವಣೆಗಳಾಗುತ್ತವೆ. ಅವುಗಳಲ್ಲಿ ಇದೂ ಒಂದು. ಕೆಲವರಿಗೆ ಈ ಬದಲಾವಣೆಗಳು ಒಂದೆರಡು ವರ್ಷ ಬೇಗ ಆಗಬಹುದು. ಕೆಲವರಿಗೆ ತಡವಾಗಿ ಆಗುತ್ತದೆ. ಅದಕ್ಕಾಗಿ ಆತಂಕಪಡಬೇಡ'' ಎಂದು ಹೇಳಿದರು. ರಾಹುಲ್‌ಗೆ ಸಮಾಧಾನವಾಯಿತು. ಹೀಗೆ ಸಂದೇಹಗಳಿಂದ ಹರೆಯದ ಮನಸ್ಸಿಗೆ ಆತಂಕ ಉಂಟಾದಾಗ ಆತಂಕ ಪಡದೇ ಪೋಷಕರ ಹತ್ತಿರ ಹಂಚಿಕೊಂಡರೆ ಅದನ್ನು ಎದುರಿಸುವುದು ಸುಲಭಸಾಧ್ಯ.

ಹದಿನಾರು ವರ್ಷದ ಶೈಲಾ ಮೊದಲನೇ ಪಿಯುಸಿ ವಿದ್ಯಾರ್ಥಿನಿ. ಮನೋವಿಕಾಸದಿಂದ ಶೈಲಾಳಿಗೆ ಏನೇನೋ ಯೋಚನೆಗಳು ಉಂಟಾಗಲು ಪ್ರಾರಂಭವಾಯಿತು. ಅವುಗಳಲ್ಲಿ ಮುಖ್ಯವಾದದ್ದು ತಾನು ಏನನ್ನು ಓದಬೇಕು? ತಾನು ಯಾರಂತಾಗಬೇಕು? ಯಾವ ವೃತ್ತಿಯನ್ನು ಆರಿಸಿಕೊಳ್ಳಬೇಕು? ಸಮಾಜದಲ್ಲಿ ತನ್ನ ಸ್ಥಾನ ಎಲ್ಲಿ? ತನಗೆ ಗೌರವವೆಲ್ಲಿ ದೊರಕುತ್ತದೆ? ಎಂಬ ''ತನ್ನತನ'' ವನ್ನು ಕಾಣುವ ಹಂಬಲ. ಇದಕ್ಕೆ 'ತನ್ನತನ' ಎನ್ನುತ್ತಾರೆ. 'ತನ್ನತನ'ವನ್ನು ಬೆಳೆಸಿಕೊಳ್ಳುವುದು ಒಂದು ಸವಾಲು. ಇದರಿಂದ ಶೈಲಾಳ ಮನಸ್ಸು ತನಗೆ ಯಾಕೆ ಹೀಗೆ ಈ ವಿಧದ ಯೋಚನೆಗಳು ಬರುತ್ತಿವೆ. ಅದಕ್ಕೆ ಪರಿಹಾರ ಏನು ಎಂದು ಕೇಳಲು, ತಾಯಿಯ ಹತ್ತಿರ ಹೋದಳು. ತಾಯಿಯು ಮಗಳ ಸಂದೇಹಗಳನ್ನು ಆಲಿಸಿ, ಶೈಲಾಳ ತಂದೆಯನ್ನು ಕರೆದರು. ಅಪ್ಪ ಅಮ್ಮ ಇಬ್ಬರೂ ಕೂತು ಶೈಲಾಳಿಗೆ ಯಾಕೆ ಹೀಗಾಗುತ್ತಿದೆ, ಅದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ, ಅದರಿಂದ ಏನು ಪ್ರಯೋಜನ ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸಿದರು. ಶೈಲಾಗೆ ತನ್ನಲ್ಲಿ ಆತ್ಮವಿಶ್ವಾಸ ಉಂಟಾಯಿತು. ''ತನ್ನತನ''ವು ಮನಸ್ಸಿನಲ್ಲಿ ಬೇರೂರಿ, ಆತ್ಮವಿಶ್ವಾಸದಿಂದ ಮುನ್ನಡೆಯಲು ಪ್ರಾರಂಭಿಸಿದಳು.

ದೀಪು ಹತ್ತನೇ ತರಗತಿಯಲ್ಲಿ ಪಾಸಾಗಿ ಪಿಯುಸಿಯನ್ನು ಸೇರಿದನು. ಪಿಯುಸಿಯಲ್ಲಿ ಎಲ್ಲವೂ ಹೊಸದು. ಅವುಗಳಲ್ಲಿ ಮುಖ್ಯವಾದದ್ದು ಗೆಳೆಯರೊಂದಿಗಿನ ಸಂಬಂಧ. ಪಿಯುಸಿ ಸೇರಿ ಒಂದು ವಾರದಲ್ಲಿ ಎರಡು ಮೂರು ಜನ ಗೆಳೆಯರಾದರು. ದೀಪುವಿಗೂ ಒಳ್ಳೆಯ ಗೆಳೆಯರು ಸಿಕ್ಕಿದರಲ್ಲಾ ಎಂದು ಸಂತೋಷವಾಯಿತು. ವಾರಗಳು ಕಳೆದ ಹಾಗೆ ಅವರು ತರಗತಿ ತಪ್ಪಿಸಿ ಅಲ್ಲಿ ಇಲ್ಲಿ ಹೋಗುತ್ತಿದ್ದುದನ್ನು ಕಂಡನು. ಅವರನ್ನು ವಿಚಾರಿಸಿದಾಗ, ''ಏ ಬಾರೋ ನೀನೂ ಸ್ವಲ್ಪ ದಿನ ಮಜಾ ಮಾಡುವಿಯಂತೆ, ನಂತರ ಓದಿದರಾಯಿತು'' ಎಂದು ಹೇಳಿದಾಗ ದೀಪುವಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಆ ಕ್ಷಣವೇ ಅವರನ್ನು ತೊರೆದು ಬೇರೆಯವರ ಸ್ನೇಹ ಮಾಡಿದರೆ ಒಳ್ಳೆಯದು ಎನಿಸಿತು. ಹಾಗೆ ಮಾಡಿದರೆ ಹೊಸಬರು ಹೇಗಿರುತ್ತಾರೆ ಎಂಬುದರ ಗೊಂದಲ ಉಂಟಾಯಿತು. ಮನೆಗೆ ಬಂದು ತಾಯಿಯ ಹತ್ತಿರ ತನ್ನ ಕಷ್ಟ ಹೇಳಿಕೊಂಡನು. ತಾಯಿ ಮಗನನ್ನು ಕೂರಿಸಿಕೊಂಡು ಗಾಬರಿಯಾಗಬೇಡ, ಹೀಗಾಗುವುದು ಸಹಜ. ಸ್ವಲ್ಪ ದಿನ ಯಾರು ಚೆನ್ನಾಗಿ ಓದುತ್ತಾರೆ, ಯಾರು ಕ್ಲಾಸಿಗೆ ಸರಿಯಾಗಿ ಬರುತ್ತಾರೆ ಎಂಬುದನ್ನು ಗಮನಿಸುತ್ತಿರು. ಓದುವುದರಲ್ಲಿ ಯಾರು ಮುಂದೆ? ಯಾರು ಕ್ಲಾಸಿನ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ? ಎಂಬುದನ್ನು ಗಮನಿಸು. ಅಂಥವರ ಗೆಳೆತನ ಒಳ್ಳೆಯದು. ನಿನಗೂ ಅದರಿಂದ ಒಳ್ಳೆಯದಾಗುತ್ತದೆ ಎಂದರು. ದೀಪು ತಾಯಿ ಹೇಳಿದ ಹಾಗೆ ಸಮಾಧಾನದಿಂದ ಸಹಪಾಠಿಗಳ ಚಲನವಲನಗಳನ್ನು ಗಮನಿಸಿ, ಯಾರು ತನ್ನ ಹಾಗೆ ಓದಿ ಮುಂದೆ ಬರಬೇಕೆಂಬ ಗುರಿ ಹೊಂದಿದ್ದಾರೆ. ಯಾರು ಹಲವಾರು ಕೌಶಲಗಳನ್ನು ಹೊಂದಿದ್ದಾರೆ ಎಂಬುದನ್ನು ಗಮನಿಸಿ ಅಂಥವರ ಜೊತೆಗೂಡಿ ಓದಲನುವಾದ. ಮುಂದೆ ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಗಳಿಸಿ ಉತ್ತೀರ್ಣನಾದ.

ನರರಸದೂತಗಳ ಸ್ರವಿಸುವಿಕೆಯಿಂದ ಹರೆಯದಲ್ಲಿ ಭಾವನೆಗಳು ಏರುಪೇರಾಗುತ್ತವೆ. ಒಂದರಲ್ಲಿ ಯಶಸ್ವಿಯಾದರೆ ಆಕಾಶಕ್ಕೇರುತ್ತಾರೆ. ಮತ್ತೊಂದರಲ್ಲಿ ವಿಫಲರಾದರೆ ಪಾತಾಳಕ್ಕಿಳಿದು ಧೈರ್ಯಗುಂದುತ್ತಾರೆ. ಇದು ರಸದೂತಗಳ ಸ್ರವಿಸುವಿಕೆಯಿಂದ ಭಾವನೆಗಳಲ್ಲಿ ಆಗುವ ಏರುಪೇರುಗಳು. ಇದನ್ನು ತಡೆದು, ಸಮಚಿತ್ತವನ್ನು ಸಾಧಿಸಲು ಪ್ರಯತ್ನಿಸಬೇಕಾಗುತ್ತದೆ. ಇದಕ್ಕೆ ಅವಶ್ಯವಿರುವುದು ಹವ್ಯಾಸಗಳು. ಆಟ, ಸಂಗೀತ, ನೃತ್ಯ, ನಾಟಕ, ಒಳ್ಳೆಯ ಪುಸ್ತಕಗಳನ್ನು ಓದುವುದು, ಹೂದೋಟ ಬೆಳೆಸುವುದು, ಮುಂತಾದವು ಹವ್ಯಾಸಗಳೆನಿಸಿಕೊಳ್ಳುತ್ತವೆ. ಹವ್ಯಾಸಗಳು, ಪಠ್ಯೇತರ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಸೋಲು ಗೆಲುವುಗಳ ಅನುಭವವಾಗುತ್ತದೆ. ಸಮಾಜದಲ್ಲಿ ಬೆರೆತಾಗ, ಕೆಲವರು ಹೊಗಳುತ್ತಾರೆ. ಕೆಲವರು ತೆಗಳುತ್ತಾರೆ. ಅವನ್ನು ಸಹಿಸಿಕೊಂಡು ಸಮತೋಲನ ಭಾವನೆಗಳನ್ನು ಸಾಧಿಸಿ ಮುನ್ನಡೆಯಲು ದಾರಿ ಸುಗಮವಾಗುತ್ತದೆ.

ಮೇಲಿನ ಸವಾಲುಗಳೊಂದಿಗೆ ವಿಮರ್ಶಾತ್ಮಕ ಮತ್ತು ಸೃಜನಶೀಲ ಚಿಂತನೆ, ಪರಿಣಾಮಕಾರಿ ಸಂವಹನ, ಮಾನವೀಯ ಸಂಬಂಧ ಮತ್ತು ಭವಿಷ್ಯದಲ್ಲಿ ಎದುರಾಗುವ ಸವಾಲುಗಳನ್ನು ಹರೆಯದಲ್ಲಿ ಕಲಿಯಬೇಕಾಗುತ್ತದೆ. ಜೀವನದ ಮೌಲ್ಯಗಳು, ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುವುದು ಒಂದು ಹರೆಯದ ಸವಾಲು.

ಹೀಗೆ ಹರೆಯದ ಸವಾಲುಗಳನ್ನು ಎದುರಿಸಲು ಆತ್ಮಸ್ಥೈರ್ಯ, ಸಕಾರಾತ್ಮಕ ಚಿಂತನೆ, ಪೋಷಕ, ಉಪಾಧ್ಯಾಯರ ಸಕಾರಾತ್ಮಕ ಮಾರ್ಗದರ್ಶನ ಮತ್ತು ಬಾಲ್ಯದಲ್ಲಿ ಪೋಷಕರು ಕಲಿಸಿದ ಜೀವನ ಕೌಶಲಗಳು ಪೂರಕ ಎಂಬುದನ್ನು ನೆನಪಿಡಬೇಕು.

ಈ ಕಾಲ ಹೇಗೆಲ್ಲ ಬದಲಾಗಿದೆಯಲ್ಲ!

ವಾರದ ವರಸೆ
ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಕಾಲವನ್ನು ತಡೆಯೋರು ಯಾರೂ ಇಲ್ಲ..' ಎಂಬ ಹಾಡೇ ಇದೆ. ಹೌದು ಸ್ವಾಮಿ, ಕಾಲವನ್ನಷ್ಟೇ ಅಲ್ಲ, ಆ ಕಾಲಕ್ಕೆ ತಕ್ಕಂತೆ ಆಗುವ ಬದಲಾವಣೆಗಳನ್ನೂ ತಡೆಯೋರು ಯಾರೂ ಇಲ್ಲ ಎಂದರೂ ಸರಿಯೇ. 'ಬದಲಾವಣೆ ಜಗದ ನಿಯಮ' ಎಂಬೆಲ್ಲಾ ಮಾತುಗಳಿದ್ದರೂ ಕೆಲವರು ಮಾತ್ರ ಬದಲಾವಣೆಯಲ್ಲಿ ಬದನೇಕಾಯಿ ಅಂಥದ್ದೇನಿದೆ ಎಂದು ನಿರ್ಲಕ್ಷಿಸುತ್ತಾರೆ. ಏನೇ ಹೇಳಿ ಹೀಗೆ ಚೇಂಜ್ ಆಗುವುದೆಂದರೆ ಅಥವಾ ಯಾವುದಾದರೂ ಒಂದು ಬಗೆಯ ಚೇಂಜ್ ಕಾಣಿಸಿಕೊಳ್ಳುವುದೆಂದರೆ ಅದು 'ಚಿಲ್ಲರೆ' ವಿಷಯವಂತೂ ಅಲ್ಲವೇ ಅಲ್ಲ ಎಂದೇ ಹೇಳಬಹುದಾಗಿದೆ. ಆದ್ದರಿಂದ ಅವುಗಳಿಗೆ 'ಚಿಲ್' ಆಗಿ ಹೊಂದಿಕೊಳ್ಳುವವರು ಬಹುತೇಕರು. ನಮಗೆ ಬೇಕೋ ಬೇಡವೋ ಕೆಲವೊಂದು ಸಂಗತಿಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಲೇ ಹೋಗುತ್ತವೆ. ಜನರ ಆಸಕ್ತಿ, ಆಯ್ಕೆ, ನಿಲುವು, ಮನೋಧೋರಣೆ ಹಾಗೂ ಜೀವನಕ್ರಮಗಳ ಮೇಲೆ ಈ ನಿಟ್ಟಿನ ಬದಲಾವಣೆಗಳು ತಮ್ಮದೇ ಆದ ಪರಿಣಾಮವನ್ನು ಉಂಟುಮಾಡಿವೆ ಎಂದು ಹೇಳಬಹುದಾಗಿದೆ. ನಾವೂ ಇಂಥ ಬದಲಾವಣೆಗೆ ಸಾಕ್ಷಿಯೋ, ಮೂಕ ಸಾಕ್ಷಿಯೋ ಆದವರೇ. ಹಾಗಂಥ ಇವುಗಳನ್ನು ಸಕಾರಾತ್ಮಕ ಬದಲಾವಣೆಯೋ, ನಕರಾತ್ಮಕ ಬದಲಾವಣೆಯೋ ಷರಾ ಬರೆಯುವುದು ಕಷ್ಟ. ಸುಮ್ಮನೆ ಒಮ್ಮೆ ಆಲೋಚಿಸಿದರೂ ಇಂಥ ಅಸಂಖ್ಯಾತ ಬದಲಾವಣೆಗಳನ್ನು ಪಟ್ಟಿ ಮಾಡಬಹುದು. ಆ ಪೈಕಿ ನಮ್ಮ ನಿಮ್ಮ ನಿತ್ಯ ಜೀವನಕ್ಕೆ ತೀರಾ ಹತ್ತಿರವೆನಿಸುವ ಕೆಲವು ಬದಲಾವಣೆಗಳನ್ನು ಈ ಮೂಲಕ ಗಮನಿಸೋಣವೇ?

- ಸ್ನಾನ ಎಂದಾಕ್ಷಣ ಮೊದಲಿಗೆ ನೆನಪಿಗೆ ಬರುವುದೇ ಸೋಪ್. ಸಾಬೂನು, ಸ್ನಾನ ಮಾಡುವವರ ಪಾಲಿಗೆ ಒಂಥರಾ ಬೂನ್(ವರ) ಇದ್ದಂತೆಯೇ ಸರಿ. ಹಾಗೆಯೇ ಆಪಾದಮಸ್ತಕ ಸಾಬೂನು ಹಚ್ಚಿಕೊಂಡು ಸ್ನಾನ ಮಾಡಲಾಗುತ್ತಿತ್ತು. ಸ್ನಾನದ ಕೋಣೆಯಲ್ಲಿ ಸಾಬೂನೇ ರಾಜನಂತೆ ಮೆರೆಯುತ್ತಿತ್ತು. ಈಗ ಅಲ್ಲಿ ಶ್ಯಾಂಪೂ, ಫೇಸ್‌ವಾಶ್, ವಿವಿಧ ಬಗೆಯ ಜೆಲ್, ಕಂಡೀಷನರ್ ಹೀಗೆ ಇನ್ನೂ ಏನೇನೋ ತುಂಬಿ ತುಳುಕುತ್ತವೆ. 'ದೇಹವೊಂದೇ ಆದರೆ ಹಚ್ಚುವ ಕ್ರೀಮ್/ಸೋಪ್‌ಗಳು ಹಲವು' ಎಂಬಂತಾಗಿದೆ. ಸ್ನಾನದ ಕೊಠಡಿಯೂ ಕನ್ಫ್ಯೂಸಿಂಗ್ ಜಾಗವಾಗಿ ಮಾರ್ಪಾಡಾಗುವಲ್ಲಿ ಇದರ ಪಾತ್ರವೂ ಇದೆ. ಯಾವ ಕ್ರೀಮ್ ಬಳಸಲಿ, ಯಾವ ಸೋಪ್ ಹಚ್ಚಲಿ ಎಂದು ಹೊಸಬರಿಗೆ ಗೊಂದಲವಾಗದೇ ಇರಲಿಕ್ಕಿಲ್ಲ.
- ಹಿರಿಯರ ಕಾಲಿಗೆ ಬಿದ್ದು ಆಶೀರ್ವಾದ ಪಡೆದುಕೊಳ್ಳುವುದು ಕಾಲಾನುಕಾಲದಿಂದಲೂ ಪ್ರಚಲಿತದಲ್ಲಿರುವ ಒಂದು ಸಂಸ್ಕಾರಯುತ ಕ್ರಿಯೆ. ಅದೊಂಥರ ಅವರೆಡೆಗೆ ಭಯ, ಭಕ್ತಿ ಹಾಗೂ ಗೌರವವನ್ನು ತೋರಿಸುವ ಒಂದು ಕ್ರಮವಾಗಿತ್ತು. ಆದರೆ ಈಗ ಕಾಲ ಬದಲಾಗಿದೆ ಹಾಗಾಗಿ ಕಾಲಿಗೆ ಬೀಳುವುದೂ ಕಡಿಮೆಯಾಗಿದೆ. ಅಂದರೆ ಕಾಲಿಗೆ ಬೀಳುವ ಬದಲಿಗೆ ಹಿರಿಯರ ಜೊತೆಗೊಂದು ಸೆಲ್ಫಿ ತೆಗೆಸಿಕೊಂಡರೆ ಅದುವೇ ಈ ಕಾಲದವರು ಆಶೀರ್ವಾದ ಪಡೆದುಕೊಂಡಂತೆ! ಸೆಲ್ಫಿಗೆ ನಕ್ಕರೆ ಆಶೀರ್ವಾದ ಟ್ರಾನ್ಸ್‌ಫರ್ ಆದಂತೆಯೇ ಸರಿ.
- ಪರೀಕ್ಷಾ ಕೊಠಡಿಯಿಂದ ಹೊರಬರುವಾಗ ಬಹುತೇಕರ ಮನಸ್ಸಿನಲ್ಲಿ ಒಂದು ಬಗೆಯ ಚಡಪಡಿಕೆ ಇರುತ್ತದೆ. ಪ್ರಶ್ನೆಗಳು, ಬರೆದ ಉತ್ತರ, ಸರಿ ತಪ್ಪಿನ ಕುತೂಹಲ, ಸಿಗಬಹುದಾದ ಅಂಕಗಳು ಇನ್ನಿತ್ಯಾದಿ ಅಂಶಗಳು ಮನಸ್ಸಿನಲ್ಲಿ ಓಡುತ್ತಿರುವುದೇ ಆ ಕಸಿವಿಸಿಗೆ ಕಾರಣ. ಆದ್ದರಿಂದ ಪರೀಕ್ಷಾ ಹಾಲ್‌ನಿಂದ ಹೊರಬಂದವರೇ ಪ್ರಶ್ನೆಪತ್ರಿಕೆ, ಪುಸ್ತಕ, ನೋಟ್ಸ್ ಇತ್ಯಾದಿಗಳನ್ನು ತೆಗೆದು ತಾಳೆ ಹಾಕುವ ಧಾವಂತದಲ್ಲಿರುತ್ತಾರೆ. ಈಗಲೂ ಪರೀಕ್ಷಾ ಕೊಠಡಿಗಳಿಂದ ಹೊರ ಬರುವವರ ಎದೆಬಡಿತ ಹೆಚ್ಚಿರುತ್ತದೆ. ಅವರೂ ಬ್ಯಾಗ್‌ಗೆ ಕೈ ಹಾಕಿ ತಡಕಾಡಿ ಮೊಬೈಲ್‌ನ್ನು ಹೊರತೆಗೆದು ಒಂದೇ ಸಮನೇ ನೋಡಲಾರಂಭಿಸುತ್ತಾರೆ. ಎಷ್ಟು ಕಾಲ್ ಬಂದಿದೆ, ವಾಟ್ಸಾಪ್‌ಲ್ಲಿ ಯಾರೆಲ್ಲಾ ಮೆಸೇಜ್ ಮಾಡಿದ್ದಾರೆ, ಫೇಸ್‌ಬುಕ್ ನೋಟಿಫಿಕೇಷನ್ ಏನೇನು ಬಂದಿದೆ ಎಂದು ಹುಡುಕಲಾರಂಭಿಸುತ್ತಾರೆ.
- ಎಲ್ಲೇ ಹೋದರೂ ವೀಕ್ಷಣೆಯ ಅಥವಾ ನೋಡುವಿಕೆಯ ನೇತೃತ್ವವನ್ನು ಸಾಮಾನ್ಯವಾಗಿ ನಮ್ಮ ನೇತ್ರಗಳು ವಹಿಸಿಕೊಳ್ಳುತ್ತಿದ್ದವು. ಎಲ್ಲವೂ ಕಣ್ಣ ಕನ್ನಡಿಯಲ್ಲಿ ಪ್ರತಿಫಲನಗೊಂಡು, ಆ ಪೈಕಿ ಕೆಲವಷ್ಟೇ ಕ್ಯಾಮೆರಾ ಕಣ್ಣಲ್ಲಿ ಪ್ರತಿಬಿಂಬಿತವಾಗುತ್ತಿದ್ದವು. ಬದಲಾದ ಸನ್ನಿವೇಶದಲ್ಲಿ ಪ್ರತಿಯೊಂದು ಕ್ಯಾಮೆರಾದಲ್ಲಿ ಸೆರೆಯಾಗಿ ಎಲ್ಲೋ ಕೆಲವೊಂದಷ್ಟನ್ನು ಮಾತ್ರ ಕಣ್ಣಿನಿಂದ ವೀಕ್ಷಿಸುವಂತಾಗಿದೆ. ಏನೋ ಅದ್ಭುತವಾದುದನ್ನು ನೋಡುವಾಗ, ತಮ್ಮ ತಮ್ಮ ಚಿಕ್ಕ ಮಕ್ಕಳನ್ನು ಎತ್ತಿಹಿಡಿದು ತೋರಿಸುವ ಬದಲಿಗೆ ತಮ್ಮಲ್ಲಿರುವ ಮೊಬೈಲ್ ಕ್ಯಾಮೆರಾಗಳನ್ನು ಎತ್ತಿಹಿಡಿದು ರೆಕಾರ್ಡ್ ಮಾಡಿಕೊಳ್ಳುವಲ್ಲಿ ವ್ಯಸ್ತರಾಗುವವರೇ ಹೆಚ್ಚು. ವಿಪರ್ಯಾಸ ಏನೆಂದರೆ ಹಾಗೆ ರೆಕಾರ್ಡ್ ಆಗಿ ಸಂಗ್ರಹವಾದ ಬಹುಪಾಲು ಫೋಟೊ, ವೀಡಿಯೋಗಳನ್ನು ಹೆಚ್ಚಿನವರು ತಿರುಗಾ ನೋಡುವುದೇ ಇಲ್ಲ.
- ಸಣ್ಣ ಸಣ್ಣ ಗುಂಪುಗಳಲ್ಲಿ ಹರಟೆ ಹೊಡೆಯುವ ಅಭ್ಯಾಸ ಯಾವಾಗಿನಿಂದಲೂ ಇರುವಂಥದ್ದು. ಚಹಾದಂಗಡಿಯ ಮುಂದೆ, ಅರಳಿ ಕಟ್ಟೆಯ ಮೇಲೆ, ಇಂಥ ಗುಂಪುಗಳು ಸಾಮಾನ್ಯವಾಗಿ ಕಂಡುಬರುತ್ತವೆ ಈಗಲೂ ಹಾಗೆಯೇ ಗುಂಪುಗಳೇನೋ ಇವೆ. ಆದರೆ ಅವುಗಳ ಸ್ವರೂಪ ಮಾತ್ರ ಬದಲಾಗಿದೆ. ಆ ಬಗೆಯ ಗುಂಪುಗಳಿಗಿಂತಲೂ ಫೇಸ್‌ಬುಕ್, ವಾಟ್ಸಾಪ್‌ನ ಇ–ಗುಂಪುಗಳು ಅಂದರೆ ಗ್ರೂಪ್‌ಗಳೇ ಕಂಡುಬರುತ್ತವೆ. ಅಲ್ಲೂ ಅದೇ ವೈಖರಿಯ ಚರ್ಚೆಗಳು ನಡೆಯುತ್ತವೆ. ಈ ಗುಂಪು(ಗ್ರೂಪ್)ಗಳ ಪ್ರಭಾವ ಎಷ್ಟರ ಮಟ್ಟಿಗೆ ಹೆಚ್ಚಿದೆಯೆಂದರೆ ಎಲ್ಲರೂ ಒಂದಿಲ್ಲೊಂದು ಸಂದರ್ಭದಲ್ಲಿ 'ಗುಂಪಿನಲ್ಲಿ(ಗ್ರೂಪ್‌ನಲ್ಲಿ) ಗೋವಿಂದ ಆಗಿಯೇ ಇರುತ್ತಾರೆ'. ಊರಿಗೆ ಬಂದವರು ಈ ಬಗೆ ಬಗೆಯ ಗ್ರೂಪ್‌ಗಳಿಗೆ ಬರದೇ ಇರಲಾರರು.
- ಮನೆಗೆ ಬಂದ ಅತಿಥಿಗಳನ್ನು ಚಹಾ, ತಿಂಡಿ, ಪಾನೀಯ ನೀಡಿ ಉಪಚರಿಸುವ ಅತಿಥಿ ಸತ್ಕಾರ ಭಾವ ನಮ್ಮ ನೆತ್ತರಲ್ಲೇ ಇದೆ ಅಂತಾರೆ. ಅದೊಂಥರ ಬಂದವರನ್ನು ವಿಚಾರಿಸಿಕೊಳ್ಳುವ ರೀತಿಯೇ ಆಗಿದೆ. ಈಗಲೂ ವಿಚಾರಿಸಿಕೊಳ್ಳುವ ಕ್ರಮ ಇದೆ. ಆದರೆ ಈ ದಿನಗಳಲ್ಲಿ ಮೇಲೆ ತಿಳಿಸಿದವುಗಳ ಜೊತೆಗೆ ಅವರ ಮೊಬೈಲ್‌ಗೆ ಸೂಕ್ತ ಚಾರ್ಜರ್ ನೀಡುವುದು, ಚಾರ್ಜ್ ಮಾಡಿಕೊಳ್ಳಲು ಪಾಯಿಂಟ್ ಎಲ್ಲಿದೆ ಎಂದು ತೋರಿಸುವುದೂ ಸೇರಿದೆ. ಮನುಷ್ಯರು ರಿಚಾರ್ಜ್ ಆಗುವುದಕ್ಕಿಂತಲೂ ಮೊಬೈಲ್ ರಿಚಾರ್ಜ್ ಆಗುವುದೇ ಈಗಿನವರ ಆದ್ಯತೆಯಾಗಿದೆಯೆಂದರೆ ಅತಿಶಯವೇನಲ್ಲ.
- ಮನೆ ಹುಡುಕೋದು ತುಂಬಾ ಕಷ್ಟದ ಕೆಲ. ಹಾಗಾಗಿ ಸೂಕ್ತವಾದ ಮನೆಯನ್ನು ಆರಿಸಿಕೊಳ್ಳಲು ಮನೆಯ ಅಂದ–ಚೆಂದ, ಗಾಳಿ–ಬೆಳಕು, ರೂಮ್‌ಗಳ ಸಂಖ್ಯೆ, ನೀರಿನ ಲಭ್ಯತೆ ಇತ್ಯಾದಿಗಳನ್ನು ಪರಿಗಣಿಸಲಾಗುತ್ತಿತ್ತು. ಈಗಲೂ ಅದನ್ನೆಲ್ಲಾ ನೋಡುತ್ತಾರೆ. ಅವುಗಳ ಜೊತೆಗೆ ನೆಟ್‌ವರ್ಕ್ ಲಭ್ಯತೆಯ ಬಗ್ಗೆ ಮೊದಲು ತಿಳಿದುಕೊಳ್ಳುತ್ತಾರೆ. ಯಾವ ನೆಟ್‌ವರ್ಕ್ ಸಿಕ್ಕೀತು, ಎಷ್ಟು ವೇಗ ಇತ್ಯಾದಿಗಳನ್ನೂ ಪರಿಶೀಲಿಸಲಾಗುತ್ತದೆ. ನಗರಗಳಲ್ಲಿ ಈ ಸಾಧ್ಯತೆ ಸ್ವಲ್ಪ ಕಡಿಮೆಯಾದರೂ ಹಳ್ಳಿಗಳಲ್ಲಂತೂ ಇದು ಬಲುಮುಖ್ಯ! ನೆಟ್‌ವರ್ಕ್ ಇರುವ ಜಾಗದ ನೆಟ್‌ವರ್ತ್ ಎಲ್ಲಾ ರೀತಿಯಲ್ಲೂ ಹೆಚ್ಚೇ.
- ಜನರ ವರ್ತನೆ, ಮೂಡ್, ಗುಣಾವಗುಣಗಳ ಬಗ್ಗೆ ತಿಳಿದುಕೊಳ್ಳಲು ಅಕ್ಕಪಕ್ಕದವರು, ಸ್ನೇಹಿತರು, ಬಂಧುಗಳಲ್ಲಿ ವಿಚಾರಿಸಬೇಕಿತ್ತು. ಇಂದಿನ ಕಾಲಕ್ಕೆ ಅದೇನೂ ಅನಿವಾರ್ಯವಲ್ಲ. ಬೇರೆ ಆಯ್ಕೆಯಾಗಿ ಅವರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿಕೊಳ್ಳುವ ಸ್ಟೇಟಸ್, ಪೋಸ್ಟ್, ಶೇರ್ ಇತ್ಯಾದಿಗಳ ಆಧಾರದಲ್ಲಿ ಒಂದು ಮಟ್ಟಿಗೆ ಎಲ್ಲವನ್ನೂ ಊಹಿಸಲು ಸಾಧ್ಯವಿದೆ. ಹಾಗೆಯೇ ಹಿಂದಿನ ಕಾಲದಂತೆ ಅವರ ರೂಮು, ಪೆಟ್ಟಿಗೆ, ಬ್ಯಾಗುಗಳನ್ನು ಹುಡುಕುವ ಬದಲಿಗೆ ಈ ಖಾತೆಗಳಲ್ಲಿ ಸ್ವಲ್ಪ ಜಾಲಾಡಿದರೆ ಎಲ್ಲ ಮಾಹಿತಿಯೂ ಅನಾಯಾಸವಾಗಿ ದೊರಕುತ್ತದೆ. ಸೋಷಿಯಲ್ ಮೀಡಿಯಾ ಅಕೌಂಟ್ ಕೇವಲ ಅಕೌಂಟ್ ಅಲ್ಲ, ಅದು ಬದುಕಿನ ಎಲ್ಲಾ ಲೆಕ್ಕಾಚಾರಗಳನ್ನೂ ಹೀಗೆ ತನ್ನೊಳಗೆ ಅಡಗಿಸಿಕೊಂಡಿರುವ ಮೂಲಕ ಬದುಕಿನ ಅಕೌಂಟ್ ಆಗಿ ಬದಲಾಗಿದೆ.
- ಅಪ್ಪ – ಅಮ್ಮ ಕೆಲಸ ಮಾಡುವುದು, ಅವರ ಮಕ್ಕಳು ಸಣ್ಣ ಪುಟ್ಟ ಸಹಾಯ ಮಾಡುವುದು ಒಂದು ಚೆಂದನೆಯ ಆಪ್ತ ಪ್ರಕ್ರಿಯೆ. ಅದರಿಂದ ಅವರಿಗೆ ಕೆಲಸದ ಅನುಭವ, ಹಿಡಿತ ದೊರಕುತ್ತದೆ ಹಾಗೂ ತಂದೆತಾಯಿಯರ ಶ್ರಮವೂ ಅರಿವಾಗುತ್ತದೆ. ಈಗಲಾದರೆ ಹಾಗಲ್ಲ, ಜೊತೆಯಲ್ಲಿ ಕೆಲಸ ಮಾಡುವ ಬದಲಿಗೆ ಅದನ್ನು ವೀಡಿಯೋ ರೆಕಾರ್ಡ್ ಮಾಡುತ್ತಾ ಎಲ್ಲರಿಗೂ ಅಲ್ಲಿ ಆಗುವ ಕೆಲಸದ ಕಾಮೆಂಟ್ರಿ ಹೇಳಿ, ಕೆಲಸ ಮಾಡುತ್ತಿರುವ ತಂದೆ ತಾಯಂದಿರಿಂದಲೂ ಹಲೋ ಹೇಳಿಸಿ ಅದನ್ನೆಲ್ಲಾ ಸಾಮಾಜಿಕ ಜಾಲತಾಣಗಳಿಗೇರಿಸಿ ಲೈಕುಗಳ ಲೆಕ್ಕ ಹಾಕುವುದರಲ್ಲಿ ಮುಳುಗಿಹೋಗುತ್ತಾರೆ! ಅಷ್ಟಕ್ಕೆ ಸೀಮಿತವಾಗಿಲ್ಲ, ಮೊನಿಟೈಸೇಷನ್ ಆದರೆ, ಅಲ್ಲೂ ದುಡಿಮೆಯ ಅವಕಾಶ ಇರುವುದರಿಂದ ಅದಕ್ಕೂ ಹೆತ್ತವರು ಬೆಂಬಲ ನೀಡುವುದನ್ನು ಕಾಣಬಹುದು.

ಓವರ್‌ಡೋಸ್: ಏನೇ ಬದಲಾದರೂ ಗೋಡೆ ಮೇಲೆ ಉಗುಳುವುದು ಮಾತ್ರ ಬದಲಾಗಲೇ ಇಲ್ಲ. ಆಗೆಲ್ಲಾ ಸಿಕ್ಕ ಸಿಕ್ಕ ಕಟ್ಟಡದ ಗೋಡೆಗಳ ಮೇಲೆ ಉಗುಳುತ್ತಿದ್ದರು ಆದರೆ ಈಗ ಅದಕ್ಕಿಂತಲೂ ಹೆಚ್ಚಾಗಿ ಕಂಡಕಂಡ ಫೇಸ್‌ಬುಕ್ ಗೋಡೆ(ವಾಲ್) ಮೇಲೆ ಉಗುಳುತ್ತಾರೆ.

ವಿದ್ಯುತ್ ಸ್ಥಾವರಗಳ ನಾಶಗೊಳಿಸುವುದಾಗಿ ಟ್ರಂಪ್ ಬೆದರಿಕೆ | ಅಮೆರಿಕ ಅಧ್ಯಕ್ಷರಿಗೆ ಕ್ಯಾರೇ ಎನ್ನದ ಇರಾನ್
ವೈರಿ ದೇಶಗಳ ಹೊರತುಪಡಿಸಿ ಉಳಿದೆಲ್ಲಾ ರಾಷ್ಟ್ರಗಳ ನೌಕೆಗಳಿಗೆ ಹಾರ್ಮುಜ್ ಜಲಸಂಧಿ ತೆರೆದ ಇರಾನ್

ಶತ್ರುಗಳಿಗಿಲ್ಲ ಹಾರ್ಮುಜ್ ಪ್ರವೇಶ

ಟೆಹ್ರಾನ್: ತನ್ನ ಶತ್ರುಗಳು ಮತ್ತು ಅವರೊಂದಿಗೆ ನಂಟಿರುವ ರಾಷ್ಟ್ರಗಳಿಗೆ ಸೇರಿದ ಹಡಗುಗಳನ್ನು ಹೊರತುಪಡಿಸಿ ಉಳಿದೆಲ್ಲಾ ತೈಲ ಹಡಗುಗಳಿಗೆ ಹಾರ್ಮುಜ್ ಜಲಸಂಧಿಯಲ್ಲಿ ಸಂಚರಿಸಲು ಮುಕ್ತ ಅವಕಾಶ ನೀಡುವುದಾಗಿ ಇರಾನ್ ಪ್ರತಿನಿಧಿ ಅಲಿ ಮೌಸಾವಿ ಭಾನುವಾರ ಘೋಷಿಸಿದೆ.

ಮುಂದಿನ 48 ಗಂಟೆಗಳೊಳಗೆ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯದಿದ್ದರೆ ಇರಾನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ನೀಡಿದ ಬಳಿಕ ಇರಾನ್ ತನ್ನ ನಿಲುವು ಸಡಿಲಗೊಳಿಸಿದೆ. ಆದರೆ ಶತ್ರು ರಾಷ್ಟ್ರಗಳು, ಅವುಗಳೊಂದಿಗೆ ನಂಟಿರುವ ರಾಷ್ಟ್ರಗಳ ಹಡಗುಗಳಿಗೆ ಹಾರ್ಮುಜ್ ಜಲಸಂಧಿಯನ್ನು ದಾಟಲು ಅವಕಾಶ ನೀಡುವುದಿಲ್ಲ ಎಂದು ಇರಾನ್ ಪ್ರತಿನಿಧಿ ತಿಳಿಸಿದ್ದಾರೆ.

ರಾಜತಾಂತ್ರಿಕ ಮಾತುಕತೆಗಳು ಇರಾನ್‌ಗೆ ಆದ್ಯತೆಯಾಗಿವೆ. ಆದರೆ ದಾಳಿಗಳ ಸಂಪೂರ್ಣ ನಿಲ್ಲಿಸುವುದು, ಪರಸ್ಪರ ನಂಬಿಕೆ ಮತ್ತು ವಿಶ್ವಾಸ ಇನ್ನಷ್ಟು ಮುಖ್ಯ ಎಂದು ಮೌಸವಿ ಹೇಳಿದ್ದಾರೆ.

ಶತ್ರುಗಳಿಗಿಲ್ಲ ಹಡಗು ಸಂಚಾರಕ್ಕೆ ಅವಕಾಶ: ಇರಾನ್ ಶತ್ರುಗಳೆಂದರೆ, ಇಸ್ರೇಲ್ ಮತ್ತು ಅಮೆರಿಕ. ಅಂದರೆ ಇಸ್ರೇಲ್, ಅಮೆರಿಕ ಸಹಿತ ಅವುಗಳೊಂದಿಗೆ ನಿಕಟ ಸಂಪರ್ಕದಲ್ಲಿರುವ ರಾಷ್ಟ್ರಗಳ ಹಡಗುಗಳಿಗೆ ಅವಕಾಶ ನೀಡುವುದಿಲ್ಲ ಎಂದು ಇರಾನ್ ಹೇಳಿದೆ.

ಇರಾನ್ ವಕ್ತಾರ ಹೇಳಿಕೆಯು, ಟ್ರಂಪ್ ಬೆದರಿಕೆ ಹಾಕಿದ ಕೆಲವೇ ಗಂಟೆಗಳ ಬಳಿಕ ಬಂದಿದೆ. ಅಂತಾರಾಷ್ಟ್ರೀಯ ಸಮುದ್ರಯಾನ ಸಂಘಟನೆಯ ಇರಾನ್ ಪ್ರತಿನಿಧಿ ಅಲಿ ಮೌಸವಿ ಭಾನುವಾರ ಮಾತನಾಡಿದ್ದು, ಇರಾನ್‌ನೊಂದಿಗೆ ಭದ್ರತೆ ಮತ್ತು ಸುರಕ್ಷತಾ ವ್ಯವಸ್ಥೆ ಖಚಿತಪಡಿಸುವ ಮೂಲಕ ಕಿರಿದಾದ ಜಲಮಾರ್ಗದಲ್ಲಿ ಸಂಚರಿಸಲು ಅವಕಾಶ ನೀಡಲಾಗುವುದು ಎಂದು ಇರಾನ್ ಹೇಳಿದೆ.

ಈಗಿನ ಸ್ಥಿತಿಗೆ ಇಸ್ರೇಲ್, ಅಮೆರಿಕ ಕಾರಣ: ಗಲ್ಫ್‌ನಲ್ಲಿ ಸಮುದ್ರ ಸುರಕ್ಷತೆಯನ್ನು ಸುಧಾರಿಸಲು ಮತ್ತು ನಾವಿಕರನ್ನು ರಕ್ಷಿಸಲು ವಿಶ್ವಸಂಸ್ಥೆಯೊಂದಿಗೆ ಸಹಕರಿಸಲು ಇರಾನ್ ಸಿದ್ಧವಾಗಿದೆ. ಹಾರ್ಮುಜ್‌ನ ಈಗಿನ ಪರಿಸ್ಥಿತಿಗೆ ಇಸ್ರೇಲ್ ಮತ್ತು ಅಮೆರಿಕ ನಡೆಸಿದ ದಾಳಿಗಳೇ ಮೂಲ ಕಾರಣವೆಂದು ಮೌಸವಿ ವಾದಿಸಿದ್ದಾರೆ.

ಶತ್ರುಗಳ ಮಿತ್ರರಿಗೆ 1 ಲೀ. ತೈಲ ಕೊಡಲ್ಲ: ಫೆ.28ರಂದು ಮಹತ್ವದ ಇಂಧನ ಪೂರೈಕೆ ಮಾರ್ಗವನ್ನು ಇರಾನ್ ಮುಚ್ಚಿತ್ತು. ವಿಶ್ವದ ಸುಮಾರು ಐದನೇ ಒಂದು ಭಾಗ (ಶೇ.20) ತೈಲ ಮತ್ತು ಎಲ್‌ಪಿಜಿ ಈ ಮಾರ್ಗದ ಮೂಲಕ ಸಾಗುತ್ತದೆ. ಒಂದು ಲೀ. ತೈಲವನ್ನೂ ಅಮೆರಿಕ, ಇಸ್ರೇಲ್ ಮತ್ತು ಅವುಗಳ ಮಿತ್ರರಾಷ್ಟ್ರಗಳಿಗೆ ಕೊಡುವುದಿಲ್ಲ ಎಂದು ಇರಾನ್ ಹೇಳಿತ್ತು.

ಇಂಧನ ವ್ಯತ್ಯಯ ತಡೆಗಟ್ಟಿದ ಇರಾನ್?: ಮಧ್ಯಪ್ರಾಚ್ಯ ಯುದ್ಧದಿಂದ ಉಂಟಾದ ಜಾಗತಿಕ ಮಟ್ಟದ ಇಂಧನ ವ್ಯತ್ಯಯ ಬಹುಶಃ ಕಡಿಮೆ ಆಗಬಹುದು. ಇರಾನ್ ನಿರ್ಧಾರದಿಂದ ಹಲವು ರಾಷ್ಟ್ರಗಳು ನಿಟ್ಟುಸಿರು ಬಿಡುವಂತಾಗಿದೆ.

ನ್ಯಾಟೋಗಿಲ್ಲ ಆಸಕ್ತಿ: ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳಿಗೆ ರಕ್ಷಣೆ ಒದಗಿಸಲು ಅಮೆರಿಕಾ ನೌಕಾಪಡೆ ಒಕ್ಕೂಟವನ್ನು ರಚಿಸಲು ಪ್ರಯತ್ನಿಸಿದೆ. ಆದರೆ ಅಧ್ಯಕ್ಷ ಟ್ರಂಪ್ ಕರೆಗೆ ಯಾವುದೇ ನ್ಯಾಟೋ ಮಿತ್ರರಾಷ್ಟ್ರಗಳು ಬೆಂಬಲ ನೀಡಿಲ್ಲ.



ಟ್ರಂಪ್ ಬೆದರಿಕೆ

ಮುಂದಿನ 48 ಗಂಟೆಗಳೊಳಗೆ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯದಿದ್ದರೆ, ಇರಾನ್‌ನ ವಿದ್ಯುತ್ ಸ್ಥಾವರಗಳನ್ನು ನಾಶ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ರಾತ್ರಿ ಬೆದರಿಕೆ ಹಾಕಿದ್ದರು. ಇರಾನ್‌ನ ಹಲವು ವಿದ್ಯುತ್ ಸ್ಥಾವರಗಳ ಮೇಲೆ ಅಮೆರಿಕ ದಾಳಿ ನಡೆಸಲಿದ್ದು, ಇರಾನ್‌ನ ಅತಿ ದೊಡ್ಡ ವಿದ್ಯುತ್ ಸ್ಥಾವರವನ್ನು ನಾಶ ಮಾಡುವ ಮೂಲಕ ಆರಂಭಿಸಲಿದ್ದೇವೆ ಎಂದು ಟ್ರಂಪ್ ಟ್ರುತ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ.

ಇಸ್ರೇಲ್ ಮೇಲೆ ಇರಾನ್ ದಾಳಿ: 180 ಜನಕ್ಕೆ ಗಾಯ

ಜೆರುಸಲೇಂ: ಇರಾನ್ ಶನಿವಾರ ನಡೆಸಿದ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಗಳು ಇಸ್ರೇಲ್‌ನ ದಕ್ಷಿಣದ ನಗರಗಳಾದ ಡಿಮೋನಾ ಮತ್ತು ಆರಾದ್ ಮೇಲೆ ಅಪ್ಪಳಿಸಿದ್ದು, ಕನಿಷ್ಠ 180 ಜನರು ಗಾಯಗೊಂಡಿದ್ದಾರೆ. ಇದರಿಂದ ಕಳೆದ ನಾಲ್ಕು ವಾರಗಳಿಂದ ನಡೆಯುತ್ತಿರುವ ಸಂಘರ್ಷ ಮತ್ತಷ್ಟು ಉಲ್ಬಣಿಸಿದೆ. ಇಸ್ರೇಲ್ ಆರೋಗ್ಯ ಸಚಿವಾಲಯದ ಪ್ರಕಾರ, ಆರಾದ್‌ನಲ್ಲಿ 116 ಮತ್ತು ಡಿಮೋನಾದಲ್ಲಿ 64 ಜನರು ಗಾಯಗೊಂಡಿದ್ದು, ಇವರಲ್ಲಿ 10 ವರ್ಷದ ಬಾಲಕನೂ ಸೇರಿದ್ದಾನೆ. ವಸತಿ ಕಟ್ಟಡಗಳು ನಾಶವಾಗಿದ್ದು, ಹಲವಾರು ಕಡೆ ಬೆಂಕಿ ಕಾಣಿಸಿಕೊಂಡಿದೆ. ವಾಯು ರಕ್ಷಣಾ ವ್ಯವಸ್ಥೆಗಳು ಕ್ಷಿಪಣಿಗಳನ್ನು ತಡೆಯುವಲ್ಲಿ ಅವು ವಿಫಲವಾಗಿವೆ, ಎಂದು ಇಸ್ರೇಲ್ ಮಿಲಿಟರಿ ಅಧಿಕಾರಿಗಳು ತಿಳಿಸಿದ್ದಾರೆ.



ವಿಕಿರಣ ಸೋರಿಕೆ ಆಗಿಲ್ಲ

ನಟಾಂಜ್ ಪರಮಾಣು ಸಂಕೀರ್ಣದ ಮೇಲೆ ನಡೆದ ದಾಳಿಗೆ ಪ್ರತೀಕಾರವಾಗಿ ಈ ದಾಳಿ ನಡೆಸಲಾಗಿದೆ. ಡಿಮೋನಾದಲ್ಲಿ ಇಸ್ರೇಲ್‌ನ ಪ್ರಮುಖ ಪರಮಾಣು ಸಂಶೋಧನಾ ಕೇಂದ್ರವಿದ್ದರೂ, ಅಲ್ಲಿ ಯಾವುದೇ ಹಾನಿ ಅಥವಾ ವಿಕಿರಣ ಸೋರಿಕೆ ಪತ್ತೆಯಾಗಿಲ್ಲ ಎಂದು ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (ಐಎಇಎ) ಖಚಿತಪಡಿಸಿದೆ.

10 ಹಿಜ್ಬುಲ್ಲಾ ಉಗ್ರರು ಬಲಿ

ದಕ್ಷಿಣ ಲೆಬನಾನ್‌ನ ಹಲವು ಹಿಜ್ಬುಲ್ಲಾ ಅಡಗುದಾಣಗಳ ಮೇಲೆ ದಾಳಿ ನಡೆಸಿ, 10ಕ್ಕೂ ಹೆಚ್ಚು ಭಯೋತ್ಪಾದಕರನ್ನು ಹೊಡೆದುರುಳಿಸಿದ್ದೇವೆ. ದೊಡ್ಡ ಪ್ರಮಾಣದ ಶಸ್ತ್ರಾಗಾರಗಳನ್ನು ಪತ್ತೆಹಚ್ಚಿರುವುದಾಗಿ ಇಸ್ರೇಲ್ ಸೇನೆ (ಐಡಿಎಫ್) ಭಾನುವಾರ ಘೋಷಿಸಿದೆ.ದಾಳಿ ನಡೆಸಿದ ಅಡಗುದಾಣಗಳಲ್ಲಿ ದಕ್ಷಿಣ ಲೆಬನಾನ್‌ನಲ್ಲಿರುವ ಹಿಜ್ಬುಲ್ಲಾ ಸಭಾ ಕೇಂದ್ರವೂ ಸೇರಿದ್ದು, ಪ್ರದೇಶದಿಂದ ರಾಕೆಟ್‌ಗಳ ಸಹಿತ ಹಲವು ಶಸ್ತ್ರಾಸ್ತ್ರಗಳನ್ನು ಇಸ್ರೇಲ್ ಸೇನೆ ವಶಪಡಿಸಿಕೊಂಡಿದೆ. ಈ ಶಸ್ತ್ರಗಳನ್ನು ಐಡಿಎಫ್ ಸೈನಿಕರು ಮತ್ತು ಇಸ್ರೇಲ್ ಸೇನೆಯ ವಿರುದ್ಧ ಭಯೋತ್ಪಾದನಾ ದಾಳಿಗಳನ್ನು ನಡೆಸಲು ಬಳಸಲಾಗುತ್ತಿತ್ತು ಎಂದು ಐಡಿಎಫ್ ತಿಳಿಸಿದೆ. ಶನಿವಾರ ರಾತ್ರಿ 9 ಹಿಜ್ಬುಲ್ಲಾ ಉಗ್ರರನ್ನು ಐಡಿಎಫ್ ಹೊಡೆದುರುಳಿಸಿತ್ತು.

ಅಮೆರಿಕದ ಎಫ್-15 ಹೊಡೆದುರುಳಿಸಿದ ಇರಾನ್

ಟೆಹ್ರಾನ್: ಅಮೆರಿಕ ಮೇಲೆ ಇನ್ನಿಲ್ಲದಂತೆ ಮುಗಿಬಿದ್ದಿರುವ ಇರಾನ್ ಇದೀಗ ಅಮೆರಿಕದ ಮತ್ತೊಂದು ಎಫ್-15 ಯುದ್ಧ ವಿಮಾನವನ್ನು ಹೊಡೆದುರುಳಿಸಿದ್ದಾಗಿ ಘೋಷಿಸಿದೆ. ಇರಾನ್ ಸೇನೆಯು ಭಾನುವಾರ ದೇಶದ ದಕ್ಷಿಣ ಕರಾವಳಿಯಲ್ಲಿ ಮತ್ತು ಹಾರ್ಮುಜ್ ದ್ವೀಪದ ಬಳಿ ತನ್ನ ವಾಯು ರಕ್ಷಣಾ ವ್ಯವಸ್ಥೆಯನ್ನು ಬಳಸಿಕೊಂಡು ಶತ್ರು ರಾಷ್ಟ್ರ ಅಮೆರಿಕದ ಎಫ್-15 ಅನ್ನು ಹೊಡೆದುರುಳಿಸಿರುವುದಾಗಿ ಹೇಳಿಕೊಂಡಿದೆ. ಇತ್ತೀಚಿನ ದಾಳಿ ದೃಢಪಟ್ಟರೆ, ಅಮೆರಿಕದ ವಿರುದ್ಧ ನಡೆಯುತ್ತಿರುವ ಸಂಘರ್ಷದಲ್ಲಿ ಇರಾನ್ ಕನಿಷ್ಠ ಅರ್ಧ ಡಜನ್ ಅಮೆರಿಕನ್ ಜೆಟ್‌ಗಳನ್ನು ಹೊಡೆದುರುಳಿಸಿದಂತಾಗಿದೆ ಎನ್ನಲಾಗಿದೆ. ಸುಧಾರಿತ ಎಫ್ -15 ಫೈಟರ್ ಜೆಟ್ ಅನ್ನು ಇರಾನಿನ ವಾಯು ರಕ್ಷಣಾ ಪಡೆಯ ನೆಲದಿಂದ ಗಾಳಿಗೆ ವ್ಯವಸ್ಥೆಗಳನ್ನು ಬಳಸಿಕೊಂಡು ಹೊಡೆದುರುಳಿಸಲಾಗಿದೆ ಎಂದು ಇರಾನ್‌ನ ಫಾರ್ಸ್ ನ್ಯೂಸ್ ವರದಿ ಮಾಡಿದೆ. ಇರಾನ್ ನ ವಾಯು ರಕ್ಷಣಾ ವ್ಯವಸ್ಥೆಯು ಎಫ್ -15 ಫೈಟರ್ ಜೆಟ್ ಅನ್ನು ಯಶಸ್ವಿಯಾಗಿ ಲಾಕ್ ಮಾಡಿರುವುದನ್ನು ತೋರಿಸುವ ವೀಡಿಯೊವನ್ನು ಇರಾನಿನ ಮಾಧ್ಯಮವು ಅಪ್‌ಲೋಡ್ ಮಾಡಿದೆ.

ಟ್ರಂಪ್ ಬೆದರಿಕೆಗೆ ಇರಾನ್ ಪ್ರತ್ಯುತ್ತರ

ಹಾರ್ಮುಜ್ ಜಲಸಂಧಿಯಲ್ಲಿ ಸಂಚರಿಸಲು ಮುಕ್ತ ಅವಕಾಶ ನೀಡದಿದ್ದರೆ ಇರಾನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ಮಾಡುವುದಾಗಿ ಅಮೆರಿಕದ ಬೆದರಿಕೆಗೆ ಇರಾನ್ ಪ್ರತ್ಯುತ್ತರ ನೀಡಿದ್ದು, ಒಂದು ವೇಳೆ ವಾಷಿಂಗ್ಟನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸಿದರೆ ಜಲಸಂಧಿಯನ್ನು ಸಂಪೂರ್ಣವಾಗಿ ಮುಚ್ಚುತ್ತೇವೆಂದು ಹೇಳಿದೆ.

ಇರಾನ್ ಕ್ಷಿಪಣಿ ದಾಳಿಯಿಂದ ಜಗತ್ತಿಗೆ ಅಪಾಯ: ಇಸ್ರೇಲ್



ಜೆರುಸಲೇಂ: ಇತ್ತೀಚೆಗೆ ಇಸ್ರೇಲ್ ಮತ್ತು ಡಿಯಾಗೋ ಗಾರ್ಸಿಯಾ ಮೇಲೆ ಇರಾನ್ ನಡೆಸಿದ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಗಳು, ಟೆಹ್ರಾನ್ ಈಗ ಇಡೀ ಯುರೋಪ್ ಖಂಡಕ್ಕೆ ಅಪಾಯವನ್ನುಂಟು ಮಾಡುವ ಸಾಮರ್ಥ್ಯ ಹೊಂದಿದೆ ಎಂಬುದನ್ನು ಸಾಬೀತುಪಡಿಸಿವೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಭಾನುವಾರ ಘೋಷಿಸಿದ್ದಾರೆ.

ಶನಿವಾರ ನಡೆದ ಕ್ಷಿಪಣಿ ದಾಳಿಯಲ್ಲಿ 115 ಜನರು ಗಾಯಗೊಂಡಿದ್ದ ದಕ್ಷಿಣ ಇಸ್ರೇಲ್‌ನ ಆರಾದ್ ನಗರಕ್ಕೆ ನೆತನ್ಯಾಹು ಭೇಟಿ ನೀಡಿದ್ದರು. ಇರಾನ್ ಪಡೆಗಳು 4,000 ಕಿಮೀ ದೂರದಲ್ಲಿರುವ ಡಿಯಾಗೋ ಗಾರ್ಸಿಯಾದ ಬ್ರಿಟಿಷ್-ಅಮೆರಿಕನ್ ವಾಯುನೆಲೆ ಮತ್ತು ಜೆರುಸಲೇಂನ ಪವಿತ್ರ ಸ್ಥಳಗಳ ಸಮೀಪವಿರುವ ಪ್ರದೇಶಗಳನ್ನು ಗುರಿಯಾಗಿಸಿಕೊಂಡಿದ್ದವು ಎಂದು ವರದಿಯಾಗಿದೆ.

ಇರಾನ್ ಆಡಳಿತವನ್ನು ಎದುರಿಸಲು ಇಸ್ರೇಲ್ ಮತ್ತು ಅಮೆರಿಕದ ನಡುವಿನ ಸಹಯೋಗ ಅತ್ಯಗತ್ಯ. ಟೆಹ್ರಾನ್‌ನ ಪರಮಾಣು ಮತ್ತು ಕ್ಷಿಪಣಿ ಉತ್ಪಾದನಾ ಸಾಮರ್ಥ್ಯಗಳನ್ನು ನಾಶಪಡಿಸುವತ್ತ ಪ್ರಸ್ತುತ ಮಿಲಿಟರಿ ಕಾರ್ಯಾಚರಣೆಗಳನ್ನು ಕೇಂದ್ರೀಕರಿಸಲಾಗಿದೆ. ಈ ಜಾಗತಿಕ ಬೆದರಿಕೆಯನ್ನು ಹತ್ತಿಕ್ಕಲು ಮತ್ತು ಇರಾನ್‌ನ ಪ್ರಸ್ತುತ ಆಡಳಿತವನ್ನು ಉರುಳಿಸಲು ಅಂತಾರಾಷ್ಟ್ರೀಯ ಸಮುದಾಯ ಕೈಜೋಡಿಸಬೇಕೆಂದು ಅವರು ಕರೆ ನೀಡಿದರು.

ಭಾರತದ ಯೂರಿಯಾ ಉತ್ಪಾದನೆಗೆ ಹೊಡೆತ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯಿಂದಾಗಿ ಹಾರ್ಮುಜ್ ಜಲಸಂಧಿಯ ಮೂಲಕ ನಡೆಯುವ ದ್ರವೀಕೃತ ನೈಸರ್ಗಿಕ ಅನಿಲ(ಎಲ್‌ಎನ್‌ಜಿ) ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಭಾರತದ ಯೂರಿಯಾ ಸ್ಥಾವರಗಳು ಅರ್ಧದಷ್ಟು ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಪೂರೈಕೆದಾರರು ಒಪ್ಪಂದದ ಪ್ರಮಾಣವನ್ನು ತಲುಪಿಸಲು ವಿಫಲವಾದ ಕಾರಣ ಪೆಟ್ರೋನೆಟ್ ಎಲ್‌ಎನ್‌ಜಿ ಫೋರ್ಸ್ ಮೆಜರ್ ಘೋಷಿಸಿದೆ. ಈ ಬೆಳವಣಿಗೆಯಿಂದಾಗಿ ಗೇಲ್ (ಜಿಎಐಎಲ್) ಮತ್ತು ಐಒಸಿನಂತಹ ಸರ್ಕಾರಿ ವಿತರಕರು ದೇಶೀಯ ರಸಗೊಬ್ಬರ ಘಟಕಗಳಿಗೆ ಅನಿಲ ಪೂರೈಕೆಯನ್ನು ಸುಮಾರು 40 ಪ್ರತಿಶತದಷ್ಟು ಕಡಿತಗೊಳಿಸಲು ಸೂಚಿಸಲಾಗಿದೆ. ಉತ್ಪಾದನೆ ಅರ್ಧದಷ್ಟು ಕುಸಿದಿದೆ, ಅಲ್ಲದೆ ಉಷ್ಣತೆಯ ಅಭಾವದಿಂದ ಈ ಘಟಕಗಳಲ್ಲಿನ ಇಂಧನ ಬಳಕೆ 40 ಪ್ರತಿಶತದಷ್ಟು ಹೆಚ್ಚಿರುವುದು ಸಮಸ್ಯೆಗೆ ಕಾರಣವಾಗಿದೆ ಎಂದು ಉದ್ಯಮದ ಮೂಲಗಳು ತಿಳಿಸಿವೆ.



ಹಠಾತ್ ಲೋಡ್ ಬದಲಾವಣೆ ಉಪಕರಣಗಳ ಸುರಕ್ಷತೆಗೆ ಅಪಾಯವನ್ನುಂಟುಮಾಡುತ್ತಿವೆ. ಗೇಲ್ ಪರಿಚಯಿಸಿದ ಹೊಸ ಬೆಲೆ ಮಾದರಿಗಳು ಆರ್ಥಿಕ ಅನಿಶ್ಚಿತತೆ ಹೆಚ್ಚಿಸಿದ್ದು, ಮುಂಬರುವ ಖಾರಿಫ್ ಬಿತ್ತನೆ ಹಂಗಾಮಿನ ಮೇಲೆ ಇದು ಪರಿಣಾಮ ಬೀರಬಹುದು ಎಂದು ವಿಶ್ಲೇಷಕರು ಎಚ್ಚರಿಸಿದ್ದಾರೆ.

ಕಿರುಸುದ್ದಿ

ವಿಮಾನಯಾನ ದರ ಮಿತಿ ತೆರವುಗೊಳಿಸಿದ ಸರ್ಕಾರ

ಹೊಸದಿಲ್ಲಿ: ದೇಶೀಯ ವಿಮಾನಯಾನ ಟಿಕೆಟ್ ದರಗಳ ಮೇಲಿನ ತಾತ್ಕಾಲಿಕ ಮಿತಿಯನ್ನು ತೆಗೆದುಹಾಕಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮಾ.23ರಿಂದ ಈ ವಿಮಾನಯಾನ ದರ ಮಿತಿಯನ್ನು ತೆಗೆದುಹಾಕುವುದಾಗಿ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ಆದೇಶ ಹೊರಡಿಸಿದೆ. ಸಾಮಾನ್ಯವಾಗಿ ವಿಮಾನ ಹಾರಾಟ ವ್ಯತ್ಯಯದ ವೇಳೆ ಟಿಕೆಟ್ ದರ ಮಿತಿಮೀರಿ ಹೆಚ್ಚಾಗುವ ವೇಳೆ ಗ್ರಾಹಕರ ಕಾಳಜಿಯಿಂದ ಸರ್ಕಾರ ತಾತ್ಕಾಲಿಕ ಮಿತಿ ಹೇರುತ್ತದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ದೇಶದೆಲ್ಲೆಡೆ ಉಂಟಾಗಿದ್ದ ಇಂಡಿಗೋ ವಿಮಾನಯಾನ ಹಾರಾಟ ವ್ಯತ್ಯಯದ ವೇಳೆ ಗ್ರಾಹಕರ ರಕ್ಷಣೆಗಾಗಿ ಕೇಂದ್ರ ಸರ್ಕಾರ ತಾತ್ಕಾಲಿಕ ಮಿತಿ ಹೇರಿತ್ತು. ಹಾರಾಟ ವ್ಯತ್ಯಯ ಮತ್ತು ಟಿಕೆಟ್‌ಗಾಗಿ ಬೇಡಿಕೆ ಹೆಚ್ಚಾದಾಗ ವಿಮಾನಯಾನ ದರ ಹೆಚ್ಚಾಗುತ್ತದೆ. ಈ ವೇಳೆ ಸರ್ಕಾರ ಹೇರಿದ ಮಿತಿಗಿಂತ ಹೆಚ್ಚು ಹಣವನ್ನು ವಿಮಾನಯಾನ ಸಂಸ್ಥೆಗಳು ಪ್ರಯಾಣಿಕರಿಂದ ವಸೂಲಿ ಮಾಡುವಂತಿಲ್ಲ. ಮಿತಿ ತೆರವುಗೊಳಿಸಿದ್ದರಿಂದ, ವಿಮಾನಯಾನ ಸಂಸ್ಥೆಗಳು ಬೇಡಿಕೆಗೆ ಅನುಗುಣವಾಗಿ ಟಿಕೆಟ್ ದರ ಹೆಚ್ಚಿಸುವ ಸಾಧ್ಯತೆಯಿದೆ.

ಇಂಧನ ಪೂರೈಕೆ ಕುರಿತು ಪರಿಶೀಲನೆ



ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಳ್ಳುತ್ತಿರುವ ಸಂಘರ್ಷದ ಹಿನ್ನೆಲೆಯಲ್ಲಿ ಕಚ್ಚಾ ತೈಲ, ಅನಿಲ, ವಿದ್ಯುತ್ ಮತ್ತು ರಸಗೊಬ್ಬರ ವಲಯಗಳ ಸ್ಥಿತಿಗತಿಗಳ ಕುರಿತು ಪ್ರಧಾನಿ ನರೇಂದ್ರ ಮೋದಿಯವರು ಭಾನುವಾರ ಹಿರಿಯ ಸಚಿವರೊಂದಿಗೆ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸಿದರು.

ದೇಶಾದ್ಯಂತ ಅಗತ್ಯ ವಸ್ತುಗಳ ಅಡೆತಡೆಯಿಲ್ಲದ ಪೂರೈಕೆ, ಸ್ಥಿರ ಲಾಜಿಸ್ಟಿಕ್ ಮತ್ತು ಸಮರ್ಥ ವಿತರಣಾ ಜಾಲವನ್ನು ಖಚಿತಪಡಿಸಿಕೊಳ್ಳುವತ್ತ ಗಮನ ಹರಿಸುವಂತೆ ಸಭೆಯಲ್ಲಿ ಪ್ರಧಾನಿ ಸೂಚಿಸಿದರು ಎನ್ನಲಾಗಿದೆ. ಫೆ.28ರಿಂದ ಪ್ರಾದೇಶಿಕ ಸಂಘರ್ಷದಿಂದ ಪ್ರಾರಂಭವಾದ ಯುದ್ಧದಿಂದ ಉಂಟಾಗಿರುವ ಸಮಸ್ಯೆಗಳನ್ನು ನಿವಾರಿಸಲು ಮತ್ತು ಗ್ರಾಹಕರು ಹಾಗೂ ಕೈಗಾರಿಕೆಗಳ ಹಿತಾಸಕ್ತಿಗಳನ್ನು ರಕ್ಷಿಸಲು ಕೈಗೊಳ್ಳಲಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ, ರಕ್ಷಣೆ, ಗೃಹ, ವಿದೇಶಾಂಗ ಮತ್ತು ಹಣಕಾಸು ಸಚಿವರು ಸೇರಿದಂತೆ ಹಿರಿಯ ಕ್ಯಾಬಿನೆಟ್ ಸದಸ್ಯರು ಪ್ರಧಾನಿಯೊಂದಿಗೆ ಚರ್ಚಿಸಿದ್ದಾರೆ.

ಜಾಗತಿಕ ಇಂಧನ ಸಾರಿಗೆಯ ಶೇ.20ರಷ್ಟು ಪಾಲನ್ನು ನಿರ್ವಹಿಸುವ ಹಾರ್ಮುಜ್ ಜಲಸಂಧಿಯಲ್ಲಿ ಉಂಟಾಗಿರುವ ಅಡೆತಡೆಗಳು ಪ್ರಸ್ತುತ ಪೂರೈಕೆ ಸವಾಲುಗಳಿಗೆ ಪ್ರಾಥಮಿಕ ಕಾರಣ. ಸಂಘರ್ಷದ ಆರಂಭದಿಂದಲೂ ಈ ಮಾರ್ಗದಲ್ಲಿ ಹಡಗುಗಳ ಸಂಚಾರ ನಿರ್ಬಂಧಿಸಲ್ಪಟ್ಟಿದೆ. ಇಂತಹ ಅಂತರಾಷ್ಟ್ರೀಯ ಪೂರೈಕೆ ಸರಪಳಿ ಬಿಕ್ಕಟ್ಟುಗಳನ್ನು ಎದುರಿಸಲು ಸಾರ್ವಜನಿಕ ಜಾಗೃತಿ ಮತ್ತು ಕಾರ್ಯತಂತ್ರದಲ್ಲಿ ತಾಳ್ಮೆ ಅತ್ಯಗತ್ಯ ಎಂದು ಪ್ರಧಾನಿ ಅಭಿಪ್ರಾಯಪಟ್ಟಿದ್ದಾರೆ.

ಸೌದಿ ಅರೇಬಿಯಾ, ಯುಎಇ, ಕತಾರ್, ಇಸ್ರೇಲ್ ಮತ್ತು ಇರಾನ್ ಸೇರಿದಂತೆ ವಿವಿಧ ದೇಶಗಳ ನಾಯಕರೊಂದಿಗೆ ಪ್ರಧಾನಿ ನಡೆಸಿದ ಇತ್ತೀಚಿನ ಮಾತುಕತೆಗಳ ಬಗ್ಗೆಯೂ ಸಭೆಯಲ್ಲಿ ಮಾಹಿತಿ ನೀಡಲಾಯಿತು.

ಎಲ್ಪಿಜಿ ಸಿಲಿಂಡರ್ ಹಂಚಿಕೆ ಹೆಚ್ಚಿಸಲು ಕೇಂದ್ರ ನಿರ್ದೇಶ

ಹೊಸದಿಲ್ಲಿ: ಜಾಗತಿಕ ಮಟ್ಟದಲ್ಲಿ ತೈಲ ಮತ್ತು ಅನಿಲ ಪೂರೈಕೆ ವ್ಯತ್ಯಯದ ಹಿನ್ನೆಲೆ ನಗರ ಅನಿಲ ಸರಬರಾಜು ಯೋಜನೆಯನ್ವಯ ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆ ಮತ್ತು ವಾಣಿಜ್ಯ ಎಲ್‌ಪಿಜಿ ಹಂಚಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಭಾನುವಾರ ನಿರ್ದೇಶಿಸಿದೆ.

ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆ (ಪಿಇಎಸ್‌ಒ) ತನ್ನ ಕಚೇರಿಗಳಿಗೆ ನಗರ ಅನಿಲ ವಿತರಣೆ (ಸಿಸಿಡಿ) ಅರ್ಜಿಗಳನ್ನು ಇನ್ನು 10 ದಿನಗಳೊಳಗೆ ವಿಲೇವಾರಿ ಮಾಡಲು ಸೂಚಿಸಿದೆ. ಇದರಿಂದ ಪೈಪ್ ನೈಸರ್ಗಿಕ ಅನಿಲ (ಪಿಎನ್‌ಜಿ) ವಿತರಣೆಯ ವೇಗವರ್ಧನೆಯಾಗಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಪ್ರಮುಖ ನಗರ ಮತ್ತು ನಗರ ಪ್ರದೇಶಗಳಲ್ಲಿನ ವಾಣಿಜ್ಯ ಎಲ್‌ಪಿಜಿ ಬಳಕೆದಾರರು, ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಮೇಲಿನ ಅವಲಂಬನೆ ಕಡಿಮೆ ಮಾಡಲು, ಪಿಎನ್‌ಜಿಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿದೆ.

ಗೃಹ ಬಳಕೆಯ ಎಲ್‌ಪಿಜಿ ಸರಬರಾಜು ಸ್ಥಿರವಾಗಿದ್ದು, ಡೀಲರ್‌ಗಳಲ್ಲಿಯೂ ಯಾವುದೇ ಕೊರತೆ ವರದಿಯಾಗಿಲ್ಲ. ದೇಶದಾದ್ಯಂತ ಸಾಮಾನ್ಯ ವಿತರಣೆ ಕ್ರಮ ಮುಂದುವರಿದಿದ್ದು, ಬಹುತೇಕ ವಿತರಣೆಗಳು ಡೆಲಿವರಿ ಅಥೆಂಟಿಕೇಶನ್ ಕೋಡ್ (ಡಿಎಸಿ) ಆಧಾರದಲ್ಲಿ ನಡೆಯುತ್ತಿವೆ. ಪ್ಯಾನಿಕ್ ಬುಕ್ಕಿಂಗ್‌ಗಳು ಕೂಡ ಕಡಿಮೆಯಾಗಿದೆ ಎಂದು ಹೇಳಿದೆ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಹಂಚಿಕೆಯನ್ನು ಸರ್ಕಾರ ಹಂತ ಹಂತವಾಗಿ ಹೆಚ್ಚಿಸಿದೆ.

ಪ್ರಧಾನಿ ನಿವಾಸಕ್ಕೆ ಪುಟ್ಟ ಅತಿಥಿ!

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ತಮ್ಮ 7, ಲೋಕ ಕಲ್ಯಾಣ ಮಾರ್ಗದ ಅಧಿಕೃತ ನಿವಾಸದಲ್ಲಿ ಖಾಸಗಿ ಕುಟುಂಬವೊಂದರ ಭೇಟಿಯ ಸಂದರ್ಭದಲ್ಲಿ ಪುಟ್ಟ ಮಗುವಿನೊಂದಿಗೆ ಇರುವ ಭಾವಚಿತ್ರವನ್ನು ಹಂಚಿಕೊಂಡಿದ್ದು, ಇದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಕುತೂಹಲ ಮೂಡಿಸಿತು.

ಯಾರು ಈ ಅತಿಥಿಗಳು?: ವೈರಲ್ ಚಿತ್ರದಲ್ಲಿರುವ ಮಗುವನ್ನು ನೀಯೋಮ್ ಅಶ್ವಿನ್ ಕೃಷ್ಣ (ಓಮಿ) ಎಂದು ಗುರುತಿಸಲಾಗಿದೆ. ಈತ ಸಾಮಾಜಿಕ ಜಾಲತಾಣದ ಇನ್ಫ್ಲುಯೆನ್ಸರ್ ದಿಯಾ ಕೃಷ್ಣ ಅವರ ಪುತ್ರ ಮತ್ತು ಬಿಜೆಪಿ ಜತೆ ಸಂಪರ್ಕವಿರುವ ಕೇರಳದ ಪ್ರಮುಖ ನಟ ಹಾಗೂ ರಾಜಕಾರಣಿ ಕೃಷ್ಣಕುಮಾರ್ ಅವರ ಮೊಮ್ಮಗ ಎಂದು ತಿಳಿದುಬಂದಿದೆ. ಪ್ರಧಾನಿ ಮೋದಿ, ಕೃಷ್ಣಕುಮಾರ್ ಕುಟುಂಬದ ಸದಸ್ಯರಾದ ಸಿಂಧು ಕೃಷ್ಣಕುಮಾರ್ ಅಶ್ವಿನ್ ಮತ್ತು ಪುತ್ರಿಯರಾದ ಅಹಾನಾ, ದಿಯಾ, ಇಶಾನಿ ಮತ್ತು ಹನ್ಸಿಕಾ ಅವರೊಂದಿಗೆ ಒಂದು ಗಂಟೆಗಳ ಕಾಲ ಸಂವಾದ ನಡೆಸಿದ್ದಾರೆ.



ಜಾಲತಾಣದಲ್ಲಿ 'ಪುಟಾಣಿ ಮಿತ್ರ'

ಪುಟಾಣಿ ಮಿತ್ರನೊಂದಿಗೆ ಎಂಬ ಅರ್ಥ ಬರುವ ಶೀರ್ಷಿಕೆ ನೀಡಿ ಪ್ರಧಾನಿ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡ ಈ ಫೋಟೋ 1.7 ಮಿಲಿಯನ್‌ಗಿಂತಲೂ ಹೆಚ್ಚು ಲೈಕ್‌ಗಳನ್ನು ಪಡೆದುಕೊಂಡಿದೆ. ಈ ಭೇಟಿಯ ಹೆಚ್ಚಿನ ಚಿತ್ರಗಳು ಮತ್ತು ವಿಡಿಯೋಗಳು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿವೆ. ಪ್ರಧಾನಿ ಭೇಟಿಯನ್ನು ದಿಯಾ ಕೃಷ್ಣ ಅತ್ಯಂತ ಸಂಭ್ರಮದ ಕ್ಷಣವೆಂದು ಬಣ್ಣಿಸಿದರೆ, ನಟಿ ಅಹಾನಾ ಕೃಷ್ಣ, ಪ್ರಧಾನಿ ಆತ್ಮೀಯವಾಗಿ ಮಾತನಾಡಿಸಿದರು ಎಂದು ತಮ್ಮ ಅನುಭವ ಹಂಚಿಕೊಂಡಿದ್ದಾರೆ.

1971ರ ಬಾಂಗ್ಲಾ ವಿಮೋಚನೆ ವೇಳೆ ದೌರ್ಜನ್ಯ: ಅಮೆರಿಕ ನಿರ್ಣಯ

ಹಿಂದುಗಳ ಮೇಲೆ ಪಾಕ್ ದಾಳಿ ನರಮೇಧ

ವಾಷಿಂಗ್ಟನ್: 1971ರ ಬಾಂಗ್ಲಾದೇಶ ವಿಮೋಚನಾ ಹೋರಾಟದ ವೇಳೆ ಬಂಗಾಳಿ ಹಿಂದುಗಳ ಮೇಲೆ ನಡೆದ ದೌರ್ಜನ್ಯಗಳನ್ನು 'ನರಮೇಧ' ಮತ್ತು 'ಯುದ್ಧಾಪರಾಧಗಳು' ಎಂದು ಅಧಿಕೃತವಾಗಿ ಗುರುತಿಸುವಂತೆ ಅಮೆರಿಕ ಸಂಸತ್ತಿನಲ್ಲಿ ಮಹತ್ವದ ನಿರ್ಣಯ ಮಂಡಿಸಲಾಗಿದೆ. ಓಹಿಯೋ ರಾಜ್ಯದ ಡೆಮೋಕ್ರಟಿಕ್ ಪಕ್ಷದ ಸಂಸದ ಗ್ರೆಗ್ ಲ್ಯಾಂಡ್ಸ್‌ಮನ್ ಅವರು ಈ ನಿರ್ಣಯವನ್ನು ಪ್ರತಿನಿಧಿಗಳ ಸದನದಲ್ಲಿ ಮಂಡಿಸಿದ್ದು, ಪ್ರಸ್ತುತ ವಿದೇಶಾಂಗ ವ್ಯವಹಾರಗಳ ಸಮಿತಿಗೆ ರವಾನಿಸಲಾಗಿದೆ.



ಆಪರೇಷನ್ ಸರ್ಚ್‌ಲೈಟ್: 1971ರ ಮಾರ್ಚ್ 25ರಂದು ಪಾಕಿಸ್ತಾನದ ಸರ್ಕಾರವು ಬಾಂಗ್ಲಾದೇಶದ ಸಂಸ್ಥಾಪಕ ಶೇಖ್ ಮುಜಿಬುರ್ ರೆಹಮಾನ್ ಅವರನ್ನು ಬಂಧಿಸಿತು. ಇದಾದ ನಂತರ ಪಾಕಿಸ್ತಾನ ಸೇನೆ ಮತ್ತು ಜಮಾತ್-ಎ-ಇಸ್ಲಾಮಿ ಸಂಘಟನೆ ಸೇರಿ ಆಪರೇಷನ್ ಸರ್ಚ್‌ಲೀಟ್ ಹೆಸರಿನಲ್ಲಿ ಪೂರ್ವ ಪಾಕಿಸ್ತಾನದಲ್ಲಿ ಭಾರೀ ಮಟ್ಟದ ಸೈನಿಕ ದಾಳಿಗಳನ್ನು ಆರಂಭಿಸಿತು. ಈ ಕಾರ್ಯಾಚರಣೆಯಲ್ಲಿ ನಾಗರಿಕರನ್ನು ಗುರಿಯಾಗಿಸಿಕೊಂಡು ಕ್ರೂರ ಹತ್ಯಾಕಾಂಡ ನಡೆಯಿತು.

ಹಿಂದು ಸಮುದಾಯ ಗುರಿ: ನಿರ್ಣಯದಲ್ಲಿ ಬಂಗಾಳಿ ಹಿಂದುಗಳನ್ನು ವಿಶೇಷವಾಗಿ ಗುರಿಯಾಗಿಸಿಕೊಂಡು ಹತ್ಯೆ, ಅತ್ಯಾಚಾರ ಮತ್ತು ಬಲವಂತದ ಮತಾಂತರ ನಡೆದಿದೆ ಎಂದು ಉಲ್ಲೇಖಿಸಲಾಗಿದೆ. ರಾಜಕೀಯ ನಾಯಕರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು ಸೇರಿದಂತೆ ಸಾಮಾನ್ಯ ನಾಗರಿಕರು ಈ ಹಿಂಸಾಚಾರದ ಬಲಿಯಾಗಿದ್ದರು. ಸಾವಿರಾರು ಮಹಿಳೆಯರನ್ನು ಲೈಂಗಿಕ ದೌರ್ಜನ್ಯಕ್ಕೆ ಒಳಪಡಿಸಲಾಗಿತ್ತು ಎಂದು ಹೇಳಲಾಗಿದೆ.

ಬ್ಲಡ್ ಟೆಲಿಗ್ರಾಮ್ ಬಹಿರಂಗಪಡಿಸಿದ ಸತ್ಯ: ಢಾಕಾದಲ್ಲಿದ್ದ ಅಮೆರಿಕದ ಕಾನ್ಸುಲ್ ಜನರಲ್ ಆರ್ಚರ್ ಬ್ಲಡ್ ಅವರು 1971ರ ಮಾರ್ಚ್ 28ರಂದು ಸೆಲೆಕ್ಟೀವ್ ಜೆನೊಸೈಡ್(ಆಯ್ದ ನರಮೇಧ) ಎಂಬ ಶೀರ್ಷಿಕೆಯಲ್ಲಿ ಕಳುಹಿಸಿದ ಟೆಲಿಗ್ರಾಮ್‌ನಲ್ಲಿ, ಪಾಕಿಸ್ತಾನ ಸೇನೆಯು ಬಂಗಾಳಿಗಳು ಮತ್ತು ಹಿಂದುಗಳನ್ನು ವ್ಯವಸ್ಥಿತವಾಗಿ ಹತ್ಯೆ ಮಾಡುತ್ತಿದೆ ಎಂದು ಎಚ್ಚರಿಸಿದ್ದರು. ಈ ಸಂದೇಶವು ನಂತರ ಬ್ಲಡ್ ಟೆಲಿಗ್ರಾಮ್ ಎಂದು ಪ್ರಸಿದ್ಧಿಯಾಯಿತು.

ಅಮೆರಿಕದ ಮೌನಕ್ಕೆ ವಿರೋಧ: ಅಂದಿನ ಹತ್ಯಾಕಾಂಡದ ಬಗ್ಗೆ ಅಮೆರಿಕ ಸರ್ಕಾರ ಮೌನ ವಹಿಸಿತ್ತು ಎಂಬುದನ್ನು ನಿರ್ಣಯದಲ್ಲಿ ಟೀಕಿಸಲಾಗಿದೆ. 1971ರ ಏ.6ರಂದು ಕಾನ್ಸುಲೇಟ್‌ನ 20 ಅಧಿಕಾರಿಗಳು 'ಬ್ಲಡ್ ಟೆಲಿಗ್ರಾಮ್' ಮೂಲಕ ಸರ್ಕಾರದ ನಿಲುವಿಗೆ ವಿರೋಧ ವ್ಯಕ್ತಪಡಿಸಿದ್ದರು. ಈ ಘಟನೆ ಅಮೆರಿಕದ ರಾಜತಾಂತ್ರಿಕ ಇತಿಹಾಸದಲ್ಲಿ ಪ್ರಮುಖ ಘಟನೆ ಎಂದು ಪರಿಗಣಿಸಲಾಗಿದೆ.

ಮಾನವ ಹಕ್ಕುಗಳ ಪರ ಒತ್ತಾಯ: ಈ ನಿರ್ಣಯವು 1971ರ ಘಟನೆಗಳನ್ನು ಮಾನವೀಯತೆಯ ವಿರುದ್ಧದ ಅಪರಾಧಗಳೆಂದು ಗುರುತಿಸಲು ಮತ್ತು ಭವಿಷ್ಯದಲ್ಲಿ ಇಂತಹ ಕ್ರೌರ್ಯಗಳು ಮರುಕಳಿಸದಂತೆ ಜಾಗತಿಕ ಮಟ್ಟದಲ್ಲಿ ಕ್ರಮ ಕೈಗೊಳ್ಳಲು ಒತ್ತಾಯಿಸುತ್ತದೆ. ಜತೆಗೆ, ಅಮೆರಿಕ ಅಧ್ಯಕ್ಷರು ಈ ವಿಷಯದಲ್ಲಿ ಸ್ಪಷ್ಟ ನಿಲುವು ಕೈಗೊಳ್ಳಬೇಕೆಂದು ಆಗ್ರಹಿಸಲಾಗಿದೆ.

ಸಿಎಂ, ಪ್ರಧಾನಿಯಾಗಿ ಮೋದಿ ಸುದೀರ್ಘ ಸಾರ್ವಜನಿಕ ಸೇವಾ ದಾಖಲೆ

ಕೇಂದ್ರ ಸಚಿವರು, ಬಿಜೆಪಿ ಅಧ್ಯಕ್ಷರ ಅಭಿನಂದನೆ

ಹೊಸದಿಲ್ಲಿ: ಮುಖ್ಯಮಂತ್ರಿ ಮತ್ತು ಪ್ರಧಾನಿಯಾಗಿ ಅತ್ಯಂತ ಸುದೀರ್ಘ ಅವಧಿಯ ಸಾರ್ವಜನಿಕ ಸೇವಾ ದಾಖಲೆ ಮಾಡಿದ ಪ್ರಧಾನಿ ನರೇಂದ್ರ ಮೋದಿಯವರನ್ನು ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಹಾಗೂ ವಿವಿಧ ಕೇಂದ್ರ ಸಚಿವರುಗಳು, ಮುಖ್ಯಮಂತ್ರಿಗಳು ಅಭಿನಂದಿಸಿದ್ದಾರೆ.



ದೇಶದ ಬಡವರು, ಜನಸಾಮಾನ್ಯರ ಬದುಕಿಗೆ ಶಕ್ತಿ ತುಂಬುವಲ್ಲಿ ಆಳ ಬದ್ಧತೆ ಮತ್ತು ಜಾಗತಿಕ ವೇದಿಕೆಗಳಲ್ಲಿ ಭಾರತದ ಗೌರವವನ್ನು ಎತ್ತಿಹಿಡಿದ ಸಮರ್ಥ ನಾಯಕತ್ವದ ಮೋದಿಯವರ ಸಾಧನೆ ದೇಶದ ಮತ್ತು ಜನತೆಯ ಹೆಮ್ಮೆ ಎಂದು ಬಣ್ಣಿಸಿದ್ದಾರೆ.

ಕೇಂದ್ರ ಸಚಿವರಾದ ಜೆ.ಪಿ.ನಡ್ಡಾ, ಪಿಯೂಷ್ ಗೋಯಲ್, ಅಶ್ವಿನಿ ವೈಷ್ಣವ್, ನಿತಿನ್ ನವೀನ್ ಅವರುಗಳು ''ಮೋದಿ ಶಕೆಯು ಹೊಸ ಮೈಲುಗಲ್ಲುಗಳನ್ನು ಸ್ಥಾಪಿಸುವಲ್ಲಿ ಭಾರತವನ್ನು ವಿಸ್ಮಯಕಾರಿಯಾಗಿ ಪರಿವರ್ತಿಸಿದೆ'' ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೋದಿಯವರ ನಾಯಕತ್ವದಲ್ಲಿ ಭಾರತವು ವಿಕಸಿತ ಭಾರತದ ವಿಷನ್‌ನೊಂದಿಗೆ ಮುನ್ನುಗ್ಗುತ್ತಿದೆ. ಜನಪರವಾದ ನೀತಿಗಳ ಮೂಲಕ ಬಡವರು, ಯುವಜನತೆ, ಮಹಿಳೆಯರು ಮತ್ತು ರೈತರು ಸೇರಿದಂತೆ ದೇಶದ ಸಮಗ್ರ ಉನ್ನತಿ ಕುರಿತಾದ ಅವರ ಕಳಕಳಿ ಅನನ್ಯವಾದುದು. ಇದರಿಂದಾಗಿಯೇ ಇಂದು ಭಾರತ ಜಗತ್ತಿನಲ್ಲಿ ಅತ್ಯಂತ ಆತ್ಮವಿಶ್ವಾಸ ಮತ್ತು ಪ್ರಭಾವಿಯಾಗಿ ಮುಂದುವರಿಯಲು ಸಾಧ್ಯವಾಗಿದೆ. ಯಾಕೆಂದರೆ ಮೋದಿಯವರು ನೈಜ ಪರಿವರ್ತನೆ ತರಲು ಶ್ರಮಿಸುತ್ತಿರುವವರು. ನಂಬಿಕೆ, ಸಮರ್ಪಣೆ, ಸ್ಪಷ್ಟ ದೃಷ್ಟಿಯ ಮೂಲಕ ಅವರದು ಸಾಟಿಯಿಲ್ಲದ ಸಾಧನೆ ಎಂದು ಜೆ.ಪಿ.ನಡ್ಡಾ ಹೇಳಿದ್ದಾರೆ.

ಮೋದಿಯವರ ಜನಸೇವೆಯು ಎಲ್ಲರನ್ನೊಳಗೊಂಡ ಅಭಿವೃದ್ಧಿಯೆಡೆಗಿನ ಸಾಟಿಯಿಲ್ಲ ಬದ್ಧತೆಯಾಗಿದ್ದು, ಇದು ಭಾರತದ ಬೆಳವಣಿಗೆಯ ಯಶೋಗಾಥೆಗೆ ಶಕ್ತಿ ತುಂಬಿದೆ ಎಂದಿದ್ದಾರೆ ಸಚಿವ ಗೋಯಲ್.

ಜನಸೇವೆಯ ಸಾಧನೆ: ನಿತಿನ್ ನವೀನ್

ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಅವರು, ಪ್ರಧಾನಿ ಮೋದಿಯವರ ಅಧಿಕಾರದಲ್ಲಿ ಮೂಲಸೌಕರ್ಯಗಳ ಅಭೂತಪೂರ್ವ ಅಭಿವೃದ್ಧಿ, ಡಿಜಿಟಲ್ ಕ್ರಾಂತಿ, ಪರಿಣಾಮಕಾರಿ ಸಾರ್ವಜನಿಕ ಕಲ್ಯಾಣ ಯೋಜನೆಗಳೊಂದಿಗೆ ಆತ್ಮನಿರ್ಭರ ಭಾರತದೆಡೆಗೆ ಸಾಗುತ್ತಿರುವುದು ಹೆಮ್ಮೆಯ ಸಂಗತಿ. ಅವರದು ಸಾಟಿಯಿಲ್ಲದ ಜನಸೇವೆಯ ಸಾಧನೆ ಎಂದಿದ್ದಾರೆ.

ಪ್ರಧಾನಿ ಮೋದಿಯವರ ಈ ಸಾಧನೆ ಅವಿಶ್ರಾಂತ ಸಮರ್ಪಣಾ ಸೇವೆ, ಸಮಗ್ರತೆ ಮತ್ತು ರಾಷ್ಟ್ರ-ಮೊದಲೆನ್ನುವ ಆಡಳಿತಕ್ಕೆ ಸಾಕ್ಷಿಯಾಗಿದೆ. ಇದು ನಂಬಿಕೆ ಮತ್ತು ಸೇವೆಯ ಪ್ರೇರಣಾದಾಯಿ ಪಯಣ.
■ **ಕಿರಣ್ ರಿಜಿಜು, ಸಂಸದೀಯ ಸಚಿವ**



ಬೆಂಗಳೂರಿನಲ್ಲಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿಗೆ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾನುವಾರ ಬಿ ಫಾರಂ ನೀಡಿದರು.

ಕಡ್ಡಾಯ ಯೋಗ ಶಿಕ್ಷಣ ಯೋಜನೆ ಆರಂಭ: ಭಗವಾನ್

ಉಜಿರೆ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯವು ಎಸ್.ಡಿ.ಎಂ ಪ್ರಕೃತಿ ಚಿಕಿತ್ಸಾ ಮತ್ತು ಯೋಗವಿಜ್ಞಾನ ಮಹಾವಿದ್ಯಾಲಯ ಹಾಗೂ ಇನ್ನಿತರ ಸಂಸ್ಥೆಗಳ ಸಹಯೋಗದಲ್ಲಿ ಪೌಷ್ಟಿಕಾಂಶ ಮೌಲ್ಯ, ಜೀವನಶೈಲಿ ಮೌಲ್ಯ, ಮತ್ತು ಕಡ್ಡಾಯ ಯೋಗ ಶಿಕ್ಷಣ ಯೋಜನೆಯನ್ನು ಮುಂದಿನ ದಿನಗಳಲ್ಲಿ ಪ್ರಾರಂಭಿಸುವುದಾಗಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಕರ್ನಾಟಕ ಉಪಕುಲಪತಿ ಡಾ. ಭಗವಾನ್ ಬಿ.ಸಿ. ಹೇಳಿದರು.

ಉಜಿರೆಯ ಎಸ್.ಡಿ.ಎಂ ಶಿಕ್ಷಣ ಸಂಸ್ಥೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯ ಉಜಿರೆ ಇದರ 31ನೇಯ ಪದವಿ ಪ್ರಧಾನ ಸಮಾರಂಭದಲ್ಲಿ ಮಾತನಾಡಿದರು. ಭಾರತವು ಪ್ರಕೃತಿ ಚಿಕಿತ್ಸೆ ಮತ್ತು ಯೋಗವಿಜ್ಞಾನದಲ್ಲಿ ಜಾಗತಿಕ ಮಟ್ಟದಲ್ಲಿ ನಾಯಕತ್ವ ಸ್ಥಾನ ಪಡೆದುಕೊಳ್ಳುವುದರ ಕಡೆಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಪ್ರಾಚೀನ ಕಾಲದಿಂದಲೂ ಚಿಕಿತ್ಸೆಯಲ್ಲಿ ಚರಕ, ಶುಶ್ರುತರಂತಹ ಭಾರತೀಯರು ಮುಂಚೂಣಿಯಲ್ಲಿದ್ದರು. ಆದರೆ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ವಿಷಯದ



ಕುರಿತು ಅರಿವು ಕಡಿಮೆಯಾಗಿದೆ. ಪ್ರಕೃತಿ ಚಿಕಿತ್ಸೆ ಮತ್ತು ಯೋಗವಿಜ್ಞಾನದಲ್ಲಿ ಪಾಶ್ಚ್ಯ ದೇಶಗಳ ಪ್ರಾಬಲ್ಯತೆಗೆ ಸಿಲುಕದೆ ಭಾರತದ ಅದ್ಭುತ ವೈಜ್ಞಾನಿಕ ವೈದ್ಯಕೀಯ ಪರಂಪರೆಗೆ ಗಮನಹರಿಸುವ ಅಗತ್ಯವಿದೆ. ಏಕೆಂದರೆ ಜಗತ್ತಿನಾದ್ಯಂತ ನಡೆಯುತ್ತಿರುವ ಪ್ರಚಲಿತ ವಿದ್ಯಾಮಾನಗಳನ್ನು ನೋಡಿದರೆ ಪ್ರಕೃತಿಯೊಂದಿಗೆ ಹೊಂದಿಕೊಂಡಿರುವ ಚಿಕಿತ್ಸೆಯು ಮುಂದಿನ ಭವಿಷ್ಯವಾಗಿದೆ ಎಂದರು.

ಪದವಿ ಪಡೆದ ವಿದ್ಯಾರ್ಥಿಗಳ ವೈದ್ಯಕೀಯ ವೃತ್ತಿಗೆ ಶುಭಾಶಯಗಳನ್ನು ತಿಳಿಸುತ್ತಾ, ಸೇವೆ ಎಂಬುದು ಮಹತ್ವಪೂರ್ಣ ಜವಾಬ್ದಾರಿ. ವೈದ್ಯಕೀಯ ವೃತ್ತಿಯ ಮೌಲ್ಯ, ತತ್ವಗಳೊಂದಿಗೆ ಪರಾನುಭೂತಿ, ನೈತಿಕತೆ, ಪ್ರಜ್ಞೆ, ಪ್ರಾಮಾಣಿಕತೆ, ವೃತ್ತಿಪರತೆಯ ಜೊತೆಗೆ ಕಾರ್ಯನಿರ್ವಹಿಸಿದಾಗ ವೃತ್ತಿ ಜೀವನ ದಲ್ಲಿ ತೃಪ್ತಿ ಸಾಧಿಸಬಹುದು. ವಿಶೇಷವಾಗಿ ಎಐ ಇರುವ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳು ಸದಾ ಕಲಿಕೆಯಲ್ಲಿ ತೊಡಗಿಸಿಕೊಳ್ಳುತ್ತಾ ಪ್ರಸ್ತುತತೆ ಸಾಧಿಸಿ ಬೇಕು. ಏಕೆಂದರೆ ಕಲಿಕೆ ನಿಂತರೆ ಜೀವನವೇ ಕೊನೆ ಗೊಂಡಂತೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತನ್ನು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉಜಿರೆಯ ಎಸ್.ಡಿ.ಎಂ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಿ. ಹರ್ಷೇಂದ್ರ ಕುಮಾರ್ ಮಾತನಾಡಿ, ಪ್ರಸ್ತುತ ಜಗತ್ತಿನಲ್ಲಿ ಹೆಚ್ಚುತ್ತಿರುವ ಜೀವನ ಶೈಲಿ ಅಸ್ವಸ್ಥತೆಯನ್ನು ಗುಣಪಡಿಸಲು ವೈದ್ಯರು ಬೇಕಾಗಿದ್ದಾರೆ. ಈ ನಿಟ್ಟಿನಲ್ಲಿ ಇಂದು ತೇರ್ಗಡೆ ಹೊಂದುತ್ತಿರುವ ವಿದ್ಯಾರ್ಥಿಗಳು ಸುಸ್ಥಿರ ವೈದ್ಯಕೀಯ ಅಭ್ಯಾಸದಲ್ಲಿ ತೊಡಗಿಸಿಕೊಂಡು ಯಶಸ್ವಿಯಾಗಬೇಕು ಎಂದು ಶುಭ ಹಾರೈಸಿದರು. ತೇರ್ಗಡೆಹೊಂದಿದವಿದ್ಯಾರ್ಥಿಗಳಿಗೆಡಾ.ಭಗವಾನ್ ಬಿ.ಸಿ ಪದವಿ ಪ್ರಧಾನ ಮಾಡಿದರು. ಎಸ್.ಡಿ.ಎಂ. ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನ ಕಾಲೇಜಿನ ಉಪ ಪ್ರಾಂಶುಪಾಲರಾದ ಡಾ. ಸುಜಾತ ಕೆ.ಜೆ. ಪ್ರಮಾಣ ವಚನ ಬೋಧಿಸಿದರು.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಕೃತ್ತಿಕೆ

ದಿನದ ಮಾತು

ಇಂದ್ರಿಯಗಳ ಸೇನೆಗೆ ಮನಸ್ಸೇ ನಾಯಕ. ಆದ್ದರಿಂದ ಮನಸ್ಸನ್ನು ಜಯಿಸಿದಲ್ಲಿ, ಅದು ನಿಜವಾದ ವಿಜಯ.

▲ಸ್ವಾಮಿ ವಿವೇಕಾನಂದ

ದಿನ ಭವಿಷ್ಯ

ಮೇಷ
ಎಲ್ಲ ಕೆಲಸ ಇಂದು ವಿಳಂಬಗೊಳ್ಳುವುದು. ಕೆಲವರ ಅಸಹಕಾರ. ಅಸಹನೆ ಅಧಿಕ. ಆರ್ಥಿಕ ಒತ್ತಡ ಹೆಚ್ಚಳ. ಕರಿದ ತಿಂಡಿಯಿಂದ ದೂರವಿರಿ.

ವೃಷಭ
ಉತ್ಸಾಹಪೂರ್ಣ ದಿನ. ಕಠಿಣ ಕೆಲಸವೂ ಸುಲಭದಲ್ಲಿ ಸಾಧ್ಯ. ಉದ್ದೇಶಿತ ಕೆಲಸ ಫಲಪ್ರದ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶ.

ಮಿಥುನ
ಎಲ್ಲ ಬೆಳವಣಿಗೆ ಪೂರಕವಾಗಿ ನಡೆಯಲಿದೆ. ಅಡ್ಡಿ ನಿವಾರಣೆ. ಹಣದ ಕೊರತೆ ಪರಿಹಾರ. ನವದಂಪತಿಗಳಿಗೆ ಶುಭಕರ ಬೆಳವಣಿಗೆ.

ಕಟಕ
ತಲೆನೋವು ಅಥವಾ ಅಜೀರ್ಣದ ಸಮಸ್ಯೆ ಕಾಡಬಹುದು. ಕುಟುಂಬ ಸದಸ್ಯರ ಜತೆ ಕಳೆಯಿರಿ, ಒತ್ತಡ ನಿವಾರಿಸಿಕೊಳ್ಳಿ. ಧನಹಾನಿ ಸಂಭವ.

ಸಿಂಹ
ಕಾರ್ಯಸಿದ್ಧಿ. ಆತ್ಮೀಯರ ಜತೆಗಿನ ಭಿನ್ನಮತ ನಿವಾರಣೆ. ಕೌಟುಂಬಿಕ ಸಮಸ್ಯೆ ಇದ್ದರೆ ಸಂಜೆಯೊಳಗೆ ಪರಿಹಾರ. ಖರ್ಚು ಹೆಚ್ಚಬಹುದು.

ಕನ್ಯಾ
ಮಾನಸಿಕ ಒತ್ತಡವು ದಂಪತಿ ಮಧ್ಯೆ ಕಲಹಕ್ಕೆ ಕಾರಣವಾದೀತು. ಸಮಾಧಾನದಿಂದ ವ್ಯವಹರಿಸಿ. ಚರ್ಮದ ಅಲರ್ಜಿ ಕಾಣಿಸೀತು.

ತುಲಾ
ಹೊಟ್ಟೆನೋವು, ಕಣ್ಣಿನ ಕಿರಿಕಿರಿಯಂತಹ ಸಮಸ್ಯೆ ಉಂಟಾದೀತು. ವೃತ್ತಿಯಲ್ಲಿ ಹೆಚ್ಚು ಹೊಣೆ. ಸಂಗಾತಿ ಜತೆಗೆ ವಾಗ್ವಾದ. ಆರ್ಥಿಕ ಉನ್ನತಿ.

ವೃಶ್ಚಿಕ
ಕೆಲದಿನಗಳ ಒತ್ತಡ ಇಂದು ನಿವಾರಣೆ. ಅನುಚಿತ ಆಹಾರ ಸೇವನೆ ಆರೋಗ್ಯಕ್ಕೆ ಸಮಸ್ಯೆ ಒಡ್ಡಬಹುದು. ಪ್ರೀತಿಯಲ್ಲಿ ಯಶಸ್ಸು.

ಧನು
ಮಕ್ಕಳಿಂದ ಸಮಸ್ಯೆ ಉಂಟಾದೀತು. ಅದನ್ನು ತಾಳ್ಮೆಯಿಂದ ನಿಭಾಯಿಸಿ. ಸಾಂಸಾರಿಕ ಬಿಕ್ಕಟ್ಟು ಪರಿಹರಿಸಲು ಸಮಯ ವ್ಯಯ. ಧನನಷ್ಟ.

ಮಕರ
ಅನವಶ್ಯ ಚಿಂತೆ ಕಾಡಲು ಬಿಡಬೇಡಿ. ಸಮಸ್ಯೆಗೆ ಪರಿಹಾರ ಇದ್ದೇ ಇದೆ. ಹಣ ಹೂಡಿಕೆಗೆ ಪೂರಕ ದಿನವಲ್ಲ. ಮನೆಯಲ್ಲಿ ಸಾಮರಸ್ಯ.

ಕುಂಭ
ಬಿಕ್ಕಟ್ಟಿಗೆ ತಕ್ಷಣ ಪ್ರತಿಕ್ರಿಯಿಸಿ. ವಿಳಂಬ ಧೋರಣೆ ಒಳ್ಳೆಯದಲ್ಲ. ಉಪಯುಕ್ತ ಕಾರ್ಯಕ್ಕೆ ಹಣ ಹೆಚ್ಚು ಖರ್ಚು. ಕೌಟುಂಬಿಕ ಸಮಾಧಾನ.


ಮೀನ
ಸಂಗಾತಿ ಜತೆ ಪ್ರಾಮಾಣಿಕವಾಗಿ ವರ್ತಿಸಿ. ಮುಚ್ಚುಮರೆ ಬೇಡ. ಅನಿರೀಕ್ಷಿತ ಖರ್ಚು. ಮೇಲಧಿಕಾರಿಯ ಕಿರುಕುಳ ಎದುರಿಸುವಿರಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 9,4,7,5

ಹೃದಯಾಘಾತ: ಸೇನಾಧಿಕಾರಿ ಸಾವು

ಬೆಳಗಾವಿ: ನಾನಾವಾಡಿಯ ಕಮಾಂಡೋ ವಿಂಗ್ ಆವರಣದಲ್ಲಿ ಸ್ವಿಮ್ಮಿಂಗ್ ಪೂಲ್‌ನಲ್ಲಿ ಸ್ವಿಮ್ಮಿಂಗ್ ಮಾಡುತ್ತಿದ್ದಾಗ ಹೃದಯಘಾತದಿಂದ ಸೇನಾಧಿಕಾರಿ ಮೃತಪಟ್ಟ ಘಟನೆ ನಡೆದಿದೆ. ಹರಿಯಾಣ ಮೂಲದ ಲೆಫ್ಟಿನೆಂಟ್ ಅಮಿತ್ ಸಿಂಗ್ ಹೃದಯಾಘಾತದಿಂದ ಮೃತಪಟ್ಟ ಸೇನಾಧಿಕಾರಿ. ಬೆಳಗಾವಿಯ ಎಂಎಲ್‌ಆರ್‌ಸಿ ಕಮಾಂಡೋ ವಿಂಗ್‌ನಲ್ಲಿ ಟ್ರೇನಿಂಗ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಸ್ವಿಮ್ಮಿಂಗ್ ಮಾಡುತ್ತಿದ್ದಾಗ ಅಮಿತ್ ಸಿಂಗ್ ಹೃದಯಾಘಾತಕ್ಕೊಳಗಾಗಿದ್ದಾರೆ. ತಕ್ಷಣ ಲೈಫ್ ಗಾರ್ಡ್ ಪ್ರದೀಪ್ ಕುಮಾರ್ ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆಗೆ ತೆರಳುತ್ತಿದ್ದ ವೇಳೆ ಕೊನೆಯುಸಿರು ಎಳೆದಿದ್ದಾರೆ.



ಚಾಲಾಕಿಗಳ ನಕಲಿ ನಾಟಕ ಬಯಲಿಗೆಳೆದ ಮಹಿಳೆ

ಬೆಂಗಳೂರು: ಸೈಬರ್ ವಂಚಕರ ಜಾಲ ಈಗ ಮುಂದಿನ ಹಂತಕ್ಕೆ ತಲುಪಿದೆ. ಇಷ್ಟು ದಿನ ಬೇರೆ ರಾಜ್ಯದ ಪೊಲೀಸರ ಹೆಸರಿನಲ್ಲಿ ಜನರನ್ನು ಹೆದರಿಸುತ್ತಿದ್ದ ವಂಚಕರು, ಈಗ ಸ್ಥಳೀಯ ಪೊಲೀಸರ ಹೆಸರನ್ನೇ ಬಳಸಿಕೊಂಡು ಜನರನ್ನು ದಾರಿ ತಪ್ಪಿಸಲು ಮುಂದಾಗಿದ್ದಾರೆ. ನಗರದ ಮಹಿಳೆಯೊಬ್ಬರಿಗೆ ಬಂದ ಕರೆ ಮತ್ತು ಅವರು ತೋರಿದ ಸಮಯಪ್ರಜ್ಞೆ ಈ ಚಾಲಾಕಿಗಳ ನಕಲಿ ನಾಟಕವನ್ನು ಬಯಲಿಗೆಳೆದಿದೆ. ನಯನಾ ಪ್ರಕಾಶ್ ಎಂಬ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿದ್ದ ಖದೀಮರು ಬೆಂಗಳೂರಿನ ಮಹಿಳೆಯೊಬ್ಬರಿಗೆ ಮೊದಲು ಆಡಿಯೋ ಕಾಲ್ ಮಾಡಿ, ನಿಮ್ಮ ತಾಯಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂದು ಬೆದರಿಸಿದ್ದಾರೆ.

ಹಾರಕೋಡು ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮೀಜಿ ಕಿವಿಮಾತು

ಎಲ್ಲರೂ ಬಸವತತ್ವ ಪಾಲಿಸಿ

ಬೀದರ್: ಅಹಂ ಇಲ್ಲದ, ಧೈರ್ಯಶಾಲಿಗಳಾದ ಮತ್ತು ಸಮಯೋಚಿತವಾಗಿ ನುಡಿವ ಹಾಗೂ ದಾನ ಮಾಡುವ ಪ್ರವೃತ್ತಿ ಮೈಗೂಡಿಸಿಕೊಂಡಿರುವ ಈಶ್ವರ ಖಂಡ್ರೆ ತಮ್ಮ ಚತುರ್ಗುಣದಿಂದಲೇ ಜನಮೆಚ್ಚಿದ ನಾಯಕರಾಗಿದ್ದು, ಎಲ್ಲಾ ಸಮುದಾಯಕ ನಾಯಕರು ಬಸವತತ್ವ ಪಾಲಿಸಬೇಕು ಎಂದು ಹಾರಕೋಡು ಶ್ರೀ ಚನ್ನವೀರ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ಬೀದರ್ ಕರ್ನಾಟಕ ಫಾರ್ಮಸಿ ಕಾಲೇಜಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕೆಹಮ್ಮಿಕೊಂಡಿದ್ದ ಅಭಿನಂದನಾಸಮಾರಂಭದಲ್ಲಿ ಮಾತನಾಡಿ, ಈ ಕಾರ್ಯಕ್ರಮಕ್ಕೆ ದೊಡ್ಡ ಸಂಖ್ಯೆಯಲ್ಲಿ ಪ್ರೀತಿಪೂರ್ವಕವಾಗಿ ಎಲ್ಲರೂ ಆಗಮಿಸಿದ್ದೀರಿ. ಸದ್ಗುಣ ಸಂಪನ್ನರಾದ ಈಶ್ವರ್ ಖಂಡ್ರೆಯವರು ಶತಾಯುಷಿಗಳಾಗಿ ಬಾಳಲಿ, ಈ ನಾಡು ಬೆಳಗಲಿ ಎಂದರು.

ಇಡೀ ಬೀದರ್ ನಗರದ ಇತಿಹಾಸದಲ್ಲಿಯೇ ಬಸವತತ್ವದವರು, ಪಂಚಾಚಾರ್ಯ ಪರಂಪರೆಯವರು, ವಿರಕ್ತರು ಎಲ್ಲರೂ ಒಂದೇ ವೇದಿಕೆ ಯಲ್ಲಿ ಸೇರಿದ್ದಾರೆ. ರೇಣುಕಾಚಾರ್ಯರಿಗೆ, ಬಸವಣ್ಣನವರಿಗೆ ಹಾಗೂ ಹಾನಗಲ್ಲ ಕುಮಾರೇಶ್ವರರ ಭಾವ ಚಿತ್ರಕ್ಕೆ ಇಂದು ಪುಷ್ಪನಮನ ಸಲ್ಲಿಸಿದ ಐಕ್ಯತೆ ಕಾರ್ಯಕ್ರಮ ಇದಾಗಿದೆ ಎಂದರು. ಚೆನ್ನಬಸವಪಟ್ಟದ್ದೇವರು ನಮ್ಮೆಲ್ಲರ ಹೃದಯದಲ್ಲಿದ್ದಾರೆ. ಅವರಿಗೂ ಸೇರಿದಂತೆ ನಮಗೆಲ್ಲರಿಗೂ ಆಧ್ಯಾತ್ಮಿಕ ಶಕ್ತಿಯನ್ನು ತುಂಬಿದವರು ಕುಮಾರೇಶ್ವರರು ಎಂದರು. ಚನ್ನಬಸವ ಪಟ್ಟದ್ದೇವರ ಪರಮಭಕ್ತರಾದ ಈಶ್ವರ ಖಂಡ್ರೆಯವರು ಸಮಾಜಕ್ಕಾಗಿ ಶ್ರಮಿಸುತ್ತಿದ್ದಾರೆ ಎಂದರು.

ಮಾಜಿ ಶಾಸಕ ಅಶೋಕ್ ಖೇಣಿ ಮಾತನಾಡಿ, ಈಶ್ವರ ಖಂಡ್ರೆ ಅವರ ನೇತೃತ್ವದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ದೊಡ್ಡ ಶಕ್ತಿಯಾಗಲಿದೆ ಎಂದರು. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಮಾತನಾಡಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ



ಖಂಡ್ರೆ ಮೇಲೆ ದೊಡ್ಡ ಜವಾಬ್ದಾರಿ: ರಾಜಶೇಖರ ಪಾಟೀಲ್

ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷತೆ ಅತಿ ದೊಡ್ಡ ಹೊಣೆಯಾಗಿದ್ದು, ಈ ಜವಾಬ್ದಾರಿ ಚಿಕ್ಕ ವಯಸ್ಸಿನಲ್ಲೇ ಈಶ್ವರ ಖಂಡ್ರೆ ಅವರಿಗೆ ಲಭಿಸಿದೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ್ ಹೇಳಿದರು. ಬೀದರ್‌ನ ಕರ್ನಾಟಕ ಫಾರ್ಮಸಿ ಕಾಲೇಜಿನ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ಭಾಲ್ಕಿ ಕ್ಷೇತ್ರದಿಂದ 4 ಬಾರಿ ಶಾಸಕರಾಗಿ, 2 ಬಾರಿ ಸಚಿವರಾಗಿ ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸುವ ಅವಕಾಶ ಈಶ್ವರ ಖಂಡ್ರೆ ಅವರಿಗೆ ಲಭಿಸಿದೆ. ಅವರು ಈಗ ಸಭಾ ಅಧ್ಯಕ್ಷರಾಗಿ ಬೀದರ್‌ನಿಂದ ಚಾಮರಾಜನಗರದವರೆಗೆ ಸಂಘಟನೆಯನ್ನು ಬಲಪಡಿಸಬೇಕು ಎಂದರು. ವೀರಶೈವ ಮತ್ತು ಲಿಂಗಾಯತರು ಒಂದೇ ನಾಣ್ಯದ ಎರಡು ಮುಖ ಇದ್ದಂತೆ. ನಾವು ಜೊತೆಯಾಗಿ ಸಾಗಿದಾಗ ಅಭಿವೃದ್ಧಿ ಸಾಧ್ಯ ಎಂದರು.

ಬೀದರ್‌ನ ಆಶಾಕಿರಣ ಈಶ್ವರ ಖಂಡ್ರೆ ಅವರ ಕೈಯನ್ನು ನಾವೆಲ್ಲರೂ ಬಲಪಡಿಸಬೇಕು ಎಂದರು.

ಸಿದ್ಧಾರೂಢಮಠದ ಶ್ರೀ ಶಿವಕುಮಾರ ಸ್ವಾಮೀಜಿ ಮಾತನಾಡಿ, ಈಶ್ವರ ಖಂಡ್ರೆ ಅವರಿಗೆ ಭೀಮಣ್ಣ ಖಂಡ್ರೆ ಅವರಿಂದ ದಿವ್ಯ ಶಕ್ತಿ ಲಭಿಸಿದೆ. ಸಮಾಜದ ಒಳಿತಿಗಾಗಿ ಸದಾ ಶ್ರಮಿಸುತ್ತಿರುವ ಈಶ್ವರ ಖಂಡ್ರೆ ಅವರಲ್ಲಿ ಸಂತರ ಕರುಣೆ, ಯೋಧನ ಶೌರ್ಯ, ದಾನಿಯ ದಯಾಗುಣವಿದೆ. ಅವರು ತಮ್ಮ ಗುಣದಿಂದಲೇ ಗೌರವ ಪಡೆದಿದ್ದಾರೆ. ಹೀಗಾಗಿಯೇ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳು ಆಗಮಿಸಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ರಾಜಶೇಖರ ಪಾಟೀಲ್, ಶಾಸಕರುಗಳಾದ ಚಂದ್ರಕಾಂತ್ ಪಾಟೀಲ್, ಭೀಮರಾವ್ ಪಾಟೀಲ್, ಮುಖಂಡರಾದ ಸೂರ್ಯಕಾಂತ ಪಾಟೀಲ್, ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ಸಿದ್ಧಾರೂಢ ಮಠ ಬೀದರ್‌ನ ಶ್ರೀ ಶಿವಕುಮಾರಸ್ವಾಮಿ, ಹಾರಕೋಡು ಮಠದ, ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮೀಜಿ, ಬೈಲೂರು ನಿಜಗುಣಾನಂದ ಸ್ವಾಮೀಜಿ, ಬೇಲ್ದಾಳೆ ಶರಣರು ಮತ್ತಿತರರು ಪಾಲ್ಗೊಂಡಿದ್ದರು.

ಮೋದಿ ಜನಪ್ರಿಯತೆ ಕುಗ್ಗಿಲ್ಲ: ವಿಜಯೇಂದ್ರ



ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಜೀ ಅವರು 8,931 ದಿನಗಳ ಕಾಲ ನಿರಂತರವಾಗಿ ಆಡಳಿತ ನಡೆಸುತ್ತಿರುವುದು ನಮ್ಮೆಲ್ಲರಿಗೂ ತುಂಬ ಸಂತೋಷ ತಂದು ಕೊಟ್ಟ ವಿಚಾರ. ಇದು ಬಹಳ ದೊಡ್ಡ ಮೈಲಿಗಲ್ಲು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ವಿಶ್ಲೇಷಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದ ಬಗ್ಗೆ ಇವತ್ತು ದೇಶಾದ್ಯಂತ ಶ್ಲಾಘನೆ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಭಾರತವು ಎಲ್ಲ ಕ್ಷೇತ್ರಗಳಲ್ಲೂ ಮುಂದೆ ಸಾಗುತ್ತಿರುವ ಸಂದರ್ಭದಲ್ಲಿ ಮೋದಿಜೀ ಅವರು ದಿಟ್ಟ ನಾಯಕತ್ವ ನೀಡಿದ್ದಾರೆ. ಸ್ವಾತಂತ್ರ್ಯ ಬಂದ ನಂತರದಲ್ಲಿ ಸತತ 3ನೇ ಬಾರಿಗೆ ಪ್ರಧಾನಿಗಳಾಗಿ ಮೋದಿ ಅವರ ಜನಪ್ರಿಯತೆ ಯಾವತ್ತೂ ಕುಗ್ಗಿಲ್ಲ ಎಂದು ನುಡಿದರು.

ಬಿಜೆಪಿ ಅಭ್ಯರ್ಥಿಗಳು ಗೆದ್ದುಬರುತ್ತಾರೆ

ಬಾಗಲಕೋಟೆಗೆ ಮಾಜಿ ಶಾಸಕ ವೀರಣ್ಣ ಚರಂತಿಮಠ್, ದಾವಣಗೆರೆ ದಕ್ಷಿಣಕ್ಕೆ ಶ್ರೀನಿವಾಸ ದಾಸ್ ಕರಿಯಪ್ಪ ನಮ್ಮ ಅಭ್ಯರ್ಥಿಯಾಗಿದ್ದಾರೆ. ಕಾರ್ಯಕರ್ತರಲ್ಲಿ ರಣೋತ್ಸಾಹ ಕಾಣುತ್ತಿದೆ. ಮತ್ತೊಂದು ಕಡೆ ಮತದಾರರು ರಾಜ್ಯ ಸರಕಾರದ ವಿರುದ್ಧ ಬೇಸತ್ತಿದ್ದಾರೆ. ಜನವಿರೋಧಿ, ಬಡವರ ವಿರೋಧಿ, ರೈತ ವಿರೋಧಿ, ಯುವಜನತೆಯ ಭವಿಷ್ಯವನ್ನು ಹಾಳುಗೆಡವಿದ ಈ ಕಾಂಗ್ರೆಸ್ ಸರಕಾರದ ವಿರುದ್ಧ ಜನರು ದಂಡೇಳುವ ಪರಿಸ್ಥಿತಿಯಲ್ಲಿ ಉಪ ಚುನಾವಣೆ ಘೋಷಣೆ ಆಗಿದೆ. ಬಾಗಲಕೋಟೆ ಕ್ಷೇತ್ರದ ಪ್ರಜ್ಞಾವಂತ ಮತದಾರರು ಈ ಬಾರಿ ಬಿಜೆಪಿಯನ್ನು ಬೆಂಬಲಿಸುತ್ತಾರೆ. ಹಿರಿಯರಾದ ವೀರಣ್ಣ ಚರಂತಿಮಠ್ ಅವರು ಗೆದ್ದು ಬಂದೇ ಬರುತ್ತಾರೆಂಬ ವಿಶ್ವಾಸ ಇದೆ ಎಂದು ಹೇಳಿದರು. ಅದೇರೀತಿ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲೂ ಒಂದು ಅಚ್ಚರಿಯ ಫಲಿತಾಂಶ ಬರಲಿದ್ದು, ಬಿಜೆಪಿ ಅಭ್ಯರ್ಥಿ ಗೆದ್ದು ಬರುತ್ತಾರೆ ಎಂದು ವಿಶ್ವಾಸದಿಂದ ತಿಳಿಸಿದರು. ಕೇಂದ್ರ ಸಚಿವರಾದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಜೊತೆಗೂ ಚರ್ಚೆ ಮಾಡಿದ್ದೇನೆ. ಅವರೂ ಸಂಪೂರ್ಣ ಬೆಂಬಲ ಕೊಡುತ್ತಿದ್ದಾರೆ ಎಂದು ಹೇಳಿದರು. ಇದೆಲ್ಲದರ ಪರಿಣಾಮವಾಗಿ ಎರಡೂ ಕ್ಷೇತ್ರಗಳಲ್ಲಿ ನಾವು ಗೆಲ್ಲಲಿದ್ದೇವೆ ಎಂದರು.

ಕಲಾಪಕ್ಕೆ ಪ್ರಮುಖ ನಾಯಕರು ಗೈರು

ಬೆಂಗಳೂರು: ಯುಗಾದಿ ಮತ್ತು ರಂಜಾನ್ ಹಬ್ಬದ ರಜಾ ದಿನಗಳ ನಂತರ ಬಜೆಟ್ ಅಧಿವೇಶನ ಮತ್ತೆ ಸೋಮವಾರದಿಂದ ಆರಂಭವಾಗಲಿದ್ದು, ಬಜೆಟ್ ಮೇಲಿನ ಚರ್ಚೆಗೆ ಪ್ರಮುಖ ನಾಯಕರು ಗೈರು ಹಾಜರಾಗಲಿದ್ದಾರೆ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನ ಸಭೆ ಕ್ಷೇತ್ರಗಳ ಉಪಚುನಾವಣೆಗೆ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಜೊತೆಯಾಗಿ ಭಾಗವಹಿಸಲಿದ್ದು, ಸದನದಲ್ಲಿ ಗೈರಾಗಲಿದ್ದಾರೆ. ಇನ್ನೂ ಬಿಜೆಪಿಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮತ್ತು ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ಕೂಡಾ ತಮ್ಮ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಭಾಗಿಯಾಗಲಿದ್ದು, ಇದರ ಜತೆಗೆ ಪಂಚರಾಜ್ಯಗಳ ಚುನಾವಣೆ ಪ್ರಚಾರದಲ್ಲಿ ಪ್ರಮುಖ ಸಚಿವರು ಕೂಡಾ ತೆರಳಿದ್ದಾರೆ. ಆಡಳಿತ ಮತ್ತು ಪ್ರತಿಪಕ್ಷಗಳ ಪ್ರಮುಖ ನಾಯಕರ ಅನುಪಸ್ಥಿತಿಯಿಂದ ಬಜೆಟ್ ಮೇಲಿನ ಚರ್ಚೆಯ ತೀವ್ರತೆ ಕಡಿಮೆಯಾಗಲಿದೆ. ವಿರೋಧ ಪಕ್ಷಗಳ ಪ್ರಶ್ನೆಗಳಿಗೆ ಸರ್ಕಾರವನ್ನು ಸಮರ್ಥಿಸಿಕೊಳ್ಳುವ ಜವಾಬ್ದಾರಿ ಒಂದಿಬ್ಬರು ಸಚಿವರ ಮೇಲೆ ಇದೆ.

ಪುತ್ರನಿಗೆ ಟಿಕೆಟ್ ತರುವಲ್ಲಿ ಸಚಿವ ಮಲ್ಲಿಕಾರ್ಜುನ್ ಯಶಸ್ವಿ

ಟಿಕೆಟ್ ಆಕಾಂಕ್ಷಿಗಳಿಂದ ಬಂಡಾಯ

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಮುಸ್ಲಿಂ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ನೀಡಬೇಕೆಂಬಬೇಡಿಕೆನಡುವೆಯೂಪುತ್ರನಿಗೆ ಟಿಕೆಟ್ ತರುವಲ್ಲಿ ಸಚಿವ ಮಲ್ಲಿಕಾರ್ಜುನ್ ಯಶಸ್ವಿಯಾಗಿದ್ದಾರೆ. ಇದರೊಂದಿಗೆ ಟಿಕೆಟ್ ಸಮರಕ್ಕೆ ತೆರೆಬಿದ್ದಿದ್ದರೂ, ಟಿಕೆಟ್ ಆಕಾಂಕ್ಷಿಗಳಾಗಿದ್ದ ಮುಸ್ಲಿಂ ಮುಖಂಡರ ಮುಂದಿನ ನಡೆ ಕುತೂಹಲಕ್ಕೆ ಕಾರಣವಾಗಿದೆ. ಪಕ್ಷದಲ್ಲಿನ ಭಿನ್ನಮತ ಚುನಾವಣಾ ವೇಳೆಗೆ ಜ್ವಾಲಾಮುಖಿಯಾಗಿ ಸ್ಫೋಟಗೊಳ್ಳುವ ಲಕ್ಷಣಗಳು ದಟ್ಟವಾಗಿವೆ.

ಕಾಂಗ್ರೆಸ್ ಮುಖಂಡ ಸಾದಿಕ್ ಪೈಲ್ವಾನ್ ಈಗಾಗಲೇ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಮೂಲಕ ಬಂಡಾಯದ ಬಾವುಟ ಹಾರಿಸಿದ್ದಾರೆ. ಟಿಕೆಟ್ ಘೋಷಣೆ ನಂತರವೂ ನಿಲುವು ಬದಲಿಸದ ಸಾದಿಕ್ ಪೈಲ್ವಾನ್ ಸೋಮವಾರ ಮತ್ತೆ ನಾಮಪತ್ರ ಸಲ್ಲಿಸುವ ಮೂಲಕ ಕಣದಲ್ಲಿ ಉಳಿಯುವುದಾಗಿ ಘೋಷಿಸಿದ್ದಾರೆ.

ಹಿಂದೆ ಸರಿಯುವ ಮಾತೇ ಇಲ್ಲ: ಸಾದಿಕ್

ದಾವಣಗೆರೆ: ಬಾಲ್ಯದಿಂದಲೂ ನಾನೊಬ್ಬ ಪೈಲ್ವಾನ್. ಒಮ್ಮೆ ಅಖಾಡಕ್ಕಿಳಿದರೆ ಮತ್ತೆ ಹಿಂದೆ ಸರಿಯುವ ಮಾತೇ ಇಲ್ಲ ಎಂದು ಕಾಂಗ್ರೆಸ್ ಹಾಗೂ ಮುಸ್ಲಿಂ ಸಮಾಜದ ಹಿರಿಯ ಮುಖಂಡ ಸಾದಿಕ್ ಪೈಲ್ವಾನ್ ಸ್ಪಷ್ಟಪಡಿಸಿದ್ದಾರೆ. ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಕೊಡುವಂತೆ ಕೇಳಿದ್ದೆವು. ಮುಸ್ಲಿಮರಿಗೆ ಟಿಕೆಟ್ ಸಿಕ್ಕಿಲ್ಲ. ಹಾಗಾಗಿ ನಾನು ಪಕ್ಷೇತರನಾಗಿಯೇ ಕಣಕ್ಕಿಳಿಯುತ್ತೇನೆ. ಎದುರಾಳಿಯಾಗಿ ಆನೆಯೇ ಇದ್ದರೂ ನಾನು ಸೆಡ್ಡು ಹೊಡೆಯುತ್ತೇನೆ. ದಕ್ಷಿಣ ಕ್ಷೇತ್ರದಲ್ಲಿ ನನಗೆ ಕಾಂಗ್ರೆಸ್ ಪಕ್ಷವೇ ಎದುರಾಳಿ. ಯಾರು ಏನೇ ಹೇಳಿದರೂ ನಾನು ಸ್ಪರ್ಧೆ ಮಾಡುವುದು ಶತಸಿದ್ಧ. ನಾನು ಮಾ.23ರಂದು ಬೆಳಗ್ಗೆ 11.30ಕ್ಕೆ ಅರಳೀ ಮರ ವೃತ್ತದಿಂದ ಪಾದಯಾತ್ರೆ ಮೂಲಕ ತೆರಳಿ, ಚುನಾವಣಾಧಿಕಾರಿಗೆ ಇನ್ನೊಂದು ಸಲ ನನ್ನ ನಾಮಪತ್ರ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಇವರಿಗೆ ಎಐಎಂಐಎಂ, ಎಸ್.ಡಿ.ಪಿ.ಐ ಪಕ್ಷಗಳು ಬೆಂಬಲಿಸಿದಲ್ಲಿ ಮುಸ್ಲಿಂ ಮತಗಳು ಚದುರಿಹೋಗಿ, ಸಮರ್ಥ ಶಾಮನೂರು ಗೆಲುವು ಪ್ರಯಾಸದ ಹಾದಿಯಾಗಲಿದೆ. ಸಮರ್ಥ ಶಾಮನೂರುಗೆ ಟಿಕೆಟ್ ಘೋಷಣೆ ಆಗುತ್ತಿದ್ದಂತೆ ಇನ್ನೋರ್ವ ಟಿಕೆಟ್ ಆಕಾಂಕ್ಷಿಯಾಗಿದ್ದ ವಿಧಾನ ಪರಿಷತ್ ಸದಸ್ಯ ಕೆ. ಅಬ್ದುಲ್ ಜಬ್ಬಾರ್ ಬಣವು ಸಾಮಾಜಿಕ ಜಾಲತಾಣಗಳಲ್ಲಿ 'ತಾವು ಮತಬ್ಯಾಂಕ್ ಅಲ್ಲ, ಮತ ಪವರ್ ಎಂಬುದನ್ನು ಚುನಾವಣೆ ವೇಳೆ ತೋರಿಸುತ್ತೇವೆ ಅಂತಾ ಆಕ್ರೋಶ ವ್ಯಕ್ತಪಡಿಸಿದೆ.

ವಿರಾಜಪೇಟೆಯಲ್ಲಿ ಒಂಟಿ ಸಲಗ ಸೆರೆ

ಮಡಿಕೇರಿ: ವಿರಾಜಪೇಟೆ ವ್ಯಾಪ್ತಿಯಲ್ಲಿ ಮಾನವ-ಆನೆ ಸಂಘರ್ಷಕ್ಕೆ ಕಾರಣವಾಗಿದ್ದ ಮತ್ತೊಂದು ಒಂಟಿ ಸಲಗವನ್ನು ಸೆರೆ ಹಿಡಿಯುವಲ್ಲಿ ಕೊಡಗು ವಿಭಾಗದ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಮೂರು ಗಂಟೆಗಳ ಯಶಸ್ವಿ ಕಾರ್ಯಾಚರಣೆ ಬಳಿಕ 35 ವರ್ಷದ ಒಂಟಿ ಸಲಗವನ್ನು ಯಶಸ್ವಿಯಾಗಿ ಸೆರೆ ಹಿಡಿಯಲಾಗಿದೆ.

ಕಾಡಾನೆಗಳ ಚಲನವಲನದ ಹೆಚ್ಚಳ ಹಾಗೂ ಕಕ್ಕೂರು, ಚೆಂಬ ಬೆಳ್ಳೂರು ಸುತ್ತಮುತ್ತಲ ಗ್ರಾಮಗಳ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಬೀಡುಬಿಟ್ಟು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದ ಒಂಟಿ ಸಲಗ ಸೆರೆ ಹಿಡಿಯಲು ಸರ್ಕಾರ ಅನುಮತಿ ನೀಡಿತ್ತು.

ಭಾನುವಾರ ಬೆಳಗ್ಗೆ ಆನೆ ಪತ್ತೆಯಾದ ನಂತರ ಸೆರೆ ಹಿಡಿಯುವ ಕಾರ್ಯಾಚರಣೆ ಆರಂಭವಾಗಿದ್ದು, ಮಧ್ಯಾಹ್ನದ ವೇಳೆಗೆ ಅರಣ್ಯಾಧಿಕಾರಿಗಳು ಯಶಸ್ವಿಯಾಗಿ ಒಂಟಿ ಸಲಗವನ್ನು ಸೆರೆ ಹಿಡಿದಿದ್ದಾರೆ. ಕೊಡಗಿನಲ್ಲಿ ಕಾಫಿ ಬೆಳೆಗಾರನ ಬಲಿ ಪಡೆದಿದ್ದ ಕಾಡಾನೆ ಸೆರೆ ದುಬಾರೆ ಹಾಗೂ ಮತ್ತಿಗೋಡು ಶಿಬಿರದ ಸಾಕಾನೆಗಳಾದ ಅಭಿಮನ್ಯು, ಮಹೇಂದ್ರ, ಕಂಜನ್, ಭೀಮ, ಸುಗ್ರೀವ ಮತ್ತು ಹರ್ಷ ಸೇರಿದಂತೆ 100 ಕ್ಕೂ ಹೆಚ್ಚು ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಉಪ ಚುನಾವಣೆಗೆ ಸಜ್ಜಾಯ್ತು ಅಖಾಡ

ಪುಟ ೧➡ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕು ಎಂಬ ಒತ್ತಡಗಳು ಇದ್ದವಾದರೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಅವರು ಕಳೆದ ಎರಡು ದಿನಗಳಿಂದ ಎಲ್ಲರ ಜತೆಗೆ ಮಾತನಾಡಿ ಅಲ್ಪಸಂಖ್ಯಾತರ ಮನವೊಲಿಸಿ ಸಮರ್ಥ ಶಾಮನೂರುರವರ ಹೆಸರನ್ನು ಅಂತಿಮಗೊಳಿಸಿದ್ದರು. ಹಾಗೆಯೇ ಬಾಗಲಕೋಟೆ ಕ್ಷೇತ್ರದಿಂದ ಉಮೇಶ್ ಮೇಟಿ ಅವರ ಹೆಸರನ್ನು ಅಂತಿಮಗೊಳಿಸಿ ಹೈಕಮಾಂಡ್‌ಗೆ ಕಳುಹಿಸಲಾಗಿತ್ತು.

ಕುಟುಂಬದಲ್ಲಿಯೇ ಪೈಪೋಟಿಯಿತ್ತು: ಬಾಗಲಕೋಟೆ ಕ್ಷೇತ್ರದಲ್ಲಿ ಟಿಕೆಟ್‌ಗಾಗಿ ದಿ.ಮೇಟಿಯವರ ಕುಟುಂಬದಲ್ಲೇ ಪೈಪೋಟಿಯಿತ್ತು. ಮೇಟಿಯವರ ಪುತ್ರಿ ಮಹಾದೇವಿ ಮೇಟಿರವರು ಟಿಕೆಟ್ ಆಕಾಂಕ್ಷಿಯಾಗಿದ್ದರು. ಸಿಎಂ ಸಿದ್ದರಾಮಯ್ಯನವರು ದಿ.ಎಚ್.ವೈ. ಮೇಟಿಯವರ ಇಬ್ಬರು ಪುತ್ರರು ಹಾಗೂ ಪುತ್ರಿಯರನ್ನು ಕರೆಸಿ ಸಭೆ ನಡೆಸಿ, ನಾವು ಯಾರಿಗೆ ಟಿಕೆಟ್ ಕೊಡುತ್ತೇವೋ ಅವರ ಪರ ಕೆಲಸ ಮಾಡಬೇಕು ಎಂದು ಸೂಚಿಸಿದ್ದರು. ಮೇಟಿಯವರ ಪುತ್ರಿ ಮಹದೇವಿ ಮೇಟಿ ತಮ್ಮ ಸಹೋದರ ಮಲ್ಲಿಕಾರ್ಜುನ ಮೇಟಿ ಬದಲು ಮತ್ತೊಬ್ಬ ಸಹೋದರ ಉಮೇಶ್ ಮೇಟಿಯವರಿಗೆ ಟಿಕೆಟ್ ನೀಡಬೇಕು. ಇಲ್ಲದಿದ್ದರೆ ತಾವು ಚುನಾವಣಾ ಕಣಕ್ಕೆ ಇಳಿಯುವುದಾಗಿ ಹೇಳಿದ್ದರು. ಈಗ ಕಾಂಗ್ರೆಸ್ ಹೈಕಮಾಂಡ್ ಉಮೇಶ್ ಮೇಟಿಯವರಿಗೆ ಟಿಕೆಟ್ ಘೋಷಣೆ ಮಾಡಿರುವುದರಿಂದ ಪರಿಹಾರವಾದಂತಾಗಿದ್ದು, ಮಹಾದೇವಿ ಮೇಟಿಯವರ ಆಶಯವೂ ಈಡೇರಿದಂತಾಗಿದೆ. ಈಗ ಎರಡೂ ಕ್ಷೇತ್ರಗಳಲ್ಲೂ ಟಿಕೆಟ್ ಹಂಚಿಕೆಯ ಗೊಂದಲಗಳು ಮುಗಿದಿದ್ದು, ಮುಂದಿನ ಹಣಾಹಣಿಗೆ ಕಾಂಗ್ರೆಸ್ ಪಕ್ಷ ಸಜ್ಜಾಗಿದೆ. ಕಾಂಗ್ರೆಸ್ ಪಕ್ಷಉಪಚುನಾವಣೆಗೆಅಭ್ಯರ್ಥಿಗಳನ್ನು ಘೋಷಣೆ ಮಾಡಿರುವುದರಿಂದ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಸಮರ್ಥ್ ಮಲ್ಲಿಕಾರ್ಜುನ್ ಮತ್ತು ಬಿಜೆಪಿಯ ಶ್ರೀನಿವಾಸ ದಾಸ ಕರಿಯಪ್ಪ ನಡುವೆ ಚುನಾವಣಾ ಗೆಲುವಿಗೆ ಹಣಾಹಣಿ ನಡೆಯಲಿದ್ದು, ಬಾಗಲಕೋಟೆಯಲ್ಲಿ ಉಮೇಶ್ ಮೇಟಿ ಮತ್ತು ಬಿಜೆಪಿಯ ವೀರಣ್ಣ ಚರಂತಿಮಠ ನಡುವೆ ಸ್ಪರ್ಧೆ ಏರ್ಪಟ್ಟಿದೆ.

ಇಂದು ನಾಮಪತ್ರ ಸಲ್ಲಿಕೆ, ಶಕ್ತಿ ಪ್ರದರ್ಶನ

ಪುಟ ೧➡ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಸಮರ್ಥ ಮಲ್ಲಿಕಾರ್ಜುನ್ ಅವರು ಬಿ ಫಾರಂ ಇಲ್ಲದೆ ಶುಭ ದಿನವೆಂದು ಕಳೆದ ಶುಕ್ರವಾರವೇ ನಾಮಪತ್ರ ಸಲ್ಲಿಸಿದ್ದರು. ಹಾಗೆಯೇ ಬಿಜೆಪಿಯ ಶ್ರೀನಿವಾಸದಾಸ ಕರಿಯಪ್ಪ ಕೂಡ ಕಳೆದ ಶುಕ್ರವಾರವೇ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದರು. ಬಾಗಲಕೋಟೆಯಲ್ಲಿ ಬಿಜೆಪಿಯ ವೀರಣ್ಣ ಚರಂತಿಮಠ ಅವರು ಸಹ ಕಳೆದ ಶುಕ್ರವಾರ ನಾಮಪತ್ರ ಸಲ್ಲಿಕೆ ಮಾಡಿದ್ದರು. ಈ ನಾಮಪತ್ರ ಸಲ್ಲಿಕೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮೊದಲಾದ ಪ್ರಮುಖರು ಭಾಗಿಯಾಗಲಿದ್ದು, ಬಿಜೆಪಿ ಅಭ್ಯರ್ಥಿಗಳ ಪರವಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಪಕ್ಷ ನಾಯಕ ಆರ್. ಅಶೋಕ್ ಸೇರಿದಂತೆ ಪ್ರಮುಖ ಮುಖಂಡರುಗಳು ಪಾಲ್ಗೊಳ್ಳಲಿದ್ದು, ಇಂದಿನ ನಾಮಪತ್ರ ಸಲ್ಲಿಕೆ ಎರಡೂ ಪಕ್ಷಗಳ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾಗಲಿದೆ.



ನಮ್ಮ ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆ ನಾನು ಹಾಗೂ ಮುಖ್ಯಮಂತ್ರಿಗಳು ದಾವಣಗೆರೆ ಹಾಗೂ ಬಾಗಲಕೋಟೆಗೆ ಹೋಗುತ್ತಿದ್ದೇವೆ. ಎರಡೂ ಕ್ಷೇತ್ರಗಳಲ್ಲೂ ಪಕ್ಷವನ್ನು ಗೆಲ್ಲಿಸಲು ಎಲ್ಲಾ ರೀತಿಯ ತಂತ್ರಗಳನ್ನು ರೂಪಿಸಲಾಗಿದೆ. ಎಲ್ಲರೂ ಸೇರಿ ಪಕ್ಷ ಗೆಲ್ಲಿಸಿಕೊಂಡು ಬರುತ್ತೇವೆ.

■ **ಡಿ.ಕೆ.ಶಿವಕುಮಾರ್**, ಕೆಪಿಸಿಸಿ ಅಧ್ಯಕ್ಷ

ಅಚಲ ಬದ್ಧತೆಯ ಪ್ರತೀಕ: ಶಾ

ಪುಟ ೧➡ ಮೊದಲಿಗೆ ಗುಜರಾತ್ ಮುಖ್ಯಮಂತ್ರಿಯಾಗಿ ನಂತರ ಪ್ರಧಾನಿಯಾಗಿ 'ರಾಷ್ಟ್ರ ಮೊದಲು ಎನ್ನುವ ಬದ್ಧತೆಯೊಂದಿಗೆ ತಮ್ಮ ಕೃತಿಯಲ್ಲಿ ಸಮಗ್ರತೆಯನ್ನು ಕಾಯ್ದುಕೊಂಡು ದೇಶದ ಪ್ರತಿ ನಾಗರಿಕನ ಉನ್ನತಿಯ ಚಿಂತನೆಯೊಂದಿಗೆ ಅವಿಶ್ರಾಂತ ಸೇವೆ ಸಲ್ಲಿಸುತ್ತಿದ್ದಾರೆ. ಇದು ಅಭೂತಪೂರ್ವ ವಿಶ್ವಾಸ ಮತ್ತು ಸಾಟಿಯಿಲ್ಲದ ಸೇವೆಯೊಂದರ ಮೇಲೆ ನಿರ್ಮಿಸಲಾದ ಅಪೂರ್ವ ಪರಂಪರೆ ಎಂಬುದಾಗಿ ಬರೆದುಕೊಂಡಿದ್ದಾರೆ.

ಪ್ರಧಾನಿ ಮೋದಿಯವರು ಈಗ ಭಾರತ ಸರ್ಕಾರದ ಮುಖ್ಯಸ್ಥರಾಗಿ ಸುದೀರ್ಘ ಸೇವೆ ಸಲ್ಲಿಸಿದ ದಾಖಲೆ ಮಾಡಿದ್ದು, ರಾಷ್ಟ್ರ ಮತ್ತು ರಾಷ್ಟ್ರದ ಜನತೆಗೆ ಪೂರ್ಣ ಸಮರ್ಪಿತವಾದ ಮೋದಿಯವರ ನಿಷ್ಠೆಯೇ ಅವರನ್ನು ಈ ಸಾಧನೆಗೈಯ್ಯುವಂತೆ ಮಾಡಿದೆ.

■ **ರಾಜನಾಥ್ ಸಿಂಗ್**, ರಕ್ಷಣಾ ಸಚಿವ

ಮೋದಿಗೆ ಇನ್‌ಸ್ಟಾಗ್ರಾಮ್‌ನಲ್ಲಿ 10 ಕೋಟಿ ಫಾಲೋವರ್ಸ್; ದಾಖಲೆ

ಇದಕ್ಕೂ ಮುನ್ನ ಪ್ರಧಾನಿ ಮೋದಿಯವರು ಇನ್‌ಸ್ಟಾಗ್ರಾಮ್‌ನಲ್ಲಿ 10 ಕೋಟಿ (100ಮಿಲಿಯ)ಫಾಲೋವರ್ಸ್‌ಗಳನ್ನು ಹೊಂದಿದ ವಿಶ್ವದ ಮೊದಲ ನಾಯಕನೆಂಬ ಖ್ಯಾತಿಗೆ ಭಾಜನರಾಗಿದ್ದರು. ಇದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ (43ಮಿ.ಫಾಲೋವರ್ಸ್) ಅವರಿಗಿಂತ ದುಪ್ಪಟ್ಟು ಸಂಖ್ಯೆ ಎಂಬುದಿಲ್ಲಿ ಉಲ್ಲೇಖನೀಯ.

ವಿದ್ಯುತ್ ಉತ್ಪಾದನೆ ಹೆಚ್ಚಿಸುವ ಗುರಿ: ಗೌರವ್ ಗುಪ್ತ

ಬೆಂಗಳೂರು: ಮುಂದಿನ 5 ವರ್ಷಗಳಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು 25 ಸಾವಿರ ಮೆಗಾವ್ಯಾಟ್‌ಗೆ ಹೆಚ್ಚಿಸುವ ಗುರಿಯನ್ನು ಕರ್ನಾಟಕ ಹೊಂದಿದ್ದು, ಇದನ್ನು ಸಾಧಿಸಲು ಸರ್ಕಾರ ಸಾಕಷ್ಟು ಪೂರಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ ಎಂದು ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದ್ದಾರೆ.

ಕರ್ನಾಟಕ ನವೀಕರಿಸಬಹುದಾದ ಇಂಧನ ನಿಯಮಿತ (ಕ್ರೆಡಲ್), ಸಿಇಇಡಬ್ಲ್ಯು ಸಹಯೋಗದೊಂದಿಗೆ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಹೂಡಿಕೆದಾರರು ಮತ್ತು ಜನರ ಸಹಯೋಗದೊಂದಿಗೆ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು 25 ಸಾವಿರ ಮೆಗಾವ್ಯಾಟ್‌ಗೆ ಹೆಚ್ಚಿಸುವ ಗುರಿ ಸಾಧಿಸಬೇಕಾಗಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಸಾಕಷ್ಟು ಭೂಮಿ ಬೇಕಾಗುತ್ತದೆ. ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಜನರಿಂದ ಸಾಕಷ್ಟು ವಿರೋಧಗಳು ಬರುತ್ತಿವೆ. ಯೋಜನೆಗಳಿಗೆ ನಮಗೆ ತೊಂದರೆಯಾಗುತ್ತದೆ ಎಂಬ ಆತಂಕ ಅವರಲ್ಲಿರುತ್ತದೆ. ಭೂಸ್ವಾಧೀನಕ್ಕೆ ಬರುವ ವಿರೋಧಗಳನ್ನು ಹೂಡಿಕೆದಾರರು ಅಡೆತಡೆ ಎಂದು ಯೋಚಿಸುತ್ತಾರೆ. ಆದ್ದರಿಂದ ನವೀಕರಿಸಬಹುದಾದ ಇಂಧನ ನೇತೃತ್ವದ ಬೆಳವಣಿಗೆಯು ದೇಶದ ಅಭಿವೃದ್ಧಿಗೆ ಮಾರ್ಗ ಎಂಬುದನ್ನು ಜನರಿಗೆ ಮನದಟ್ಟು ಮಾಡಿಕೊಟ್ಟರೆ ಅವರು ಯೋಜನೆಗಳನ್ನು ಬೆಂಬಲಿಸುತ್ತಾರೆ ಎಂದು ತಿಳಿಸಿದರು.

ಉದ್ಯಮ ವಲಯದಿಂದ ಬಂದಿರುವ ಪ್ರತಿಕ್ರಿಯೆಗಳನ್ನು ಆಧರಿಸಿ ಭೂಸ್ವಾಧೀನ ವಿಚಾರದಲ್ಲಿ ಸರಳೀಕರಣ ಮಾಡಲಾಗಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಭೂಮಿ ಪಡೆಯಲು ರಾಜ್ಯ ಸರ್ಕಾರ ವಿಶೇಷ ಆನ್ ಲೈನ್ ಪೋರ್ಟಲ್ ಸಿದ್ಧಪಡಿಸಿದೆ. ಹೂಡಿಕೆದಾದರರು ರೈತರೊಂದಿಗೆ ಮಾತುಕತೆ ನಡೆಸಿದ ಬಳಿಕ ಭೂ ಪರಿವರ್ತನೆಗಾಗಿ ಆನ್‌ಲೈನ್ ನೋಂದಣಿ ಮಾಡಿ, ಪರಿವರ್ತನೆ ಮಾಡಿಸಿಕೊಳ್ಳಬಹುದು ಎಂದು ತಿಳಿಸಿದರು.



ಮುಖ್ಯಮಂತ್ರಿ ಸೌರ ಕೃಷಿ ಯೋಜನೆಗೆ ಮೆಚ್ಚುಗೆ

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಕರ್ನಾಟಕವು ಸಾಕಷ್ಟು ಸಾಧನೆಗಳನ್ನು ಮಾಡಿದ್ದು, ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಪಡೆದಿದೆ. ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸಾಧನೆಗಾಗಿ ಭೂಸ್ವಾಧೀನದಲ್ಲಿ ಸುಧಾರಣೆಗಳನ್ನು ತಂದಿದೆ. ಈ ಬಾರಿಯ ಆಯವ್ಯಯದಲ್ಲಿ ಮುಖ್ಯಮಂತ್ರಿ ಸೌರ ಕೃಷಿ ಯೋಜನೆಯನ್ನು ಘೋಷಿಸಿದ್ದು, ಇದು ಕೃಷಿ ಮತ್ತು ನವೀಕರಿಸಬಹುದಾದ ಇಂಧನವನ್ನು ಒಂದೇ ವೇದಿಕೆಯಲ್ಲಿ ತರುವ ಮಹತ್ವದ ಯೋಜನೆಯಾಗಿದೆ.ಅಭಿವೃದ್ಧಿಪರ ಯೋಜನೆಗಳ ರೂಪರೇಷೆ ಮತ್ತು ಅನುಷ್ಠಾನದಲ್ಲಿ ಗುಣಮಟ್ಟವನ್ನ ಹೆಚ್ಚಿಸಬೇಕಾದ ಅವಶ್ಯಕತೆ ಇದ್ದು, ಇರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೂಡಿಕೆದಾರರು ಮತ್ತು ಜನರ ಮಧ್ಯೆ ಸಮನ್ವಯತೆ ಸಾಧಿಸಿ ಯೋಜನೆಗಳನ್ನು ಜಾರಿಗೊಳಿಸಬೇಕೆಂದು ಕ್ರೆಡಲ್ ಅಧ್ಯಕ್ಷ ಟಿ.ಡಿ.ರಾಜೇಗೌಡ ಹೇಳಿದರು.

ಅಧಿವೇಶನ ಸಮಾರಂಭ



ರಾಜಸ್ಥಾನದ ಭಾರತೀಯ ಯುವ ಸಂಸತ್ತು ಮತ್ತು ಹೊಸದಿಲ್ಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯಗಳ ಜಂಟಿ ಆಶ್ರಯದಲ್ಲಿ ನಾಗ್ಪುರದ ಆರ್. ಎಸ್. ಎಸ್. ಪ್ರಧಾನ ಕಚೇರಿಯ ಸಭಾಂಗಣದಲ್ಲಿ ನಡೆಯುತ್ತಿರುವ 29ನೇ ಭಾರತೀಯ ಯುವ ಸಂಸತ್ ಮೂರು ದಿನಗಳ ಅಧಿವೇಶನದಲ್ಲಿ ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಪಾಲ್ಗೊಂಡರು. ತೆಲಂಗಾಣ ರಾಜ್ಯಪಾಲ ಜಿಷ್ಣುದೇವ ವರ್ಮಾ, ಶ್ರೀರಾಮಾನುಜ ಪರಂಪರೆಯ ಶ್ರೀ ಚಿನ್ನಜೀಯರ್ ಸ್ವಾಮೀಜಿ, ಕೇಂದ್ರೀಯ ಸಂಸ್ಕೃತ ವಿವಿ ಉಪಕುಲಪತಿ ಡಾ. ಶ್ರೀನಿವಾಸ ವರಖೇಡಿ ಮೊದಲಾದವರು ಉಪಸ್ಥಿತರಿದ್ದರು.

ಕಿರುಸುದ್ದಿ

ಏ.1ರಂದು ರಾಷ್ಟ್ರಪತಿ ಸಿದ್ಧಗಂಗಾ ಮಠಕ್ಕೆ ಭೇಟಿ

ತುಮಕೂರು: ನಗರದ ಸಿದ್ಧಗಂಗಾ ಮಠದಲ್ಲಿ ಏ.1ರಂದು ಹಮ್ಮಿಕೊಂಡಿರುವ ಲಿಂ.ಶ್ರೀ ಶಿವಕುಮಾರ ಸ್ವಾಮೀಜಿ ಅವರ 119 ಜನ್ಮ ವರ್ಷಾಂತಿ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಗವಹಿಸಲಿದ್ದಾರೆ.



ಏ.1ರಂದು ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಗದ್ದುಗೆ ದರ್ಶನ ಪಡೆದು, ಪೂಜೆ ಸಲ್ಲಿಸಿ, ಧ್ಯಾನ ಮಂದಿರ ಭೇಟಿ ಬಳಿಕ ಮಕ್ಕಳೊಂದಿಗೆ ಸಂವಾದ ನಡೆಸಿ, ಬಳಿಕ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜನ್ಮದಿನಾಚರಣೆ ಕಾರ್ಯಕ್ರಮದ ವೇದಿಕೆಯಲ್ಲಿ ಭಾಗವಹಿಸಲಿದ್ದಾರೆ.

ಕೇಂದ್ರ ಸಚಿವ ವಿ.ಸೋಮಣ್ಣ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾ. 31ರಂದು ಬೆಂಗಳೂರಿಗೆ ಆಗಮಿಸಿ ಲೋಕ್ ಪಾಲ್ ಭವನದಲ್ಲಿ ತಂಗಲಿದ್ದಾರೆ. ಏ.1ರಂದು ಬೆಳಗ್ಗೆ ಸಿದ್ಧಗಂಗಾ ಮಠಕ್ಕೆ ಆಗಮಿಸುವರು. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಸಚಿವರಾದ ಎಂಬಿ ಪಾಟೀಲ್ ಸೇರಿದಂತೆ ಸ್ಥಳೀಯ ಶಾಸಕರು ಭಾಗವಹಿಸಲಿದ್ದಾರೆ.

ಹೊನ್ನಾಕಟ್ಟಿ ಚೆಕ್‌ಪೋಸ್ಟ್‌ನಲ್ಲಿ ₹32.50 ಲಕ್ಷ ನಗದು ಜಪ್ತಿ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯ ಹಿನ್ನೆಲೆಯಲ್ಲಿ ಹೊನ್ನಾಕಟ್ಟಿ ಚೆಕ್‌ಪೋಸ್ಟ್‌ನ ಅಧಿಕಾರಿಗಳ ತಂಡ ಭಾನುವಾರ ಬೆಳಗಿನ ಜಾವ 4 ಗಂಟೆ ಸುಮಾರಿಗೆ ನಡೆದ ಕಾರ್ಯಾಚರಣೆಯಲ್ಲಿ ದಾಖಲೆ ಇಲ್ಲದ ಒಟ್ಟು 32.50 ಲಕ್ಷ ರೂ.ಗಳ ನಗದು ಹಣವನ್ನು ಜಪ್ತಿ ಮಾಡಿದೆ. ಪಂಚಾಯತ ರಾಜ್ ಇಲಾಖೆಯ ಶಶಿಧರ ಸಂಗನಾಳ ನೇತೃತ್ವದ ಎಫ್‌ಎಸ್‌ಟಿ ತಂಡ ಚೆಕ್‌ಪೋಸ್ಟ್‌ನಲ್ಲಿ ವಾಹನಗಳ ಪರಿಶೀಲನೆ ನಡೆಸುತ್ತಿರುವ ವೇಳೆಯಲ್ಲಿ ಕೆಎ-36, ಪಿ-3991 ಮಾರುತಿ ಎರ್ಟಿಗಾ ಕಾರಿನಲ್ಲಿ 32.50 ಲಕ್ಷ ರೂ.ಗಳ ನಗದು ಪತ್ತೆಯಾಗಿದೆ. ಪತ್ತೆಯಾದ ಹಣಕ್ಕೆ ದಾಖಲೆಗಳನ್ನು ಒದಗಿಸಲಾಗದ ಹಿನ್ನೆಲೆಯಲ್ಲಿ ಹಣವನ್ನು ಜಪ್ತಿ ಮಾಡಲಾಯಿತು. ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ. ಕಾರ್ಯಾಚರಣೆ ತಂಡದಲ್ಲಿ ಎ.ಎಸ್.ಐ ಸುರೇಶ ನಾಯಕ, ಪಿಸಿ ಮಂಜುನಾಥ ಕುರಿ, ಅಬಕಾರಿ ಕಾನ್ಸಟೇಬಲ್ ಶಂಕರಾನಂದ ಮುಧೋಳ ಇದ್ದರು.

ಮಂಡ್ಯ ನಗರಕ್ಕೆ ಮೂರು ದಿನ ನೀರು ವ್ಯತ್ಯಯ

ಮಂಡ್ಯ: ಮಂಡ್ಯ ನಗರಕ್ಕೆ ನೀರು ಸರಬರಾಜಾಗುವ ಪೈಪ್‌ಲೈನ್ ಕಾಮಗಾರಿಯ ಬದಲಿ ಮಾರ್ಗದ ಹೊಸ ಪೈಪ್‌ಲೈನ್ ಅಳವಡಿಸುವುದರಿಂದ 24 ರಿಂದ 26ರವರೆಗೆ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಒಳಚರಂಡಿ ನಿರ್ವಹಣಾ ಮಂಡಳಿ ಸಹಾಯಕ ಕಾರ್ಯಪಾಲಕರು ತಿಳಿಸಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆಯಡಿ ರಾಗಿಮುದ್ದನಹಳ್ಳಿಯಲ್ಲಿರುವ ಕೆಳಮಟ್ಟದ ಜಲಸಂಗ್ರಹಾಗಾರವನ್ನು ಸ್ವಚ್ಛಗೊಳಿಸುವ ಸಲು ವಾಗಿ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಶ್ರೀರಂಗಪಟ್ಟಣ ತಾಲೂಕು ಎಂ. ಶೆಟ್ಟಿಹಳ್ಳಿ ಸಮೀಪದಲ್ಲಿ ಈಗಾಗಲೇ ಅಳವಡಿಸಲಾಗಿರುವ 1016 ಮಿ.ಮಿ. ವ್ಯಾಸದ ಎಂ.ಎಸ್. ಏರು ಕೊಳವೆ ಮಾರ್ಗವನ್ನು ಬದಲೀ ಪಥದಲ್ಲಿ ಹೊಸ 1016 ಮಿ.ಮೀ. ವ್ಯಾಸದ ಎಂ.ಎಸ್. ಏರು ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸುವ ಕಾಮಗಾರಿ ಹಿನ್ನೆಲೆಯಲ್ಲಿ ಮಂಡ್ಯ ನಗರಕ್ಕೆ ಸರಬರಾಜಾಗುವ ನೀರಿನಲ್ಲಿ ವ್ಯತ್ಯಯವಾಗಲಿದೆ.

ಕಳುಹಿಸಿದ ಪಟ್ಟಿಯನ್ನೇ ಅಂತಿಮಗೊಳಿಸಿದ ಹೈಕಮಾಂಡ್: ಡಿಸಿಎಂ

ಚರ್ಚೆ ಬಳಿಕ ಅಭ್ಯರ್ಥಿ ಆಯ್ಕೆ

ಬೆಂಗಳೂರು: ಪಕ್ಷದಲ್ಲಿ ಸಾಕಷ್ಟು ಚರ್ಚೆ ನಡೆಸಿಯೇ ಉಪಚುನಾವಣೆಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ರಾಜ್ಯ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಾವು ಸೇರಿದಂತೆ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಎಲ್ಲರೊಡನೆ ಚರ್ಚಿಸಿ ಹೈಕಮಾಂಡ್‌ಗೆ ಪಟ್ಟಿ ಕಳುಹಿಸಿದೆವು. ನಾವು ಕಳುಹಿಸಿದ ಪಟ್ಟಿಯನ್ನೇ ಹೈಕಮಾಂಡ್ ಘೋಷಣೆ ಮಾಡಿದೆ ಎಂದರು. ಚುನಾವಣೆ ಎಂದ ಮೇಲೆ ಹಲವು ಜನ ಆಕಾಂಕ್ಷಿಗಳಿರುತ್ತಾರೆ. ದಾವಣಗೆರೆ ದಕ್ಷಿಣದಲ್ಲಿ ಅಲ್ಪಸಂಖ್ಯಾತರು ಟಿಕೆಟ್ ಕೇಳಿದ್ದರಲ್ಲಿ ತಪ್ಪೇನಿಲ್ಲ. ನಾವು ಎಲ್ಲಾ ಅಲ್ಪಸಂಖ್ಯಾತ ಮುಖಂಡರೊಂದಿಗೆ ಚರ್ಚಿಸಿ, ಎಲ್ಲರನ್ನು ಸಮಾಧಾನಗೊಳಿಸಿಯೇ ಶಾಮನೂರು ಶಿವಶಂಕರಪ್ಪನವರ ಮೊಮ್ಮಗ ಸಮರ್ಥ್ ರವರಿಗೆ ಟಿಕೆಟ್ ಅಂತಿಮಗೊಳಿಸಿದೆವು ಎಂದರು.

ಹಾಗೆಯೇ ಬಾಗಲಕೋಟೆಯಲ್ಲಿ ದಿ. ಹೆಚ್. ವೈ. ಮೇಟಿಯವರ ಕುಟುಂಬದಲ್ಲೇ ಟಿಕೆಟ್‌ಗೆ ಪೈಪೋಟಿ ಇತ್ತು. ನಾನು ಹಿರಿಯ ಪುತ್ರ ಮಲ್ಲಿಕಾರ್ಜುನ ಮೇಟಿಯವರಿಗೆ ಟಿಕೆಟ್ ಕೊಡಬೇಕು ಎಂದಿದ್ದೆ. ಆದರೆ ಅವರ ಕುಟುಂಬಸ್ಥರೊಡನೆ ಚರ್ಚಿಸಿದ ನಂತರ ಕಿರಿಯ ಪುತ್ರ ಉಮೇಶ್ ಮೇಟಿಯವರಿಗೆ ಟಿಕೆಟ್ ನೀಡಿದ್ದೇವೆ. ಎಲ್ಲರೂ ಸೇರಿ ಪಕ್ಷವನ್ನು ಗೆಲ್ಲಿಸಿಕೊಂಡು ಬರುತ್ತೇವೆ ಎಂದು ಹೇಳಿದ್ದಾರೆ ಎಂದರು.

ನಮ್ಮ ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆ ನಾನು ಹಾಗೂ ಮುಖ್ಯಮಂತ್ರಿಗಳು ದಾವಣಗೆರೆ ಹಾಗೂ ಬಾಗಲಕೋಟೆಗೆ ಹೋಗುತ್ತಿದ್ದೇವೆ. ಎರಡೂ ಕ್ಷೇತ್ರಗಳಲ್ಲೂ ಪಕ್ಷವನ್ನು ಗೆಲ್ಲಿಸಲು ಎಲ್ಲಾ ರೀತಿಯ ತಂತ್ರಗಳನ್ನು ರೂಪಿಸಲಾಗಿದೆ ಎಂದರು. ಬುಧವಾರ ಮಾ. 26 ರಂದು ಸಂಜೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಆ ಸಭೆಯಲ್ಲಿ ರಾಜ್ಯದ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ರವರು ಭಾಗಿಯಾಗಲಿದ್ದಾರೆ. ಚುನಾವಣೆಗೆ ಸಂಬಂಧಿಸಿದಂತೆ ಸಚಿವರು ಹಾಗೂ ಶಾಸಕರಿಗೆ ಜವಾಬ್ದಾರಿ ನೀಡುವ ಸಂಬಂಧ ಸಭೆಯಲ್ಲಿ ಚರ್ಚೆಗಳು ಆಗಲಿವೆ ಎಂದರು.



ಉಪಚುನಾವಣೆ ಕಾಂಗ್ರೆಸ್‌ಗೆ ಗೆಲುವು

ಬೆಳಗಾವಿ: ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಉಮೇಶ ಮೇಟಿ ಅವರಿಗೆ ಟಿಕೆಟ್ ನೀಡಬೇಕೆಂದು ಜನರ, ನಮ್ಮ ನಿರೀಕ್ಷೆ ಇತ್ತು. ಅದರಂತೆಯೇ ಹೈಕಮಾಂಡ್ ಅವರು ಉಮೇಶ ಮೇಟಿಗೆ ಟಿಕೆಟ್ ನೀಡಿದ್ದಾರೆಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಭಾನುವಾರ ನಗರದ ಕಾಂಗ್ರೆಸ್ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಾಗಲಕೋಟೆ ವಿಧಾನಸಭಾ ಕ್ಷೇತ್ರ ದಲ್ಲಿ ಮೇಟಿ ಕುಟುಂಬಸ್ಥರ ಮೇಲೆ ಅಲ್ಲಿನ ಜನ ಅಪಾರ ಗೌರವ ಇಟ್ಟುಕೊಂಡಿದ್ದಾರೆ. ಬಾಗಲಕೋಟೆ ಯಲ್ಲಿ ಕಳೆದ ಎರಡು ತಿಂಗಳಿಂದ ನಾವು ಚುನಾವಣೆ ಗೆಲುವಿಗಾಗಿ ಕೆಲಸ ಮಾಡುತ್ತಿದ್ದೇವೆ. ಅದ್ದರಿಂದ ಉಮೇಶ ಮೇಟಿ ಗೆಲುವಿಗೆ ಕಷ್ಟವಿಲ್ಲ ಎಂದರು.

ಡಿಜಿ ರಾಮಚಂದ್ರರಾವ್ ವಿರುದ್ಧ ತನಿಖೆ: ಪರಂ

ಬೆಂಗಳೂರು: ಡಿಜಿಪಿ ರಾಮಚಂದ್ರ ರಾವ್ ಅವರ ವಿರುದ್ಧ ಇಲಾಖಾ ತನಿಖೆ ಆಗಲಿದ್ದು, ಅದನ್ನು ಆಧರಿಸಿ ಕ್ರಮದ ಬಗ್ಗೆ ತೀರ್ಮಾನ ಆಗಲಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ರಾಮಚಂದ್ರರಾವ್ ವೈರಲ್ ವೀಡಿಯೋ ಅಸಲಿ ಅಂತ ಎಫ್‌ಎಸ್‌ಎಲ್ ವರದಿ ನೀಡಿದೆ. ಆ ಹಿನ್ನೆಲೆಯಲ್ಲಿ ರಾಮಚಂದ್ರರಾವ್ ವಿರುದ್ಧ ಇಲಾಖಾ ತನಿಖೆ ಆಗಲಿದ್ದು, ಬಳಿಕ ಸರ್ಕಾರಕ್ಕೆ ವರದಿ ಸಲ್ಲಿಕೆ ಆಗಲದಿ. ಅದನ್ನು ಆಧರಿಸಿ ಕ್ರಮದ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು' ಎಂದರು. ವೈರಲ್ ಆಗಿದ್ದ ತಮ್ಮ ವೀಡಿಯೋ ಎಐ ವೀಡಿಯೋ' ಅಂತ ರಾಮಚಂದ್ರರಾವ್ ಹೇಳಿದ್ದರು. ಸತ್ಯ ತಿಳಿಯಲಯ ಎಫ್‌ಎಸ್‌ಎಲ್‌ಗೆ ಕೊಟ್ಟಿದ್ದೆವು ಎಂದು ಸ್ಪಷ್ಟಪಡಿಸಿದರು.

ವರದಿ ಬಂದ ನಂತರ ಕ್ರಮ: ಪಾವಗಡದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಆತ್ಮಹತ್ಯೆ ಮಾಡಿ ಕೊಂಡಿರುವ ಬಗ್ಗೆ ಆ ಇಲಾಖೆಯವರು ಪರಿಶೀಲಿಸಿ ವರದಿ ನೀಡಬೇಕು. ನಂತರ ಕ್ರಮ ಕೈಗೊಳ್ಳಲಾಗುತ್ತದೆ ಪರಮೇಶ್ವರ್ ತಿಳಿಸಿದರು. ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ ನೇರವಾಗಿ ಜಂಟಿ ನಿರ್ದೇಶಕರ ಮೇಲೆ ಆರೋಪ ಮಾಡಿದ್ದಾರೆ. ಜಂಟಿ ನಿರ್ದೇಶನಕರು ಆ ರೀತಿ ಮಾಡಬೇಕಾದರೂ ಬೇರೆ ಯಾರಾದರೂ ಕಾರಣವೇ ಅಂತ ನೋಡಬೇಕಾಗುತ್ತದೆ ಎಂದರು.

ಎರಡೂ ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸ

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ನಮ್ಮವರೇ ಗೆದ್ದ ಕ್ಷೇತ್ರಗಳಾಗಿವೆ. ಅವುಗಳನ್ನು ಬಿಟ್ಟುಕೊಡಲು ಆಗದು. ಆದೊಂದೇ ಈಗ ನಮಗೆ ಮುಖ್ಯ ಎಂದು ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು. ಉಪಚುನಾವಣೆಯಲ್ಲಿ ಕುಟುಂಬಗಳಿಗೇ ಟಿಕೆಟ್ ನೀಡಿರುವ ಬಗ್ಗೆ ಕೇಳಿದಾಗ, ಕೆಲವು ಮಾನದಂಡಗಳನ್ನು ಇಟ್ಟುಕೊಂಡು, ಇಂದಿನ ರಾಜಕೀಯ ಸನ್ನಿವೇಶವನ್ನು ನೋಡಿ ತೀರ್ಮಾನ ಮಾಡಲಾಗುತ್ತದೆ. ನಮ್ಮ ಪಕ್ಷದವರೇ ಈ ಎರಡೂ ಕ್ಷೇತ್ರಗಳನ್ನು ಗೆದ್ದಿದ್ದು, ಅದನ್ನು ವಾಪಸ್ ಗೆಲ್ಲಿಸಿಕೊಳ್ಳಬೇಕಷ್ಟೇ. ಬಿಟ್ಟುಕೊಡಲು ಆಗುವುದಿಲ್ಲ, ಅದು ನಮಗೆ ಮುಖ್ಯ ಅಷ್ಟೇ ಎಂದು ಹೇಳಿದರು. ಉಪಚುನಾವಣೆಯಲ್ಲಿ ಇಂತಹ ಸಮಸ್ಯೆ ಬಹಳಷ್ಟು ಬಂದಿವೆ. ನಾನು ಅಧ್ಯಕ್ಷನಾಗಿದ್ದಾಗಲೂ ಇಂತಹ ಸಮಸ್ಯೆ ಬಗೆಹರಿಸಿದ್ದೇವೆ. ಅಂತಿಮವಾಗಿ ಯಾರಿಗಾದರೂ ಟಿಕೆಟ್ ಕೊಡಲೇಬೇಕಲ್ಲವೇ ಎಂದು ಮರುಪ್ರಶ್ನಿಸಿದ ಅವರು, ಸಾಧಕ-ಬಾಧಕಗಳನ್ನು ನೋಡಿ ಹೈಕಮಾಂಡ್ ತೀರ್ಮಾನ ಮಾಡಿರುತ್ತದೆ ಎಂದು ಸ್ಪಷ್ಟಪಡಿಸಿದರು.

ಮಂಗಳೂರಿಗೆ ಬಂತು ಎಲ್‌ಪಿಜಿ ಹಡಗು!



ಮಂಗಳೂರು: ಮಧ್ಯಪ್ರಾಚ್ಯ ದೇಶಗಳ ಯುದ್ಧದ ನಡುವೆ ರಷ್ಯಾದಿಂದ ಚೀನಾಕ್ಕೆ ಹೊರಟಿದ್ದ ಅಕ್ವಾ ಟೈಟಾನ್ ಹೆಸರಿನ ಕಚ್ಚಾ ತೈಲ ಹೊತ್ತ ಬೃಹತ್ ಹಡಗು ನವ ಮಂಗಳೂರು ಬಂದರಿಗೆ ಆಗಮಿಸಿದ್ದು, ತೈಲ ಇಳಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಅದೇ ರೀತಿ ಅಮೆರಿಕದಿಂದ ಎಲ್‌ಪಿಜಿ ಕಾರ್ಗೋ ಹಡಗು ಕೂಡ ಭಾನುವಾರ ನವಮಂಗಳೂರು ಬಂದರು ತಲುಪಿದೆ. ಅಮೆರಿಕದ ಟೆಕ್ಸಾಸ್‌ನಿಂದ ಮಂಗಳೂರಿಗೆ ಆಗಮಿಸಿರುವ 'ಪಿಕ್ಸಿಸ್ ಪಯನೀರ್' ಹೆಸರಿನ ಎಲ್‌ಪಿಜಿ ಕಾರ್ಗೋ ಹಡಗು 16,714 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತು ಬಂದಿದೆ. ವಿದೇಶದಿಂದ ಕರ್ನಾಟಕಕ್ಕೆ ಆಗಮಿಸಿದ ಮೊದಲ ಎಲ್‌ಪಿಜಿ ಹಡಗು ಇದಾಗಿದೆ. ಈ ಹಡಗು ಮಾ.14 ರಂದು ಅಮೆರಿಕದಿಂದ ಹೊರಟಿತ್ತು.

ಅದಾಲತ್: 55.85 ಲಕ್ಷ ಪ್ರಕರಣ ಇತ್ಯರ್ಥ

ಬೆಂಗಳೂರು: ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 55.85 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸುವ ಮೂಲಕ ಜನರಿಗೆ ತ್ವರಿತ ನ್ಯಾಯ ಒದಗಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಒಟ್ಟು 3,248 ಕೋಟಿ ರೂ.ಗಳ ಪರಿಹಾರದ ಮೊತ್ತವನ್ನು ಕಕ್ಷಿದಾರರಿಗೆ ಕೊಡಿಸಲಾಗಿದೆ.

ಹೈಕೋರ್ಟ್‌ನ ಎಕ್ಸಿಕ್ಯೂಟಿವ್ ಚೇರ್‌ಮನ್ ಮೀಟಿಂಗ್ ಹಾಲ್‌ನಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಹೈಕೋರ್ಟ್‌ನ ನ್ಯಾಯಮೂರ್ತಿ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷೆ ಅನು ಸಿವರಾಮನ್, ಸರ್ವರಿಗೂ ನ್ಯಾಯ ಎಂಬ ಧ್ಯೇಯೋದ್ದೇಶದೊಂದಿಗೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಆಯೋಜಿಸಿದ್ದ ವರ್ಷದ ಮೊದಲನೇ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಅಭೂತಪೂರ್ವ ಯಶಸ್ಸು ಲಭಿಸಿದೆ ಎಂದರು.

ಈ ಲೋಕ ಅದಾಲತ್‌ನಲ್ಲಿ ಉಚ್ಚ ನ್ಯಾಯಲಯದ ಪೀಠಗಳಲ್ಲಿದ್ದ 956 ಪ್ರಕರಣಗಳು, ಜಿಲ್ಲಾ ನ್ಯಾಯಾಲಯದಲ್ಲಿ ಬಾಕಿಯಿದ್ದ 2,60,204 ಪ್ರಕರಣಗಳು ಇತ್ಯರ್ಥಗೊಂಡಿವೆ.

ನಾಳೆ ಒಳಮೀಸಲಾತಿ ವಿರೋಧಿಸಿ ಪ್ರತಿಭಟನೆ

ಬೆಂಗಳೂರು: ಸರ್ಕಾರದ ಒಳಮೀಸಲಾತಿ ನೀತಿ, ಆಯೋಗಗಳ ವರದಿ ಹಾಗೂ ರೋಸ್ಟರ್ ವ್ಯವಸ್ಥೆಗಳನ್ನು ವಿರೋಧಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ವತಿಯಿಂದ ಮಾ.24 ರಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ತಿಳಿಸಿದರು.

ವಸಂತನಗರದ ಜಸ್ಮಾಭವನದಲ್ಲಿ ಭಾನುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾ. 24ರಂದು ನಡೆಯಲಿರುವ ಈ ಸಮಾವೇಶ ರಾಜ್ಯ ರಾಜಕೀಯ ಹಾಗೂ ಸಾಮಾಜಿಕ ವಲಯದಲ್ಲಿ ಗಮನ ಸೆಳೆಯುವ ಸಾಧ್ಯತೆ ಇದ್ದು, ರಾಜ್ಯದ ವಿವಿಧ ಭಾಗಗಳಿಂದ 1 ಲಕ್ಷ ಜನ ಸೇರುವ ಸಾಧ್ಯತೆ ಇದೆ ಎಂದರು. ಭೋವಿ, ಬಂಜಾರ, ಕೊರಮ, ಕೊರಚ, ಸೂಕ್ಷ್ಮ, ಅತಿಸೂಕ್ಷ್ಮ ಹಾಗೂ ಅಲೆಮಾರಿಗಳ 59 ಜಾತಿಗಳಿಗೆ ಅನ್ಯಾಯವಾಗುತ್ತಿದ್ದು, ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಅವೈಜ್ಞಾನಿಕ. ಆಯೋಗವೇ ಸಲ್ಲಿಸಿರುವ ವರದಿಯಲ್ಲಿಯೇ ಈ ಸಮುದಾಯಗಳು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ತೀವ್ರ ಹಿಂದುಳಿದಿವೆ ಎಂದು 26 ಕೋಷ್ಟಕಗಳಲ್ಲಿ 19ರಲ್ಲಿ ಸ್ಪಷ್ಟಪಡಿಸಲಾಗಿದೆ. ಆದರೂ, ಸರ್ಕಾರವು ಒಳಮೀಸಲಾತಿ ರೂಪಿಸುವಾಗ ಈ ಅಂಶಗಳನ್ನು ಪರಿಗಣಿಸಿಲ್ಲ ಎಂದರು.

ಮಾ. 27ರಂದು ಒಳಮೀಸಲಾತಿ ಕುರಿತ ವಿಶೇಷ ಸಚಿವ ಸಂಪುಟ ಸಭೆ ನಡೆಯಲಿರುವ ಹಿನ್ನೆಲೆಯಲ್ಲಿ, ಸರ್ಕಾರವು ಈ ಸಭೆಯಲ್ಲಿ ಸಮಗ್ರ ಚರ್ಚೆ ನಡೆಸಿ ನ್ಯಾಯಸಮ್ಮತ ನಿರ್ಧಾರ ಕೈಗೊಳ್ಳಬೇಕು. ಸದ್ಯ ಸರ್ಕಾರ ಭರ್ತಿ ಮಾಡಲು ಉದ್ದೇಶಿಸಿರುವ 56 ಸಾವಿರ ಹುದ್ದೆಗಳನ್ನು ಯಾವುದೇ ಒಳಮೀಸಲಾತಿ ಜಾರಿಗೊಳಿಸದೆ ಭರ್ತಿ ಮಾಡಬಾರದು. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸಮಾನ ಅವಕಾಶಗಳನ್ನು ಒದಗಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲು ಈ ಪ್ರತಿಭಟನಾ ಸಮಾವೇಶವನ್ನು ಆಯೋಜಿಸಲಾಗಿದೆ ಎಂದರು.

ಮೀಸಲಾತಿ ಒಕ್ಕೂಟದ ಅಧ್ಯಕ್ಷ ಡಾ. ಎಚ್. ರವಿ ಮಾಕಳಿ, ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಕಾರ್ಯಾಧ್ಯಕ್ಷ ರಾಘವೇಂದ್ರ, ನಾಯಕ್, ಕಾರ್ಯಾಧ್ಯಕ್ಷ ಅನಂತ ನಾಯಕ್, ಉಪಾಧ್ಯಕ್ಷ ಆದರ್ಶ ಯಲ್ಲಪ್ಪ, ರವಿ ಪೂಜಾರ ಇದ್ದರು.



ಅವೈಜ್ಞಾನಿಕ ರೋಸ್ಟರ್

ಸರ್ಕಾರ ರೂಪಿಸಿರುವ ಪ್ರವರ್ಗ ಅ, ಆ, ಇ ವಿಭಾಗೀಕರಣವೂ ಜನಸಂಖ್ಯಾ ಅನುಪಾತಕ್ಕೆ ಅನುಗುಣವಾಗಿಲ್ಲ. ವಿಶೇಷವಾಗಿ ರೋಸ್ಟರ್ ವ್ಯವಸ್ಥೆ ಅವೈಜ್ಞಾನಿಕವಾಗಿದೆ. ಹಿಂದಿನ ಸರ್ಕಾರದಲ್ಲಿ 560 ಹುದ್ದೆಗಳ ನೇಮಕಾತಿಯಲ್ಲಿ ಒಂದು ಪ್ರವರ್ಗಕ್ಕೆ ಬಹುಪಾಲು ಹುದ್ದೆಗಳು ನೀಡಲಾಗಿದ್ದು, ಪ್ರವರ್ಗ ಇಗೆ ಅತಿ ಕಡಿಮೆ ಅವಕಾಶ ದೊರೆತಿದೆ. ಹೊಸ ರೋಸ್ಟರ್‌ನಲ್ಲಿ ಪ್ರವರ್ಗ ಇಗೆ 15ನೇ ಸ್ಥಾನ ನೀಡಿರುವುದರಿಂದ, ಈ ಸಮುದಾಯಗಳಿಗೆ ಅವಕಾಶ ಸಿಗುವಷ್ಟರಲ್ಲಿ ತಲೆಮಾರುಗಳು ಕಳೆದು ಹೋಗುವ ಪರಿಸ್ಥಿತಿ ಉಂಟಾಗುತ್ತದೆ. ಇದು ಸಮುದಾಯಗಳನ್ನು ಉದ್ದೇಶಪೂರ್ವಕವಾಗಿ ಹಿಂದುಳಿಸುವ ಪ್ರಯತ್ನ ಎಂದರು.

ಸರ್ಕಾರಿ ಉದ್ಯೋಗಗಳ ನೇಮಕಾತಿ ಚರ್ಚೆ | ನೇಮಕಾತಿ ಕ್ಯಾಲೆಂಡರ್ ರಚನೆಗೆ ಸರ್ಕಾರ ಸೂಚನೆ

ಮುಂದಿನ 5 ವರ್ಷಗಳಲ್ಲಿ 86,398 ನೌಕರರ ನಿವೃತ್ತಿ

ವೀರಣ್ಣ ಬಳಿಗಾರ

ದಿಗಂತ ವಿಶೇಷ

ಬೆಂಗಳೂರು: ಸರ್ಕಾರಿ ಉದ್ಯೋಗಗಳ ನೇಮಕಾತಿಯ ಕುರಿತು ರಾಜ್ಯದಲ್ಲಿ ಬಹು ಚರ್ಚೆ ನಡೆಯುತ್ತಿದ್ದು, ಲಕ್ಷಾಂತರ ಉದ್ಯೋಗಗಳು ಖಾಲಿ ಇದ್ದರೂ ಕೂಡಾ ಒಂದಲ್ಲ ಒಂದು ಕಾರಣಕ್ಕೆ ನೇಮಕಾತಿ ಮುಂದೂಡಲಾಗುತ್ತಿದೆ. ಇಗಾಗಲೇ ಸುಮಾರು 2.84 ಲಕ್ಷ ಉದ್ಯೋಗ ಖಾಲಿ ಇದ್ದು, ಇದರ ಜತೆಗೆ ಮುಂದಿನ 5 ವರ್ಷಗಳಲ್ಲಿ ರಾಜ್ಯದಲ್ಲಿ 86,398 ನೌಕರರು ನಿವೃತ್ತರಾಗಲಿದ್ದಾರೆ.

ಇತ್ತೀಚೆಗೆ ಧಾರವಾಡದಲ್ಲಿ ವಿದ್ಯಾರ್ಥಿಗಳ ಹೋರಾಟದಿಂದ ಉದ್ಯೋಗ ನೇಮಕಾತಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಮತ್ತು ಕೆಪಿಎಸ್‌ಸಿಯ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸಬೇಕು. ಮುಂದಿನ 5 ವರ್ಷಗಳ ನೇಮಕಾತಿಯ ಕ್ಯಾಲೆಂಡರ್ ರಚಿಸಬೇಕೆಂದು ಸರ್ಕಾರ ಸೂಚನೆ ನೀಡಿದೆ. ಈ ಭಾರಿ ಸಂಖ್ಯೆಯ ನಿವೃತ್ತಿಯು ಉದ್ಯೋಗಾಂಕ್ಷಿಗಳಿಗೆ ಶುಕ್ರದಸೆ ಎನಿಸಿದರೂ ಕೂಡಾ ಇಷ್ಟು ದೊಡ್ಡ ಪ್ರಮಾಣದ ನಿವೃತ್ತಿ ಸರ್ಕಾರಕ್ಕೆ ಹೊರೆಯಾಗುವುದಂತು ನಿಜ.

2023 ರಿಂದ 2025ರ ನಡುವೆ ರಾಜ್ಯ ಸರ್ಕಾರ 8,157 ಹುದ್ದೆಗಳನ್ನು ಯಶಸ್ವಿಯಾಗಿ ಭರ್ತಿ ಮಾಡಿದೆ. ಇನ್ನೂ 3,081 ಹುದ್ದೆಗಳಿಗೆ ನೇಮಕಾತಿ ಪ್ರಗತಿಯಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದು, ಪ್ರಸ್ತುತ ಖಾಲಿ ಇರುವ ಉದ್ಯೋಗಗಳನ್ನು ಸರ್ಕಾರ ದೊಡ್ಡ ಪ್ರಮಾಣದಲ್ಲಿ ನೇಮಕಾತಿ ಮಾಡಿಕೊಳ್ಳದಿದ್ದರೆ ಈ ಸಂಖ್ಯೆ ಮತ್ತಷ್ಟು ಹೆಚ್ಚಾಗಲಿದೆ. ಇನ್ನೂ ದೊಡ್ಡ ಪ್ರಮಾಣದ ನಿವೃತ್ತಿಯಿಂದ ಅವರಿಗೆ ನೀಡಬೇಕಾದ ಪಿಂಚಣಿ ಹಣವನ್ನು ಹೊಂದಿಸುವುದು ಸರ್ಕಾರಕ್ಕೆ ಸವಾಲಾಗಿದೆ.

ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿಯನ್ನು ಕಲ್ಪಿಸುವ ಸಂಬಂಧ 9 ತಿಂಗಳ ಕಾಲ ನೇಮಕಾತಿ ಸ್ಥಗಿತಗೊಂಡಿತ್ತು, ನೇಮಕಾತಿ ವಿಳಂಬದ ಬಗ್ಗೆ ಉದ್ಯೋಗಾಕಾಂಕ್ಷಿಗಳಿಂದ ಭಾರಿ ಪ್ರತಿಭಟನೆಗಳು ನಡೆದಿದ್ದರಿಂದ ರಾಜ್ಯ ಸರ್ಕಾರ ಫೆಬ್ರವರಿ 27 ರಂದು ನೇರ ನೇಮಕಾತಿಯ ಮೂಲಕ 56,432 ಹುದ್ದೆಗಳನ್ನು ಭರ್ತಿಮಾಡಲು ನಿರ್ಧರಿಸಿತು. ಎಸ್‌ಸಿಗೆ ಶೇ. 15, ಎಸ್‌ಟಿಗೆ ಶೇ. 3 ಮತ್ತು ಒಬಿಸಿಗೆ ಶೇ. 32 ರಷ್ಟು ಮೀಸಲಾತಿ ಅನ್ವಯ ಶೇ.50 ರಷ್ಟು ಮೀಸಲಾತಿಯ ಆಧಾರದ ಮೇಲೆ ಭರ್ತಿಗೆ ಘೋಷಿಸಿದ್ದರೂ ಹಲವು ಸಮುದಾಯಗಳು ಆಕ್ಷೇಪ ವ್ಯಕ್ತಪಡಿಸಿದ್ದು, ಮಾ.27ರಂದು ನಡೆಯುವ ಸಂಪುಟ ಸಭೆಯ ಬಳಿಕ ಒಳ ಮೀಸಲಾತಿ ಬಗ್ಗೆ ಸರ್ಕಾರ ನಿರ್ಧಾರದ ನಂತರ ನೇಮಕಾತಿಯಲ್ಲಿ ಮೀಸಲಾತಿ ಕುರಿತು ಸ್ಪಷ್ಟತೆ ಸಿಗುವ ಸಾಧ್ಯತೆ ಇದೆ.

ಸರ್ಕಾರಕ್ಕೆ ಆರ್ಥಿಕ ಹೊರೆ

2026-27ನೇ ಆರ್ಥಿಕ ವರ್ಷದಲ್ಲಿ, ಸರ್ಕಾರವು ಸಂಬಳ ಮತ್ತು ಪಿಂಚಣಿಗಳಿಗಾಗಿ 1.32 ಲಕ್ಷ ಕೋಟಿ ರೂ.ಗಳನ್ನು ಖರ್ಚು ಮಾಡುವ ನಿರೀಕ್ಷೆಯಿದೆ. ಇದು 2023-24ರಲ್ಲಿ ಸಂಬಳ ಮತ್ತು ಪಿಂಚಣಿಗಳನ್ನು ಪಾವತಿಸಲು ಸರ್ಕಾರ ಖರ್ಚು ಮಾಡಿದ 96,166 ಕೋಟಿ ರೂ.ಗಳಿಗಿಂತ ಶೇ.38ರಷ್ಟು ಹೆಚ್ಚಳವಾಗಲಿದೆ. 2029-30ರ ವೇಳೆಗೆ ಸಂಬಳ ಮತ್ತು ಪಿಂಚಣಿಗಳ ಮೇಲಿನ ಖರ್ಚು 1.65 ಲಕ್ಷ ಕೋಟಿ ರೂ.ಗಳಿಗೆ ಏರುವ ನಿರೀಕ್ಷೆಯಿದೆ.

ಖಾಲಿ ಇರುವ ಉದ್ಯೋಗಗಳು

ಗ್ರೂಪ್ ಎ	ಗ್ರೂಪ್ ಬಿ	ಗ್ರೂಪ್ ಸಿ	ಗ್ರೂಪ್ ಡಿ	ಒಟ್ಟು
16,171	1,72,190	1,72,190	79,340	2,84,881

ನಿವೃತ್ತಿಯಾಗುವ ನೌಕರರ ವಿವರ

2026	16,513
2027	16,800
2028	17,726
2029	18,100
2030	17,259

ಕಾಶಿಗೆ ಹೊರಟಿದ್ದ ಪ್ರಯಾಣಿಕರ ವಾಹನಕ್ಕೆ ಲಾರಿ ಡಿಕ್ಕಿ

ಸ್ಥಳದಲ್ಲೇ ಮೂವರ ಸಾವು

ದೇವನಹಳ್ಳಿ: ಕಾಶಿಯಾತ್ರೆಗೆ ಹೊರಟಿದ್ದ ಸ್ತ್ರೀಶಕ್ತಿ ಸಂಘದ ಕಾರ್ಯಕರ್ತರಿದ್ದ ವಾಹನಕ್ಕೆ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲೇ ಮೃತಪಟ್ಟು, ಕೆಲವರಿಗೆ ಗಾಯವಾಗಿರುವ ಘಟನೆ ಇಲ್ಲಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದ ರಾಣಿ ಕ್ರಾಸ್ ಬಳಿ ಸಂಭವಿಸಿದೆ.

ತಿಪಟೂರು ತಾಲೂಕಿನ ಜಯಮ್ಮ (65), ಯಶೋಧಮ್ಮ (60), ಗಂಗಾ (40) ಎಂಬುವರು ಮೃತಪಟ್ಟವರು. ಇನ್ನುಳಿದವರಿಗೆ ಸಣ್ಣಪುಟ್ಟ ಗಾಯವಾಗಿದ್ದು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ತಿಪಟೂರು ತಾಲೂಕಿನ ಸ್ತ್ರೀಶಕ್ತಿ ಸಂಘಟನೆಯಿಂದ 15 ದಿನಗಳ ಕಾಲ ಕಾಶಿ ಸೇರಿದಂತೆ ವಿವಿಧ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡಲು ಸಿದ್ಧತೆ ನಡೆಸಿದ್ದರು. ಸ್ತ್ರೀಶಕ್ತಿ ಸಂಘಟನೆಯ ಕಾರ್ಯಕರ್ತರಲ್ಲಿ 12 ಜನರ ತಂಡ ಕಾಶಿ ಯಾತ್ರೆಗೆ ಹೊರಟ್ಟಿದ್ದರು. ಭಾನುವಾರ ಬೆಳಗ್ಗೆ 6 ಗಂಟೆ ಸಮಯದಲ್ಲಿ ತಿಪಟೂರಿನಿಂದ ದೇವನಹಳ್ಳಿ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬರುವಾಗ, ಸರ್ವೀಸ್ ರಸ್ತೆಯಲ್ಲಿ ತಿರುವು ಪಡೆಯುವ ವೇಳೆ, ಎಡಬದಿಯಿಂದ ಬಂದ ಲಾರಿ ಡಿಕ್ಕಿ ಹೊಡೆದಿದೆ. ಇದರ ಪರಿಣಾಮ, ಟಿಟಿ ವಾಹನ ಸಂಪೂರ್ಣವಾಗಿ ಜಖಂಗೊಂಡಿದೆ.



ವಾಹನದಲ್ಲಿದ್ದ ಮೂವರು ಸ್ತ್ರೀ ಶಕ್ತಿ ಸಂಘಟನೆಯ ಕಾರ್ಯಕರ್ತರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಉಳಿದ ಗಾಯಾಳುಗಳನ್ನು ದೇವನಹಳ್ಳಿಯ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಅಪಘಾತದ ನಂತರ ಲಾರಿಯನ್ನು ಬಿಟ್ಟು, ಚಾಲಕ ಪರಾರಿಯಾಗಿದ್ದಾನೆ. ಮೃತದೇಹವನ್ನು ತಿಪಟೂರಿಗೆ ರವಾನೆ ಮಾಡಲಾಗಿದೆ. ದೇವನಹಳ್ಳಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಿರುಸುದ್ದಿ

ಕರ್ರನ್ ಬದಲಿಗೆ ಶಣಕ

ಮುಂಬೈ: ಸಂಜು ಸ್ಯಾಮ್ಸನ್ ಬದಲಿಗೆ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಟ್ರೇಡ್ ಆಗಿದ್ದ ಇಂಗ್ಲೆಂಡ್ ಆಲ್‌ರೌಂಡರ್ ಸ್ಯಾಮ್ ಕರ್ರನ್ ಬದಲಿಗೆ ದಾಸುನ್ ಶಣಕ ಅವರನ್ನು ರಾಜಸ್ಥಾನ ರಾಯಲ್ಸ್ ಆಯ್ಕೆ ಮಾಡಿಕೊಂಡಿದೆ. ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಕ್ಕೆ ಆಯ್ಕೆಯಾಗಿದ್ದ ಶ್ರೀಲಂಕಾ ಬ್ಯಾಟರ್ ದಾಸುನ್ ಶಣಕ ಭಾರತಕ್ಕೆ ತಿರುಗಿದ್ದಾರೆ. ಐಪಿಎಲ್ ಹರಾಜಿಗೂ ಮುನ್ನ ಸಂಜು ಸ್ಯಾಮ್ಸನ್ ಚೆನ್ನೈಗೆ ಟ್ರೇಡ್ ಆಗಿದ್ದರು. ಬದಲಿಗೆ ಚೆನ್ನೈ ತಂಡದಿಂದ ರವೀಂದ್ರ ಜಡೇಜಾ ಮತ್ತು ಸ್ಯಾಮ್ ಕರ್ರನ್ ಅವರನ್ನು ಆಯ್ಕೆ ಮಾಡಲಾಗಿತ್ತು. ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ತಂಡದ ಭಾಗವಾಗಿದ್ದ ಸ್ಯಾಮ್ ಕರ್ರನ್ ಗಾಯದಿಂದ ಬಳಲುತ್ತಿದ್ದರು. ಪರಿಣಾಮ ಐಪಿಎಲ್ ಪಂದ್ಯಾವಳಿಯಿಂದಲೇ ಹೊರಬಿದ್ದಿದ್ದಾರೆ. ಅವರ ಬದಲಿಗೆ ದಾಸುನ್ ಶಣಕ ಅವರನ್ನು ಫ್ರಾಂಚೈಸಿ ಸಹಿ ಮಾಡಿಕೊಂಡಿದೆ. ಈ ಬಗ್ಗೆ ಅಧಿಕೃತವಾಗಿ ತಿಳಿಸಲಾಗಿದೆ.

ಈಜು: ಸಜನ್ ಪ್ರಕಾಶ್‌ಗೆ ಚಿನ್ನ



ಹೊಸದಿಲ್ಲಿ: ಭಾರತದ ಈಜುಗಾರ ಸಜನ್ ಪ್ರಕಾಶ್ ಸಿಂಗಾಪುರ್ ನ್ಯಾಷನಲ್ ಏಜ್ ಗ್ರೂಪ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಶಕ್ತಿಶಾಲಿ ಪ್ರದರ್ಶನ ನೀಡಿ ಪುರುಷರ 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದರು. ಫೈನಲ್‌ನಲ್ಲಿ ಸಜನ ಪ್ರಕಾಶ್ 1:57.09 ಸೆಕೆಂಡ್ ಸಮಯ ದಾಖಲಿಸಿ ಎರಡನೇ ಸ್ಥಾನ ಪಡೆದರು. ಚೈನೀಸ್ ತೈಪೆಯ ಕ್ವಾನ್ ಹಂಗ್ ವಾಂಗ್ 1:56.18 ಸಮಯದೊಂದಿಗೆ ಚಿನ್ನದ ಪದಕ ಗೆದ್ದರು. ಇದರೊಂದಿಗೆ ಸಜನ ಪ್ರಕಾಶ್ ಕಾಮನ್‌ವೆಲ್ತ್ ಕ್ರೀಡಾಕೂಟ ಅರ್ಹತಾ ಮಾನದಂಡವನ್ನೂ ತಲುಪಿದರು. ಈ ಸ್ಪರ್ಧೆಗೆ ನಿಗದಿಪಡಿಸಿದ್ದ 1:57.12 ಸಮಯಕ್ಕಿಂತ ಕಡಿಮೆ ಅವಧಿಯಲ್ಲಿ ಅವರು ಈ ಸಾಧನೆ ಮಾಡಿದ್ದಾರೆ. ಎರಡು ಬಾರಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿರುವ ಸಜನ್ ಪ್ರಕಾಶ್, ಟೋಕಿಯೊ 2020 ಒಲಿಂಪಿಕ್‌ಗೆ 'ಎ' ಮಾನದಂಡದ ಮೂಲಕ ಅರ್ಹತೆ ಪಡೆದ ಮೊದಲ ಭಾರತೀಯ ಈಜುಗಾರರಾಗಿದ್ದಾರೆ. ಅವರು ದಕ್ಷಿಣ ಏಷ್ಯನ್ ಕ್ರೀಡಾಕೂಟಗಳಲ್ಲಿ ಹಲವು ಬಾರಿ ಪದಕ ವಿಜೇತರಾಗಿದ್ದು, 200 ಮೀಟರ್ ಬಟರ್‌ಫ್ಲೈ ವಿಭಾಗದಲ್ಲಿ 1:56.38 ರಾಷ್ಟ್ರೀಯ ದಾಖಲೆಯನ್ನು ತಮ್ಮ ಹೆಸರಿನಲ್ಲಿ ಹೊಂದಿದ್ದಾರೆ.

ದೇಶಿ ಕ್ರಿಕೆಟಿಗರ ಮೇಲೆ ಜನರ ಚಿತ್ತ | ಕಿರಿಯ ಆಟಗಾರರ ಮೇಲೆ ನಿರೀಕ್ಷೆ | ಎಲ್ಲಾ ತಂಡಗಳ ಕಠಿಣ ಅಭ್ಯಾಸ

ಐಪಿಎಲ್‌ನಲ್ಲಿ ಯುವಕರದ್ದೇ ದರ್ಬಾರ್!





ಮುಂಬೈ: ಕ್ರಿಕೆಟ್ ಹಬ್ಬ, ಜಗತ್ತಿನ ಅತಿದೊಡ್ಡ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಒಂದಾದ, ಅತಿ ಶ್ರೀಮಂತ ಫ್ರಾಂಚೈಸಿ ಕ್ರಿಕೆಟ್ ಕೂಟ ಐಪಿಎಲ್‌ಗೆ ಭರ್ಜರಿ ಸಿದ್ಧತೆಗಳು ನಡೆಯುತ್ತಿವೆ. ಶನಿವಾರದಂದು ಬೆಂಗಳೂರಿನ ಚಿನ್ನಸ್ವಾಮಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡದ ನಡುವೆ ಉದ್ಘಾಟನಾ ಪಂದ್ಯ ನಡೆಯಲಿದೆ. ಪಂದ್ಯಾವಳಿಗೆ ದಿನಗಣನೆ ಶುರುವಾದಂತೆ ಭಾರತಾದ್ಯಂತ ಐಪಿಎಲ್ ಭರಾಟೆ ಪಸರಿಸಿದೆ. ಈ ಮಧ್ಯೆ, ಇದೇ ಬಾರಿ ಆಯ್ಕೆಯಾಗಿರುವ ಮತ್ತು ಕಳೆದ ಸೀಸನ್‌ಗಳಿಂದಲೂ ಅವಕಾಶಕ್ಕಾಗಿ ಕಾಯುತ್ತಿರುವ ಯುವ ಕ್ರಿಕೆಟಿಗರು ಗಮನ ಸೆಳೆಯಲು ಸಿದ್ಧರಾಗಿದ್ದಾರೆ. ಎಲ್ಲಾ ತಂಡಗಳು ತಮ್ಮ ತಮ್ಮ ಅಭ್ಯಾಸದಲ್ಲಿ ನಿರತರಾಗಿದ್ದಾರೆ. ಮೈದಾನಗಳು ಐಪಿಎಲ್ ಪಂದ್ಯಗಳಿಗಾಗಿ ಸಜ್ಜುಗೊಳ್ಳುತ್ತಿವೆ. ಇದೇ ವೇಳೆ ತಂಡಗಳು, ಕೋಚ್‌ಗಳು ಮತ್ತು ವಿವಿಧ ಸಂಬಂಧಪಟ್ಟ ಜನರು ಲೆಕ್ಕಾಚಾರಗಳನ್ನು ಮಾಡುತ್ತಿದ್ದಾರೆ. ಗಾಯದ ನಿವಾರಣೆ, ಬದಲಿ ಆಟಗಾರರ ಆಯ್ಕೆ, ಹೊಸ ಸ್ಟ್ರಾಟರ್ಜಿಗಳನ್ನು ಮಾಡತೊಡಗಿದ್ದಾರೆ.

ಮೊದಲಿನಿಂದಲೂ ಐಪಿಎಲ್‌ನಲ್ಲಿ ವಿದೇಶಿ ಆಟಗಾರರು ಭರ್ಜರಿ ಪ್ರದರ್ಶನ ನೀಡಿ ಗಮನ ಸೆಳೆದಿದ್ದರು. ಮೊದಲ ಶತಕ, ಮೊದಲ ಹ್ಯಾಟ್ರಿಕ್ ಮತ್ತು ಮೊದಲ ಇನ್ನೂರು ದಾಟುವಲ್ಲಿ ವಿದೇಶಿ ಆಟಗಾರರು ಮುಂದಿದ್ದರು. ದೇಶಿ ಕ್ರಿಕೆಟಿಗರಿಗೆ ಅವಕಾಶ ಸಿಕ್ಕಂತೆ ಅವರೂ ಕೂಡ ದೊಡ್ಡ ಮಟ್ಟದಲ್ಲಿ ಹೆಸರು ಮಾಡಿಲ್ಲ, ಮಾಡಿದ್ದರೂ ವಿದೇಶಿ ಆಟಗಾರರಷ್ಟು ಗಮನ ಸೆಳೆಯಲಾಗುವುದಿಲ್ಲ. ಆದರೆ ಇತ್ತೀಚಿನ ಐಪಿಎಲ್‌ನಲ್ಲಿ ದೇಶಿ ಯುವಕರದ್ದೇ ದರ್ಬಾರ್ ನಡೆದಿದೆ. ಕಳೆದ ಸೀಸನ್‌ಗಳಲ್ಲಿ ದೇಶಿ ಕ್ರಿಕೆಟಿಗರೆ ಹೆಚ್ಚು ಗಮನ ಸೆಳೆದಿದ್ದಾರೆ. ಈ ಬಾರಿಯೂ ಕೂಡ ಪ್ರಮುಖ ಆಟಗಾರರು ಗಮನ ಸೆಳೆಯಲು ಸಿದ್ಧರಾಗಿದ್ದಾರೆ.

ಹರಾಜಿನಲ್ಲೇ ಕಮಾಲ್

ರಣಜಿ, ವಿಜಯ್ ಹಜಾರೆ ಸೇರಿದಂತೆ ಪ್ರಮುಖ ದೇಶಿ ಕ್ರಿಕೆಟ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಭಾರತದ ದೇಶಿ ಕ್ರಿಕೆಟಿಗರಿಗೆ ಈ ಬಾರಿ ಐಪಿಎಲ್‌ನಲ್ಲಿ ಅವಕಾಶ ನೀಡಲಾಗಿದೆ. ಡಿಸೆಂಬರ್‌ನಲ್ಲಿ ನಡೆದಿದ್ದ ಹರಾಜಿನಲ್ಲಿ ದೇಶಿ ಕ್ರಿಕೆಟಿಗರದ್ದೇ ಹವಾ ಎದ್ದಿತ್ತು. ದೊಡ್ಡ ದೊಡ್ಡ ಪರ್ಸ್‌ಗಳೊಂದಿಗೆ ಹರಾಜಿಗಿಳಿದಿದ್ದ ಚೆನ್ನೈ ಅಂತಹ ಫ್ರಾಂಚೈಸಿಗಳು ದೇಶಿ ಆಟಗಾರರ ಮೇಲೆ ಹೆಚ್ಚಿನ ಖರ್ಚು ಮಾಡಿತ್ತು. ಪ್ರಶಾಂತ್ ವೀರ್, ಕಾರ್ತಿಕ್ ಶರ್ಮಾ ಅಂತಹ ದೇಶಿ ಆಟಗಾರರು ದೊಡ್ಡ ಮೊತ್ತಕ್ಕೆ ಬಿಕರಿಯಾದರೆ, ಜಿಮ್ಮಿ ಸ್ಮಿತ, ಡೇವಿಡ್ ಕಾನ್ವೇ ಅಂತಹ ಪ್ರಮುಖ ಆಟಗಾರರು ಅನ್ ಸೋಲ್ಡ್ ಆಗಿ ಉಳಿದಿರು. ಇನ್ನುಳಿದಂತೆ ರಣಜಿ ಪಂದ್ಯಾವಳಿಯ ಸರಣಿ ಶ್ರೇಷ್ಠ ಆಟಗಾರ ಆಕಿಬ್ ನಬಿ ಕೂಡ ಹೆಚ್ಚಿನ ಮೊತ್ತ ಪಡೆದಿದ್ದರು.

ವಿದೇಶಿಯರು ಅಲಭ್ಯ, ಅವಕಾಶ ಖಚಿತ?

ಗಾಯದ ಕಾರಣದಿಂದಾಗಿ ಪ್ರಮುಖ ಆಟಗಾರರು ಅಲಭ್ಯರಾಗಿದ್ದಾರೆ. ಹೈದರಾಬಾದ್‌ನ ಪ್ಯಾಟ್ ಕಮ್ಮಿನ್ಸ್, ಆರ್‌ಸಿಬಿಯ ಹ್ಯಾಜಲ್ವುಡ್, ಕೆಕೆಆರ್ ತಂಡದ ರಾಣಾ ಸೇರಿದಂತೆ ಪ್ರಮುಖ ಆಟಗಾರರು ಅಲಭ್ಯರಾಗಿದ್ದಾರೆ. ಈ ಮಧ್ಯೆ ದೇಶಿ ಕ್ರಿಕೆಟಿಗರಿಗೆ ಹೆಚ್ಚಿನ ಅವಕಾಶ ಸಿಗುವ ಸಾಧ್ಯತೆಗಳಿವೆ. ಪ್ರತಿಯೊಂದು ಫ್ರಾಂಚೈಸಿಯೂ ಹೆಚ್ಚಿನ ದೇಶಿ ಆಟಗಾರರನ್ನು ಆಯ್ಕೆ ಮಾಡಿಕೊಂಡಿವೆ. ಹೀಗಿರುವಾಗ ವಿದೇಶಿ ಆಟಗಾರರ ಮೇಲಿದ್ದ ಅವಲಂಬನೆ ಕಮ್ಮಿಯಾಗಿದೆ. ವಿದೇಶಿ ಆಟಗಾರರ ಅಲಭ್ಯತೆ ದೇಶಿ ಕ್ರಿಕೆಟಿಗರಿಗೆ ಅವಕಾಶ ಸಿಗುವ ಸಾಧ್ಯತೆ ಹೆಚ್ಚಿಸಿದೆ. ಪ್ರತಿಯೊಂದು ತಂಡದಲ್ಲೂ ಗಾಯದ ಚಿಂತೆಗಳಿವೆ. ಕೆಲವು ಆಟಗಾರರು ಪಂದ್ಯಾವಳಿಯಿಂದಲೇ ಹೊರನಡೆದಿದ್ದಾರೆ.

ಯಾರ ಮೇಲೆ ಜನರ ಗಮನ?

ಕಳೆದ ಐಪಿಎಲ್‌ನಿಂದಲೂ ಹಲವು ದೇಶಿ ಕ್ರಿಕೆಟಿಗರು ಭಾರೀ ಗಮನ ಸೆಳೆದಿದ್ದಾರೆ. ಮುಖ್ಯವಾಗಿ ಅಂಡರ್-19 ತಂಡದ ಪ್ರಮುಖ ಆಟಗಾರರು ಕೇಂದ್ರ ಬಿಂದುವಾಗಿದ್ದಾರೆ. ಭಾರತ ತಂಡಕ್ಕೆ ಆಯ್ಕೆಯಾಗಬೇಕಾದರೆ ಐಪಿಎಲ್ ಪ್ರಮುಖ ಪಾತ್ರ ವಹಿಸಲಿದೆ. ಹೀಗಿರುವಾಗ ಪಂದ್ಯಾವಳಿಯಲ್ಲಿ ಎಲ್ಲರ ಕಣ್ಣುಗಳೂ ಕೆಲವು ದೇಶಿ ಕ್ರಿಕೆಟಿಗರ ಮೇಲೆ ನೆಟ್ಟಿರಲಿವೆ.

1 ವೈಭವ್ ಸೂರ್ಯವಂಶಿ

15 ವರ್ಷದ ಕ್ರಿಕೆಟಿಗ ವೈಭವ್ ಕಳೆದ ಐಪಿಎಲ್‌ನಲ್ಲೇ ದೊಡ್ಡ ದಾಖಲೆ ಮಾಡಿದ್ದರು. ಅಂಡರ್-19 ವಿಶ್ವಕಪ್‌ನಲ್ಲೂ ಅದೇ ಪ್ರದರ್ಶನ ನೀಡಿ ಗಮನ ಸೆಳೆದಿರುವ ಅವರು ಆರ್‌ಆರ್ ತಂಡದಲ್ಲೇ ಇದ್ದಾರೆ.

2 ಆಯುಷ್ ಮಾತ್ರೆ

ಅಂಡರ್-19 ವಿಶ್ವಕಪ್ ಗೆದ್ದ ತಂಡದ ನಾಯಕ ಆಯುಷ್ ಮಾತ್ರೆ ಮೇಲೆ ಎಲ್ಲರ ಕಣ್ಣು ನೆಟ್ಟಿರಲಿದೆ. ಕಳೆದ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಅವರು, ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲೂ ಗಮನ ಸೆಳೆದಿದ್ದರು. ಚೆನ್ನೈ ತಂಡದ ಆರಂಭಿಕರಾಗಿ ಕಣಕ್ಕಿಳಿಯಲಿದ್ದಾರೆ.

3 ಕಾರ್ತಿಕ್ ಶರ್ಮ

ಅತ್ಯಂತ ದುಬಾರಿ ಅನ್‌ಕ್ಯಾಪ್ಡ್ ಆಟಗಾರ ಅನ್ನಿಸಿಕೊಂಡಿರುವ ಕಾರ್ತಿಕ್ ಶರ್ಮ ಮಿಂಚಲು ಸಿದ್ಧರಾಗಿದ್ದಾರೆ. ರಾಜಸ್ಥಾನ ಮೂಲದ ಈ ಕ್ರಿಕೆಟಿಗನಿಗೆ ಚೆನ್ನೈ ಸೂಪರ್ ಕಿಂಗ್ಸ್ 14.25 ಕೋಟಿ ಕೊಟ್ಟು ಖರೀದಿಸಿದೆ. ಮಧ್ಯಮ ಕ್ರಮಾಂಕದಲ್ಲಿ ಬಿರುಸಿನ ಬ್ಯಾಟಿಂಗ್ ಮಾಡುವ ಸಾಮರ್ಥ್ಯ ಹೊಂದಿದ್ದಾರೆ.



4 ವಿಹಾನ್ ಮಲ್ಹೋತ್ರಾ

ಆರ್‌ಸಿಬಿ ತಂಡಕ್ಕೆ ಆಯ್ಕೆಯಾಗಿರುವ ಭಾರತ ಅಂಡರ್-19 ತಂಡದ ಪ್ರಮುಖ ಆಟಗಾರ ವಿಹಾನ್ ಮಲ್ಹೋತ್ರಾ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಖರೀದಿಸಿದೆ. ಮುಖ್ಯವಾಗಿ ವಿಶ್ವಕಪ್‌ನಲ್ಲಿ ಗಮನಾರ್ಹ ಪ್ರದರ್ಶನ ನೀಡಿರುವ ಅವರು, ದಾಖಲೆಗಳನ್ನೂ ಮಾಡಿದ್ದಾರೆ. ಬೆಂಗಳೂರು ತಂಡದಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟರ್ ಆಗಿ ಕಾಣಿಸಿಕೊಳ್ಳಲಿದ್ದಾರೆ.

5 ಪ್ರಶಾಂತ್ ವೀರ್

14.25 ಕೋಟಿ ರೂ.ಗೆ ಚೆನ್ನೈ ತಂಡದ ಪಾಲಾಗಿರುವ ಪ್ರಶಾಂತ್ ವೀರ್ ಕೂಡ ಈ ಬಾರಿ ಗಮನ ಸೆಳೆಯಲು ಸಿದ್ಧರಾಗಿದ್ದಾರೆ. ತಮ್ಮ ಸ್ಫೋಟಕ ಬ್ಯಾಟಿಂಗ್‌ಗಾಗಿ ಖ್ಯಾತರಾದ ಇವರು, ಗಮನ ಸೆಳೆಯಬಲ್ಲ ಯುವಕರ ಪಟ್ಟಿಯಲ್ಲಿದ್ದಾರೆ.

6 ಆಕಿಬ್ ನಬಿ

ಜಮ್ಮು-ಕಾಶ್ಮೀರದ ಆಕಿಬ್ ನಬಿ ದಾರ್ ದೇಶಿ ಕ್ರಿಕೆಟ್‌ನಲ್ಲಿ ಭಾರೀ ಗಮನ ಸೆಳೆದ ಆಟಗಾರ. ತಮ್ಮ ಬೌಲಿಂಗ್ ಮೂಲಕ ಜಮ್ಮು-ಕಾಶ್ಮೀರ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸಿರುವ ಅವರು, ದಿಲ್ಲಿ ಕ್ಯಾಪಿಟಲ್ಸ್ ಪರ ಕಣಕ್ಕಿಳಿಯಲಿದ್ದಾರೆ.

ಇನ್ನುಳಿದಂತೆ ಪ್ರಿಯಾನ್ಶ್ ಆರ್ಯ, ವಂಶ ಭೇದಿ, ಮಂಗೇಶ್ ಯಾದವ್, ಸಮೀರ್ ರಿಜ್ವಿ ಸೇರಿದಂತೆ ವಿವಿಧ ಆಟಗಾರರು ಕೂಡ ಗಮನ ಸೆಳೆಯುವುದಕ್ಕೆ ಸಿದ್ಧರಾಗಿದ್ದಾರೆ.

ಮೂರು ತಿಂಗಳಿಗೊಮ್ಮೆ ಕಂದಾಯ ಅಧಿಕಾರಿಗಳಿಂದ ಪರಿಶೀಲನೆ

ಒತ್ತುವರಿ ತಡೆಗೆ ಬೀಟ್ ವ್ಯವಸ್ಥೆ

ನಂದಿನಿ ಎನ್.

ಬೆಂಗಳೂರು: ರಾಜ್ಯದಲ್ಲಿ ಸರ್ಕಾರಿ ಭೂಮಿ ಒತ್ತುವರಿ ಗಂಭೀರ ಸಮಸ್ಯೆಯಾಗಿದ್ದು, ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸಾವಿರಾರು ಎಕರೆ ಅತಿಕ್ರಮಣವಾಗಿದೆ. ಇದನ್ನು ತಡೆಯಲು ಸರ್ಕಾರ ಬೀಟ್ ವ್ಯವಸ್ಥೆ ಜಾರಿಗೊಳಿಸಿದ್ದು, ಪ್ರತಿ 3 ತಿಂಗಳಿಗೊಮ್ಮೆ ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ 15 ದಿನಗಳಲ್ಲಿ ಒತ್ತುವರಿ ತೆರವುಗೊಳಿಸುವುದು ಕಡ್ಡಾಯವಾಗಿದೆ. ಅಕ್ರಮ-ಸಕ್ರಮ ಯೋಜನೆ ಹಾಗೂ ಬಗರ್ ಹುಕುಂ ಸಾಗುವಳಿ ಮೂಲಕವೂ ಭೂಮಿ ಸಕ್ರಮಗೊಳಿಸಲು ಅವಕಾಶವಿದೆ.

ಮೂರು ವರ್ಷಗಳಲ್ಲಿ ಸುಮಾರು 79 ಸಾವಿರಕ್ಕೂ ಹೆಚ್ಚು ಎಕರೆ ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಳ್ಳಲಾಗಿದ್ದು, ಸುಮಾರು 37,156 ಎಕರೆ ಸರ್ಕಾರಿ ಜಮೀನನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿದೆ. 3 ವರ್ಷಗಳಲ್ಲಿ ಒತ್ತುವರಿಯಾದ ಸರ್ಕಾರಿ ಭೂಮಿಯಲ್ಲಿ ಸ್ವತಃ ಕಂದಾಯ ಸಚಿವರೇ ಉಸ್ತುವಾರಿ ಆಗಿರುವ ಹಾಸನ ಜಿಲ್ಲೆಯದ್ದೆ ಸಿಂಹಪಾಲಿದೆ. ಅಂದರೆ ಸುಮಾರು 31,565 ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿದೆ. ಇದರಲ್ಲಿ ಶೇ.11ರಷ್ಟು ಮಾತ್ರ ಅಂದರೆ 3323 ಎಕರೆ ಜಮೀನು ತೆರವುಗೊಳಿಸಲಾಗಿದೆ.

ಇನ್ನು ಒತ್ತುವರಿಯಲ್ಲಿ ಎರಡನೆ ಸ್ಥಾನದಲ್ಲಿ ಕಲಬುರಗಿ ಇದ್ದು, ಸುಮಾರು 9,891 ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿದೆ. ಇದರಲ್ಲಿ 7,909 ಎಕರೆ ತೆರವುಗೊಳಿಸಲಾಗಿದೆ. ಕೋಲಾರದಲ್ಲಿ 9,479 ಎಕರೆ ಒತ್ತುವರಿ ಯಾಗಿದ್ದು, ಮೂರನೇ ಸ್ಥಾನದಲ್ಲಿದೆ. 5,989 ಎಕರೆ ಜಮೀನು ತೆರವುಗೊಳಿಸಲಾಗಿದೆ. ಅದರಂತೆ ಚಿಕ್ಕಬಳ್ಳಾಪು ಜಿಲ್ಲೆಯಲ್ಲಿ 7,213 ಎಕರೆ ಒತ್ತುವರಿಯಾಗಿದ್ದರೆ, ದಾವಣಗೆರೆಯಲ್ಲಿ 6,465 ಎಕರೆ ಒತ್ತುವರಿ ಯಾಗಿದೆ.



ಒತ್ತುವರಿ ತೆರವು ಮಾಡಿ ಸರ್ಕಾರದ ವಶಕ್ಕೆ ಪಡೆದ ಜಮೀನುಗಳು ಪುನಃ ಒತ್ತುವರಿಯಾಗದಂತೆ ಸಂರಕ್ಷಣಾ ಕ್ರಮ ಅಂದರೆ ಸಂದರ್ಭಾನುಸಾರ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟು ಪುನಃ ಒತ್ತುವರಿಯಾಗದಂತೆ ತಂತಿ ಬೇಲಿ ಹಾಕಿಸಬೇಕು. ಸುತ್ತಲೂ ಕಂದಕ ನಿರ್ಮಿಸುವುದು ಅಥವಾ ನಾಮ ಫಲಕ ಹಾಕಿಸಬೇಕು.

■ ಕೃಷ್ಣ ಬೈರೇಗೌಡ, ಕಂದಾಯ ಸಚಿವ

ನಕಲಿ ದಾಖಲೆಗಳಿದ್ದರೆ ಕ್ರಿಮಿನಲ್ ಮೊಕದ್ದಮೆ

ನಕಲಿ ದಾಖಲೆಗಳ ಆಧಾರದ ಮೇಲೆ ಭೂ ಕಬಳಿಕೆಯಾಗಿದೆಯೆಂದು ಬಂದಿರುವ ದೂರು ಅಥವಾ ಸ್ವತಃ ಗಮನಿಸಿರುವ ಪ್ರಕರಣಗಳನ್ನು ತೀರ್ಮಾನಿಸಲು ನಿರ್ದಿಷ್ಟ ಕಾಲಮಿತಿ ನಿಗದಿಪಡಿಸುವುದು, ಪ್ರಕರಣಗಳನ್ನು ಪ್ರತ್ಯೇಕವಾಗಿ ಪರಾರ್ಶಿಸಬೇಕು. ನಕಲಿ ದಾಖಲೆಗಳನ್ನು ಸೃಷ್ಟಿಸುವಲ್ಲಿ ಸರ್ಕಾರಿ ಅಧಿಕಾರಿ/ಸಿಬ್ಬಂದಿ ಶಾಮೀಲಾಗಿರುವ ಬಗ್ಗೆ ಕಂಡು ಬಂದರೆ ತ್ವರಿತ ಸೇವೆಯಿಂದ ಅಮಾನತ್ತಿನಲ್ಲಿಡುವುದು. ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಟ್ಟಿರುವುದು ಸಾಬೀತು ಆದಲ್ಲಿ ತಕ್ಷಣವೇ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವುದು. ನ್ಯಾಯಾಲಯ ತಡೆಯಾಜ್ಞೆ ಜಾರಿಯಲ್ಲಿದ್ದರೆ, ತಡೆಯಾಜ್ಞೆ ತೆರವು ಮಾಡಿಸಲು ತಕ್ಷಣವೇ ಕ್ರಮ ಜರುಗಿಸಿ ತ್ವರಿತ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳುವುದು. ಸರ್ಕಾರಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಾಖಲಾಗಿರುವ ನ್ಯಾಯಾಲಯ ಪ್ರಕರಣ ಗಳನ್ನು ಪರಿಣಾಮಕಾರಿಯಾಗಿ ಕ್ಷೇತ್ರ ಮಟ್ಟದ ಅಧಿಕಾರಿಗಳು ನಿರ್ವಹಿಸುವುದನ್ನು ಖಚಿತಪಡಿಸಿ ಕೊಳ್ಳುವುದು.

ಒತ್ತುವರಿ ತೆರವಿಗೆ ಸರ್ಕಾರದ ಕ್ರಮ: ಜಿಲ್ಲಾಧಿಕಾರಿಗಳು ಒತ್ತುವರಿ ತೆರವುಗೊಳಿಸಲು ಬಾಕಿ ಇರುವ ಪ್ರಕರಣಗಳು ಹಾಗೂ ಸ್ವೀಕೃತವಾಗಿರುವ ದೂರುಗಳನ್ನು ಇನ್ನು 15 ದಿನಗಳ ಅವಧಿಯೊಳಗೆ ಸಂಪೂರ್ಣವಾಗಿ ಪರಾಮರ್ಶಿಸುವುದು. ನಗರಪ್ರದೇಶ/ವಾಣಿಜ್ಯ/ಕೈಗಾರಿಕೆ/ಇನ್ನಿತರ ಉದ್ದಿಮೆಗಳಿಗೆ ಅನಧಿಕೃತವಾಗಿ ಸರ್ಕಾರಿ ಜಮೀನು ಬಳಸಿರುವ ಒತ್ತುವರಿ ಪ್ರಕರಣಗಳನ್ನು ಅತಿ ಗಂಭೀರ ಎಂದು ಪರಿಗಣಿಸಿ ಒತ್ತುವರಿದಾರರ ವಿರುದ್ಧ ಕಾನೂನು ಕ್ರಮಗಳನ್ನು ಜರುಗಿಸುವ ಅಧಿಕಾರ ನೀಡಲಾಗಿದೆ. ಕಾಲಮಿತಿಯಲ್ಲಿ ಕ್ರಮ ಜರುಗಿಸದೇ ಇರುವುದು, ನಿರ್ಲಕ್ಷತನ ತೋರಿಸುವುದು, ವಿಳಂಬ ನೀತಿ ಅನುಸರಿಸುವುದು, ಒತ್ತುವರಿ ತೆರವುಗೊಳಿಸಲು ವಿಫಲರಾದ ಅಧಿಕಾರಿ, ಸಿಬ್ಬಂದಿಯನ್ನು ಗುರುತಿಸಿ ಕಲಂ 192ಎ/192ಬಿ ಅನ್ವಯ ತಪ್ಪದೇ ಕ್ರಮ ಜರುಗಿಸುವುದು. ಸದರಿ ಒತ್ತುವರಿ ತೆರವುಗೊಳಿಸಲು ಪರ್ಯಾಯ ವ್ಯವಸ್ಥೆ ಮಾಡುವುದು.

ಯುದ್ಧದ ಬೆನ್ನಲ್ಲೇ ಪಿಸಿಬಿಗೆ ಭಾರೀ ಹಿನ್ನಡೆ | ಎರಡೇ ಕ್ರೀಡಾಂಗಣದಲ್ಲಿ ಪಂದ್ಯ

ಪ್ರೇಕ್ಷಕರಿಲ್ಲದೆ ಪಾಕಿಸ್ತಾನ ಸೂಪರ್ ಲೀಗ್!

ಲಾಹೋರ್: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆಯ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿ ತತ್ತರಿಸಿದ್ದು, ಭಾರೀ ಹಿನ್ನಡೆ ಅನುಭವಿಸಿದೆ. ಐಸಿಸಿ ಟೂರ್ನಿಗಳಲ್ಲಿ ಕೆಟ್ಟ ಪ್ರದರ್ಶನ ನೀಡಿ ಆರ್ಥಿಕವಾಗಿ ಮತ್ತು ಐಸಿಸಿ ಕ್ಷೇತ್ರದಲ್ಲಿ ತೀರಾ ಕುಗ್ಗಿರುವ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆ ಪಂದ್ಯಾವಳಿಯನ್ನು ಪ್ರೇಕ್ಷಕರಿಲ್ಲದೆ ನಡೆಸುವುದಕ್ಕೆ ಮುಂದಾಗಿದೆ.

ಗಲ್ಫ್ ದೇಶಗಳಲ್ಲಿ ನಡೆಯುತ್ತಿರುವ ಯುದ್ಧಕ್ಕೆ ತುತ್ತಾದವರಲ್ಲಿ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆ ಕೂಡ ಎಂಬುದಕ್ಕೆ ಆಟಗಾರರ ಅಲಭ್ಯತೆಯೇ ಸಾಕ್ಷಿ. ಹಲವಾರು ಆಟಗಾರರು ಪಾಕಿಸ್ತಾನಕ್ಕೆ ಹೋಗಲು ನಿರಾಕರಿಸಿದ್ದಾರೆ. ಹತ್ತಾರು ಕ್ರಿಕೆಟಿಗರು ತಮ್ಮ ಹಾಜರಾತಿ ಹಿಂಪಡೆದಿದ್ದಾರೆ. ಇನ್ನು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಆಯ್ಕೆಯಾದ ಹಲವು ಆಟಗಾರರು ಹೊರಬಿದ್ದ ಕಾರಣ ಕೆಲವು ಪಿಎಸ್‌ಎಲ್ ಆಟಗಾರರು ಪಿಸಿಬಿಗೆ ಕೈಕೊಟ್ಟು ಬದಲಿ ಆಟಗಾರರಾಗಿ ಭಾರತಕ್ಕೆ ಬಂದಿಳಿದಿದ್ದಾರೆ. ಇದು ಕೂಡ ಪಿಸಿಬಿಗೆ ಹೊಡೆತ ನೀಡಿದೆ.

ಅಭಿಮಾನಿಗಳಿಲ್ಲದೆ ಪಂದ್ಯ: ಮಾರ್ಚ್ 26ರಂದು ಶುರುವಾಗಲಿರುವ ಪಿಎಸ್‌ಎಲ್ ಪಂದ್ಯಾ ವಳಿಗೆ ಅಭಿಮಾನಿಗಳ ಪ್ರವೇಶವಿರುವುದಿಲ್ಲ, ಭಾನುವಾರದಂದು ಮಾಧ್ಯಮವನ್ನುದ್ದೇಶಿಸಿ ಮಾತನಾಡಿರುವ ಪಿಸಿಬಿ ಅಧ್ಯಕ್ಷ ಮೋಹ್ಸಿನ್ ನಖ್ವಿ, ಪಿಎಸ್‌ಎಲ್ ನಮ್ಮ ದೇಶದ ಕ್ರಿಕೆಟ್ ಹಬ್ಬ, ನಾವು ರದ್ದುಗೊಳಿಸಲಾಗುವುದಿಲ್ಲ. ಟೂರ್ನಿ ವೇಳಾ ಪಟ್ಟಿಯಂತೆ ನಡೆಯುತ್ತದೆ. ಆದರೆ ಅಭಿಮಾನಿಗಳಿಗೆ ಪಂದ್ಯ ನೋಡುವುದಕ್ಕೆ ಅವಕಾಶವಿರುವುದಿಲ್ಲ, ಸದ್ಯ ವಿಶ್ವದಲ್ಲಿ ನಡೆಯುತ್ತಿರುವ ಸಂಘರ್ಷ ಮುಂದಿಟ್ಟುಕೊಂಡು ಈ ಬಗ್ಗೆ ತೀರ್ಮಾನ ಮಾಡಲಾಗಿದೆ ಎಂದಿದ್ದಾರೆ.



ಪಿಎಸ್‌ಎಲ್‌ಗೆ ಆಟಗಾರರೇ ಇಲ್ಲ

ತಂಡಗಳು ಹರಾಜಿನಲ್ಲಿ ವಿವಿಧ ದೇಶಗಳ ಆಟಗಾರರನ್ನು ಆಯ್ಕೆ ಮಾಡಿಕೊಂಡಿದ್ದವು. ಹ್ಯಾರಿ ಬ್ರೂಕ್ ಅಂತಹ ಪ್ರಮುಖ ಆಟಗಾರರನ್ನೂ ತಂಡಗಳು ಖರೀದಿಸಿದ್ದವು. ಒಬ್ಬೊಬ್ಬರಂತೆ ವಿವಿಧ ಕಾರಣಗಳನ್ನು ಹೇಳಿದ ಆಟಗಾರರು ಅಲಭ್ಯತೆ ಖಚಿತಪಡಿಸಿದರು. ಇದಲ್ಲದೆ, ಐಪಿಎಲ್‌ಗಾಗಿ ಇಬ್ಬರು ಆಟಗಾರರು ಭಾರತಕ್ಕೆ ಬರಲಿದ್ದು ಪಿಸಿಬಿಗೆ ಇನ್ನಷ್ಟು ಹಿನ್ನಡೆಯಾಗಿದೆ.

ಎರಡೇ ಮೈದಾನದಲ್ಲಿ ಪಂದ್ಯ: ಪಿಎಸ್‌ಎಲ್ ಪಂದ್ಯಾವಳಿ ವಾಸ್ತವವಾಗಿ ಆರು ಕ್ರೀಡಾಂಗಣಗಳಲ್ಲಿ ನಡೆಯಬೇಕಿತ್ತು. ಆದರೆ ಲಾಜಿಸ್ಟಿಕ್ಸ್, ಮತ್ತು ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಾದ ಸಂಘರ್ಷಗಳಿಂದ ಎರಡೇ ಸ್ಥಳಗಳಲ್ಲಿ ನಡೆಯಲಿದೆ. ಮೊದಲಿನ ವೇಳಾಪಟ್ಟಿ ಪ್ರಕಾರ ಮುಲ್ತಾನ್, ಪೇಶಾವರ, ಫೈಸಲಾಬಾದ್, ಕರಾಚಿ, ರಾವಲ್ಪಿಂಡಿ ಮತ್ತು ಲಾಹೋರದಲ್ಲಿ ಪಂದ್ಯಗಳು ನಡೆಯಬೇಕಿದ್ದವು. ಆದರೆ ಲಾಹೋರ್ ಮತ್ತು ಕರಾಚಿಯಲ್ಲಿ ಮಾತ್ರ ಪಂದ್ಯಾವಳಿ ನಡೆಸುವುದಕ್ಕೆ ಪಿಸಿಬಿ ಮುಂದಾಗಿದೆ. ಅದಲ್ಲದೆ ಆರಂಭಿಕ ಪಂದ್ಯಕ್ಕೂ ಮುನ್ನ ಯಾವುದೇ ಉದ್ಘಾಟನಾ ಸಮಾರಂಭ ನಡೆಯುವುದಿಲ್ಲ ಎಂದು ಪಿಸಿಬಿ ತಿಳಿಸಿದೆ.

ಇಂಧನ ವ್ಯತ್ಯೆ: ಎರಡೇ ಕ್ರೀಡಾಂಗಣದಲ್ಲಿ ಪಂದ್ಯಾವಳಿ ನಡೆಸುವುದಕ್ಕೆ ಪ್ರಮುಖ ಕಾರಣ ಇಂಧನ ಎಂದು ಬಣ್ಣಿಸಲಾಗಿದೆ. ಯುದ್ಧದ ಪರಿಣಾಮದಿಂದಾಗಿ ವಿಶ್ವವೇ ಇಂಧನ ಬಿಕ್ಕಟ್ಟನ್ನು ಎದುರಿಸುತ್ತಿದೆ. ಹೀಗಿರುವಾಗ ಪಾಕಿಸ್ತಾನ ಪ್ರಧಾನ ಮಂತ್ರಿ ಶರೀಫ್, ಪಿಎಸ್‌ಎಲ್‌ನಲ್ಲಿ ಭಾಗವಹಿಸುವ ಆಟಗಾರರಿಗೆ ಮತ್ತು ಸಿಬ್ಬಂದಿಗಳಿಗೆ ಇಂಧನ ಉಳಿತಾಯದತ್ತ ಗಮನಹರಿಸಿ ಎಂದಿದ್ದಲ್ಲದೆ, ನಾವು ಶಾಲಾ-ಕಾಲೇಜುಗಳನ್ನು ಬಂದ್ ಮಾಡಿದ್ದೇವೆ. ಜನರಿಗೆ ವರ್ಕ್ ಫ್ರಾಮ್ ಹೋಮ್ ಕೊಟ್ಟಿದ್ದೇವೆ. ಇಂಧನ ಉಳಿತಾಯ ನಮಗೆ ಅತ್ಯವಶ್ಯಕ ಎಂದು ಅಳಲು ತೋಡಿಕೊಂಡಿದ್ದಾರೆ.

ಆಫ್ರಿಕಾಗೆ ಗೆಲುವು, ಸರಣಿ ಸಮಬಲ

ವಿಲ್ಲಿಂಗ್ಟನ್: ಕಾನರ್ ಎಸ್ಟರ್‌ಹುಯಿಜೆನ್ ಅವರ ಸ್ಫೋಟಕ ಬ್ಯಾಟಿಂಗ್ ಹಾಗೂ ತಂಡ ಸಾಂಘಿಕ ಬೌಲಿಂಗ್ ದಾಳಿಗೆ ನ್ಯೂಜಿಲೆಂಡ್ ತಂಡ ತತ್ತರಿಸಿದ್ದು ಇಲ್ಲಿ ಮುಕ್ತಾಯಗೊಂಡಿರುವ ನಾಲ್ಕನೇ ಟಿ20 ಪಂದ್ಯದಲ್ಲಿ ಆಫ್ರಿಕಾ ವಿರುದ್ಧ ಸೋಲನುಭವಿಸಿತು.

ವಿಶ್ವಕಪ್ ಮುಗಿದ ತಕ್ಷಣವೇ ನ್ಯೂಜಿಲೆಂಡ್ ಹಾಗೂ ದ.ಆಫ್ರಿಕಾ ತಂಡಗಳು ಎದುರಾಗಿವೆ. ಈ ಹಂತದಲ್ಲಿ ಮೊದಲಿನ ಮೂರು ಪಂದ್ಯದಲ್ಲಿ ಮುನ್ನಡೆ ಸಾಧಿಸಿದ್ದ ಕಿವೀಸ್ ಮುನ್ನಡೆ ಸಾಧಿಸಿತ್ತು. ಈ ಪಂದ್ಯದಲ್ಲಿ ಗೆದ್ದರೆ ಸರಣಿ ವಶಪಡಿಸಿಕೊಳ್ಳಲಿತ್ತು. ಆದರೆ ಭಾನುವಾರದ ಪಂದ್ಯದಲ್ಲಿ ಆಫ್ರಿಕನ್ನರು ಮಿಂಚಿದರು.

ಬ್ಯಾಟಿಂಗ್ ಆಹ್ವಾನ ಪಡೆದ ನಂತರ ಆರಂಭಿಕ ಹಿನ್ನಡೆ ಅನುಭವಿಸಿದರೂ, ಕಾನರ್ ಎಸ್ಟರ್‌ಹುಯಿಜೆನ್ ಅವರ ಅರ್ಧಶತಕದ ನೆರವಿನಿಂದ ಚೇತರಿಸಿಕೊಂಡ ಆಫ್ರಿಕಾ ರುಬಿನ್ ಅವರ ಫಿನಿಶಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿತು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ಆರಂಭದಿಂದಲೂ ಹಿನ್ನಡೆ ಅನುಭವಿಸಿತು. ರಾಬಿಸನ್ ಹಾಗೂ ಕ್ಲೆವರ್ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ ಅಲ್ಪ ಹೊತ್ತು ನಿಂತರೂ 18.5 ಓವರ್‌ಗಳಲ್ಲಿ 145 ರನ್ ಗಳಿಸಿ ಆಲೌಟ್ ಆಗಿ ಸೋಲೊಪ್ಪಿಕೊಂಡಿತು. 57 ರನ್ ಗಳಿಸಿದ ಕಾನರ್ ಎಸ್ಟರ್‌ಹುಯಿಜೆನ್ ಪಂದ್ಯದ ಹೀರೋ ಎನಿಸಿದರು. ಹರಿಣರ ವೇಗಿ ಕೋಎಸಿ 3 ವಿಕೆಟ್ ಪಡೆದು ಬೆಸ್ಟ್ ಬೌಲರ್ ಎನಿಸಿಕೊಂಡರು. ಆಫ್ರಿಕಾ ಪರ ಬಾರ್ಟಮನ್, ಸುಬರೈಣ್ ಹಾಗೂ ಕೇಶವ್ ಕೂಡ ತಲಾ 2 ವಿಕೆಟ್ ಪಡೆದರು. ಐದನೇ ಹಾಗೂ ನಿರ್ಣಾಯಕ ಪಂದ್ಯ ಬುಧವಾರದಂದು ನಡೆಯಲಿದೆ.

ಸಿಎಸ್‌ಕೆ ಆಟಗಾರರ ಸಮಾಗಮ



ಚೆನ್ನೈ: ಶನಿವಾರದಿಂದ ಶುರುವಾಗಲಿರುವ ಐಪಿಎಲ್ ಪಂದ್ಯಾವಳಿಗೂ ಮುನ್ನ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ಅಭಿಮಾನಿಗಳಿಗಾಗಿ ಕಾರ್ಯಕ್ರಮವೊಂದನ್ನು ಮಾಡಿದ್ದು, ತನ್ನ ಫ್ರಾಂಚೈಸಿಗೆ ಆಡಿರುವ ಹಲವು ಆಟಗಾರರನ್ನು ಕರೆಸಿ ಸನ್ಮಾನ ಮಾಡಿತು.


ಚೆನ್ನೈನ ಚೆಪಾಕ್ ಕ್ರೀಡಾಂಗಣ ಅಭಿಮಾನಿಗಳಿಗೆ ಹಳೆ ನೆನಪುಗಳ ಗೂಡಾಗಿ ಗೋಚರಿಸಿತ್ತು. ಚೆನ್ನೈ ತಂಡ ಚಾಂಪಿಯನ್ ಪಟ್ಟಕ್ಕೇರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಬ್ಯಾಟರ್ ಸುರೇಶ್ ರೈನಾ, ಆಲ್‌ರೌಂಡರ್ ಡ್ವೇನ್ ಬ್ರಾವೊ, ಸ್ಪಿನ್ನರ್ ಮುತ್ತಯ್ಯಾ ಮುರಳೀಧರನ್, ವೇಗಿ ಬಾಲಿಂಜರ್, ಸುಬ್ರಮಣ್ಯ ಬದರಿನಾಥ, ಅಂಬಾಟಿ ರಾಯುಡು, ಹರ್ಭಜನ್ ಸಿಂಗ್ ಸೇರಿದಂತೆ ವಿವಿಧ ಮಾಜಿ ಆಟಗಾರರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಗೌರವ ಸಲ್ಲಿಸಿದೆ.

ಕಾರ್ಯಕ್ರಮದ ಸಮಯದಲ್ಲಿ ಮಹೇಂದ್ರ ಸಿಂಗ್ ಧೋನಿ ಮಾಜಿ ಆಟಗಾರರೊಂದಿಗೆ ಅಣಕು ಆಟವಾಡಿದರು. ರೈನಾ ಸೇರಿದಂತೆ ಪ್ರಮುಖ ಬ್ಯಾಟಿಗರು ಬ್ಯಾಟಿಂಗ್ ಮಾಡಿದರು. ಚೆನ್ನೈ ಸೂಪರ್ ಕಿಂಗ್ಸ್ ಗೆದ್ದ ಎಲ್ಲಾ ಟ್ರೋಫಿಗಳೊಂದಿಗೆ ಫೋಟೋ ಸೆಷನ್ ಕೂಡ ನಡೆಯಿತು.

ವಿಶ್ವ ಚಾಂಪಿಯನ್‌ಗಳಿಗೆ ಸನ್ಮಾನ: ಕಾರ್ಯಕ್ರಮಕ್ಕೂ ಮುನ್ನ ಟಿ20 ವಿಶ್ವಕಪ್ ಗೆದ್ದ ತಂಡದ ಭಾಗವಾಗಿದ್ದ ಶಿವಂ ದುಬೆ, ಸಂಜು ಸ್ಯಾಮ್ಸನ್ ಮತ್ತು ಅಂಡರ್-19 ವಿಶ್ವಕಪ್ ಗೆಲ್ಲಿಸಿಕೊಟ್ಟ ನಾಯಕ ಆಯೂಷ್ ಮಾತ್ರೆ ಅವರಿಗೆ ಚೆನ್ನೈ ಸೂಪರ್ ಕಿಂಗ್ಸ್ ವಿಶೇಷ ಪಾರಿತೋಷಕ ನೀಡಿತು. ಧೋನಿ ಈ ಆಟಗಾರರಿಗೆ ಸನ್ಮಾನಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5932

ಎಡದಿಂದ ಬಲಕ್ಕೆ
1.ಪಾಠಕನಿಗಾಗಿ ತಯಾರಿಸಿದ ಅಡುಗೆ (2)
2. ನನಗಾಗಿ ವಾದಿಸಲು ಬಂದ ಸಚಿವ (3)
4.ತಾಡಪತ್ರಿಯಲ್ಲಿರುವ ಬಿಸಿ (2)
6. ಹಾಡಿನಿಂದ ಕೂಡಿದ ಪ್ರಪಂಚ (4)
8. ಮದುವೆಗೆ ಸಿದ್ಧನಾದ ಗಂಡು (3)
12.ಕ್ಷಾಮದ ದಿನಗಳು ತಿರುಗಿ ಮೂಡಿವೆ (4)
14. ವಿಚಿತ್ರವಾದರೂ ಇದನ್ನು ಬರೆದಿಡಲಾಗಿದೆ (4)
15.ಬೆಣ್ಣೆ ಕಾಯಿಸಿ ತೆಗೆದ ಸಾರ (2)
16. ಸಭಾ ಸದರೆಡೆಗೆ ನುಗ್ಗಿ ಬಂದವರ ವೇಗ (3)
17.ಪೂರ್ಣ ಪದಾರ್ಥದ ಒಂದು ಅಂಶ (2)

ಮೇಲಿನಿಂದ ಕೆಳಕ್ಕೆ
1.ಆಸ್ತಿಯಲ್ಲಿ ಭಾಗಸ್ಥನೀತ (4)
2.ತಾರೀಖನ್ನು ಹೀಗೂ ಹೇಳುತ್ತೇವೆ (3)
3.ದಮನವಾಗದ ಮಾರ ತಲೆಕೆಳಗಾಗಿದ್ದಾನೆ (3)
5.ಇದು ನಾಡಿನ ಒಂದು ಭಾಗ (4)
7.ಜನರ ಕಷ್ಟ-ನಷ್ಟಗಳಿಗೆ ಸಹಾಯ ಮಾಡುವ ಗುಣ (5)
9.ಅನುಚಿತವಾದ ಜಂಭವಿದು (5)
10.ರಸಾಯನಿಕವಾಗಿ ವಿಭಜಿಸಲು ಅಸಾಧ್ಯವಾದ ಘಟಕ (4)
11.ಮನದಲ್ಲುಂಟಾಗುವ ಭಾವನೆ-ವಿಚಾರ (4)
13.ಬರದ ನಡುವೆ ಕಾಳಗವಡಗಿದೆ (3)
14.ಇಚ್ಛೆಗೆ ವಿರುದ್ಧವಾದುದು (3)

5931 ಉತ್ತರ

ಎಡದಿಂದ ಬಲಕ್ಕೆ:
3.ಅಲ್ಲಮಪ್ರಭು
5.ಕೇಳುಗ 6.ಚರ್ವಿತ
7.ಹವಳ 9.ತಂಗುದಾಣ
11.ಪರಂತಪಾ 14.ಗಣಕ
16.ಅಪಾರ 17.ಜವಾರಿ
18.ಕೊರಳುಪಟ್ಟಿ

ಮೇಲಿನಿಂದ ಕೆಳಕ್ಕೆ :
1.ತೊಡೆಚಲ್ಲಣ 2.ಸಂಕೇತ
3.ಅಗಣಿತ 4.ಮಣಿಹ
8.ವರ್ಜಿತ 10.ದಾರುಣ
12.ಪಾತರಗಿತ್ತಿ
13.ಜಗಜಟ್ಟಿ 15.ಕರುಳು
16.ಅರಿಕೆ

ಒಳ ಮೀಸಲಾತಿ ನೀತಿ ವಿರೋಧಿಸಿ ಧರಣಿ | ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಹೇಳಿಕೆ

ನಾಳೆ ಬೆಂಗಳೂರಿನಲ್ಲಿ ಪ್ರತಿಭಟನೆ

ಚಿತ್ರದುರ್ಗ: ಸರ್ಕಾರದ ಒಳಮೀಸಲಾತಿ ನೀತಿ, ಆಯೋಗಗಳ ವರದಿ ಹಾಗೂ ರೋಸ್ಟರ್ ವ್ಯವಸ್ಥೆಗಳ ವಿರೋಧವಾಗಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ವತಿಯಿಂದ ಮಾ.24 ರಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ತಿಳಿಸಿದರು.

ಬೆಂಗಳೂರಿನ ವಸಂತ ನಗರದ ಜಸ್ಮಾಭವನದಲ್ಲಿ ಭಾನುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭೋವಿ, ಬಂಜಾರ, ಕೊರಮ, ಕೊರಚ, ಸೂಕ್ಷ್ಮ, ಅತಿಸೂಕ್ಷ್ಮ ಹಾಗೂ ಅಲೆಮಾರಿಗಳ 59 ಜಾತಿಗಳಿಗೆ ಅನ್ಯಾಯವಾಗುತ್ತಿದೆ. ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಅವೈಜ್ಞಾನಿಕವಾಗಿದೆ. ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಏಕಸದಸ್ಯ ಆಯೋಗದ ವರದಿ ಅಪೂರ್ಣವಾಗಿದ್ದು, ಸಮೀಕ್ಷೆ ಸರಿಯಾದ ರೀತಿಯಲ್ಲಿ ನಡೆದಿಲ್ಲ ಎಂಬ ಆಕ್ಷೇಪವನ್ನು ಹಲವಾರು ಸಂಘಟನೆಗಳು ವ್ಯಕ್ತಪಡಿಸಿದ್ದರೂ, ಅದನ್ನು ಪರಿಗಣಿಸದೆ ವರದಿ ಸಲ್ಲಿಸಲಾಗಿದೆ ಎಂದರು.

ಆಯೋಗದ ವರದಿಯಲ್ಲಿ ಭೋವಿ, ಬಂಜಾರ, ಕೊರಮ, ಕೊರಚ ಹಾಗೂ ಇತರ ಸೂಕ್ಷ್ಮ ಪರಿಶಿಷ್ಟ ಜಾತಿಗಳ ಜನಸಂಖ್ಯೆಯನ್ನು ಸರಿಯಾದ ರೀತಿಯಲ್ಲಿ ಲೆಕ್ಕಿಸಿಲ್ಲ. ಉದಾಹರಣೆಗೆ, 2011ರ ಜನಗಣತಿಯಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಇದ್ದ ಭೋವಿ ಸಮುದಾಯವನ್ನು ವರದಿಯಲ್ಲಿ ಅತಿ ಕಡಿಮೆ ಏರಿಕೆ ತೋರಿಸಲಾಗಿದೆ. ಇದರಿಂದ ಸಮುದಾಯಗಳ ನಿಜವಾದ ಸ್ಥಿತಿ ಪ್ರತಿಬಿಂಬಿಸಲ್ಪಟ್ಟಿಲ್ಲ. ಇನ್ನೂ ಆಯೋಗವೇ ಸಲ್ಲಿಸಿರುವ ವರದಿಯಲ್ಲಿಯೇ ಈ ಸಮುದಾಯಗಳು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ತೀವ್ರ ಹಿಂದುಳಿದಿವೆ ಎಂದು 26 ಕೋಷ್ಟಕಗಳಲ್ಲಿ 19ರಲ್ಲಿ ಸ್ಪಷ್ಟಪಡಿಸಲಾಗಿದೆ ಎಂದು ಹೇಳಿದರು.

ಸರ್ಕಾರ ರೂಪಿಸಿರುವ ಪ್ರವರ್ಗ ಎ, ಬಿ,ಸಿ ವಿಭಾಗೀಕರಣವೂ ಜನಸಂಖ್ಯಾ ಅನುಪಾತಕ್ಕೆ ಅನುಗುಣವಾಗಿಲ್ಲ, ವಿಶೇಷವಾಗಿ ರೋಸ್ಟರ್ ವ್ಯವಸ್ಥೆ ಅವೈಜ್ಞಾನಿಕವಾಗಿದೆ. ಹಿಂದಿನ ಸರ್ಕಾರದಲ್ಲಿ 560 ಹುದ್ದೆಗಳ ನೇಮಕಾತಿಯಲ್ಲಿ ಒಂದು ಪ್ರವರ್ಗಕ್ಕೆ ಬಹುಪಾಲು ಹುದ್ದೆಗಳು ನೀಡಲಾಗಿದ್ದು, ಪ್ರವರ್ಗ ಅಗೆ ಶೂನ್ಯ ಅವಕಾಶ ದೊರೆತಿದೆ. ಹೊಸ ರೋಸ್ಟರ್‌ನಲ್ಲಿ ಪ್ರವರ್ಗ ಅಗೆ ಶೂನ್ಯ ಸ್ಥಾನ ನೀಡಿರುವುದರಿಂದ, ಈ ಸಮುದಾಯಗಳಿಗೆ ಅವಕಾಶ ಸಿಗುವಷ್ಟರಲ್ಲಿ ತಲೆಮಾರುಗಳು ಕಳೆದು ಹೋಗುವ ಪರಿಸ್ಥಿತಿ ಉಂಟಾಗುತ್ತದೆ. ಇದು ಸಮುದಾಯಗಳನ್ನು ಉದ್ದೇಶಪೂರ್ವಕವಾಗಿ ಹಿಂದುಳಿಸುವ ಪ್ರಯತ್ನ ಎಂದರು.



ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಶೇ 7% ಹೆಚ್ಚಿಸಿರುವುದನ್ನು ಶೆಡ್ಯೂಲ್ 9ರಲ್ಲಿ ಸೇರಿಸುವ ಮೂಲಕ ಸಂರಕ್ಷಿಸಬೇಕು. ಜೊತೆಗೆ ಖಏಕ-ಖಿಖಿಕ ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಸದೇ ನೇರವಾಗಿ ಸಮುದಾಯಗಳ ಅಭಿವೃದ್ಧಿಗೆ ಬಳಸಬೇಕು. ರಾಜ್ಯದಲ್ಲಿರುವ ವಿವಿಧ ಪರಿಶಿಷ್ಟ ಜಾತಿ ನಿಗಮಗಳಿಗೆ ಜನಸಂಖ್ಯಾ ಆಧಾರಿತವಾಗಿ ಮೀಸಲಾದ ಅನುದಾನವನ್ನು ನೇರವಾಗಿ ಬಿಡುಗಡೆ ಮಾಡುವ ಮೂಲಕ ಸಮುದಾಯಗಳ ಅಭಿವೃದ್ಧಿಗೆ ವೇಗ ನೀಡಬೇಕು ಎಂದು ಒತ್ತಾಯಿಸಿದರು.

ಮಾ.27 ರಂದು ಒಳಮೀಸಲಾತಿ ಕುರಿತ ವಿಶೇಷ ಸಚಿವ ಸಂಪುಟ ಸಭೆ ನಡೆಯಲಿರುವ ಹಿನ್ನೆಲೆಯಲ್ಲಿ, ಸರ್ಕಾರವು ಈ ಸಭೆಯಲ್ಲಿ ಸಮಗ್ರ ಚರ್ಚೆ ನಡೆಸಿ ನ್ಯಾಯಸಮ್ಮತ ನಿರ್ಧಾರ ಕೈಗೊಳ್ಳಬೇಕು. ಸದ್ಯ ಸರ್ಕಾರ ಭರ್ತಿ ಮಾಡಲು ಉದ್ದೇಶಿಸಿರುವ 56 ಸಾವಿರ ಹುದ್ದೆಗಳನ್ನು ಯಾವುದೇ ಒಳಮೀಸಲಾತಿ ಜಾರಿಗೊಳಿಸದೆ ಭರ್ತಿ ಮಾಡಬಾರದು. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸಮಾನ ಅವಕಾಶಗಳನ್ನು ಒದಗಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲು ಈ ಪ್ರತಿಭಟನಾ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೀಸಲಾತಿ ಒಕ್ಕೂಟದ ಅಧ್ಯಕ್ಷ ಡಾ.ಹೆಚ್. ರವಿ ಮಾಕಳಿ, ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಕಾರ್ಯಾಧ್ಯಕ್ಷ ರಾಘವೇಂದ್ರ ನಾಯಕ್, ಕಾರ್ಯಾಧ್ಯಕ್ಷ ಅನಂತನಾಯಕ, ಒಕ್ಕೂಟದ ಉಪಾಧ್ಯಕ್ಷ ಆದರ್ಶ ಯಲ್ಲಪ್ಪ, ಪ್ರಧಾನ ಕಾರ್ಯದರ್ಶಿ ಹಾವೇರಿ ರವಿ ಪೂಜಾರ, ಕೊರಚ ಸಮುದಾಯದ ಕೃಷ್ಣಪ್ಪ, ಆನೇಕಲ್ ಚಿನ್ನಸ್ವಾಮಿ, ಶ್ರೀನಿವಾಸ ಮತ್ತಿತರರು ಹಾಜರಿದ್ದರು.

ಪರಶುರಾಂಪುರದಲ್ಲಿ ರಥೋತ್ಸವ



ಪರಶುರಾಂಪುರ: ಗ್ರಾಮದ ಲಕ್ಷ್ಮೀಕೊಲ್ಲಪುರದಮ್ಮ ದೇವಿಯ ರಥೋತ್ಸವ ಶ್ರದ್ಧಾ ಭಕ್ತಿಯಿಂದ ಭಕ್ತರ ಸಮ್ಮುಖದಲ್ಲಿ ಶುಕ್ರವಾರ ಸಡಗರ ಸಂಭ್ರಮದಿಂದ ಜರುಗಿತು. ರಥಕ್ಕೆ ಬೆಳಗ್ಗೆಯಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮಗಳ ಜತೆಯಲಿ ಅಮ್ಮನವರಿಗೆ ಪೂಜಾ ಕೈಂಕರ್ಯಗಳ ನಡುವೆ ವಿಶೇಷ ಅಲಂಕಾರಗೊಳಿಸಲಾಗಿತ್ತು. ಈ ವರ್ಷ ಮುಕ್ತಿ ಭಾವುಟದ ಹಾರಜಿನಲ್ಲಿ ಗ್ರಾಮದ ಜಯವೀರಚಾರಿ 1.55ಲಕ್ಷ ರೂ.ಗೆ ಪಡೆದರು. ಈ ವೇಳೆಯಲ್ಲಿ ಹೂ ಮಾಲೆ ಜತೆಗೆ ಪ್ರಸಾದವನ್ನ ನೀಡಿ ಗೌರವಿಸಲಾಯಿತು. ಬಳಿಕ ರಥೋತ್ಸವಕ್ಕೆ ಹಿರಿಯರ ಸಮ್ಮುಖದಲ್ಲಿ ಚಾಲನೆ ನೀಡಲಾಯಿತು. ಬಳಿಕ ಒಪ್ಪತ್ತಿನಿಂದ ಭಕ್ತರು ಜಯಘೋಷದೊಂದಿಗೆ ರಥವನ್ನ ಎಳೆದರು. ವಿವಿಧ ಜನಪದ ವಾದ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ರಂಗು ನೀಡಿದವು. ಶಾಸಕ ಟಿ.ರಘುಮೂರ್ತಿ ಸೇರಿದಂತೆ ಇನ್ನಿತರರು ದೇವರ ದರ್ಶನ ಪಡೆದರು.

ಇಂದು ದೇವರ ದಾಸಿಮಯ್ಯ ಜಯಂತಿ ಆಚರಣೆ

ಚಿತ್ರದುರ್ಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಮಾ.23 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ದೇವರ ದಾಸಿಮಯ್ಯ ಜಯಂತಿ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಯೋಜನಾ ಮತ್ತು ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಉದ್ಘಾಟಿಸುವರು. ಶಾಸಕ ಕೆ.ಸಿ.ವೀರೇಂದ್ರ ಅಧ್ಯಕ್ಷತೆ ವಹಿಸುವರು. ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಅಧ್ಯಕ್ಷ ಹಾಗೂ ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ, ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಅಧ್ಯಕ್ಷ ಹಾಗೂ ಹೊಸದುರ್ಗ ಶಾಸಕ ಬಿ.ಜಿ. ಗೋವಿಂದಪ್ಪ ಹಾಗೂ ಸಂಸದ ಗೋವಿಂದ ಎಂ ಕಾರಜೋಳ ಉಪಸ್ಥಿತಿ ವಹಿಸುವರು. ಗೌರವಾನ್ವಿತ ಅತಿಥಿಗಳಾಗಿ ಕರ್ನಾಟಕ ದ್ರಾಕ್ಷಾರಸ ಮಂಡಳಿ ಅಧ್ಯಕ್ಷ ಡಾ.ಬಿ. ಯೋಗೇಶ್ ಬಾಬು, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್, ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗ ಅಧ್ಯಕ್ಷ ಪಿ.ರಘು, ಬಯಲುಸೀಮೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಮೊಳಕಾಲ್ಮುರು ಶಾಸಕ ಎನ್.ವೈ. ಗೋಪಾಲಕೃಷ್ಣ, ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ, ಚಿದಾನಂದ ಎಂ.ಗೌಡ ಭಾಗವಹಿಸುವರು.

ಕೆಎಸ್‌ಆರ್‌ಟಿಸಿ ಬಸ್ ಉರುಳಿ 8 ಮಂದಿಗೆ ಗಾಯ

ಚಿಕ್ಕಮಗಳೂರು: ಕೆಎಸ್‌ಆರ್‌ಟಿಸಿ ಬಸ್ಸೊಂದು ಉರುಳಿಬಿದ್ದು 8 ಮಂದಿ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಆಲ್ದೂರು ಸಮೀಪ ಕೋಡಾಳು ಎಂಬಲ್ಲಿ ನಡೆದಿದೆ. ಕುಕ್ಕನೂರಿನಿಂದ ಧರ್ಮಸ್ಥಳಕ್ಕೆ ತೆರಳುತ್ತಿದ್ದ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ಸು ರಸ್ತೆ ಪಕ್ಕದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಉರುಳಿ ಬಿದ್ದಿದೆ. ಬಸ್‌ನಲ್ಲಿ ಸುಮಾರು 40 ಮಂದಿ ಪ್ರಯಾಣಿಸುತ್ತಿದ್ದು ಈ ಪೈಕಿ 8 ಮಂದಿಗೆ ಗಾಯಗಳಾಗಿವೆ. ಪೊಲೀಸರ ನೆರವಿನೊಂದಿಗೆ ಗಾಯಾಳುಗಳನ್ನು ಚಿಕ್ಕಮಗಳೂರಿನ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಲ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಡಿಕ್ಕಿಯಾಗಿ ವ್ಯಕ್ತಿ ಸಾವು

ಚಿಕ್ಕಮಗಳೂರು: ಮೋಟಾರ್ ಸೈಕಲ್ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೊಬ್ಬರು ಸಾವಪ್ಪಿರುವ ಘಟನೆ ಕಡೂರು ಪಟ್ಟಣದ ಎಮ್ಮೆದೊಡ್ಡಿ ರಸ್ತೆಯಲ್ಲಿ ನಡೆದಿದೆ. ಕೃಷಿಕ ಶೇಖರಪ್ಪ ಎಂಬುವವರು ಮೃತ ವ್ಯಕ್ತಿಯಾಗಿದ್ದು, ಗ್ರಾಮದ ಕರಿಯಮ್ಮ ದೇವಸ್ಥಾನದ ಹತ್ತಿರ ಸಂಜೆ ಕಡೂರು-ಎಮ್ಮೆದೊಡ್ಡಿ ರಸ್ತೆಯಲ್ಲಿ ನಡೆದು ಬರುವಾಗ ಕಡೂರು ಕಡೆಯಿಂದ ಬಂದ ಮೋಟಾರ್ ಸೈಕಲ್ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ತೀವ್ರ ಗಾಯಗೊಂಡ ಶೇಖರಪ್ಪ ಅವರನ್ನು ಕಡೂರು ಆಸ್ಪತ್ರೆಗೆ ಕರೆತಂದು ಹೆಚ್ಚಿನ ಚಿಕಿತ್ಸೆಗೆ ಹಾಸನಕ್ಕೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಘಟನೆಯಲ್ಲಿ ಮೋಟಾರ್ ಸೈಕಲ್ ಚಾಲಕ ಹರಳಘಟ್ಟದ ಮನ್‌ದೀಪ್ ಎಂಬಾತನಿಗೂ ತಲೆಗೆ ಪೆಟ್ಟಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಕಡೂರು ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಗೋಡೌನ್‌ಗೆ ಬೆಂಕಿ

ಚಿಕ್ಕಮಗಳೂರು: ತಾಲ್ಲೂಕಿನ ಕಣತಿ ಗ್ರಾಮದ ಮಂಜುನಾಥ ಗೌಡ ಎಂಬುವವರ ತೋಟದಲ್ಲಿದ್ದ ಗೋಡೌನ್‌ಗೆ ಕಿಡಿಗೇಡಿಗಳು ಬೆಂಕಿ ಹಚ್ಚಿರುವ ಪರಿಣಾಮ ಸುಮಾರು 6 ಲಕ್ಷ ರೂ. ಬೆಲೆಯ ಕೃಷಿ ಹಾಗೂ ತೋಟಗಾರಿಕೆ ಪರಿಕರಗಳು ಸುಟ್ಟು ನಷ್ಟ ಸಂಭವಿಸಿದೆ. ಗೋಡೌನ್‌ನಲ್ಲಿದ್ದ ಟ್ರ್ಯಾಕ್ಟರ್ ಇಂಜಿನ್ ಹಾಗೂ ಆಲ್ಟರ್ನೇಟ್ ಜನರೇಟರ್, ಮೋಟರ್ ಹಾಗೂ ಪಂಪು, 2 ಪೆಂಗ್ವಿನ್ ಜಟ್, 2 ಇಂಚಿನ 20 ಸ್ಪ್ರಿಂಕ್ಲರ್ ಪೈಪ್‌ಗಳು, 10 ಚೀಲ ಡಿಎಪಿ ಗೊಬ್ಬರ, 60 ಲೀಟರ್ ಡೀಸೆಲ್, ಎರಡು ದಿವಾನ್ ಕಾಟ್‌ಗಳು ಸುಟ್ಟು ಹೋಗಿವೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಆಲ್ದೂರು ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಮರಗಸಿ ಮಾಡುವಾಗ ಕಾರ್ಮಿಕ ಸಾವು

ಚಿಕ್ಕಮಗಳೂರು: ಮರಗಸಿ ಮಾಡುವಾಗ ಕಾರ್ಮಿಕರೊಬ್ಬರು ಮೃತಪಟ್ಟ ಘಟನೆ ಜೋಳದಾಳ್ ಪಾಳ್ಯದಲ್ಲಿ ನಡೆದಿದೆ. ಚಿನ್ನರಾಜು ಎಂಬುವವರು ಮೃತ ವ್ಯಕ್ತಿಯಾಗಿದ್ದಾರೆ. ಅವರು ಕಾಫಿ ತೋಟದಲ್ಲಿ ಗರ್ಗೆ ಮರವನ್ನು ಹತ್ತಿ ಕೊಂಬೆಗಳನ್ನು ಕಡಿಯುತ್ತಿರುವಾಗ ಕೆಳಗೆ ಬಿದ್ದು ಗಾಯಗೊಂಡಿದ್ದು, ಕೂಡಲೇ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ತೋಟದ ರೈಟರ್ ಹಾಗೂ ಮೇಸ್ತ್ರಿ ಅವರು ಯಾವುದೇ ಸುರಕ್ಷಾ ಸಾಮಗ್ರಿಗಳನ್ನು ನೀಡದೆ ನಿರ್ಲಕ್ಷ್ಯ ವಹಿಸಿದ್ದೇ ಸಾವಿಗೆ ಕಾರಣ ಎಂದು ಮೃತರ ಸಂಬಂಧಿಕರು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಿದ್ದಾರೆ.

ಮಾಜಿ ಯೋಧ ಪ್ರಕಾಶ್‌ಗೆ ಸತ್ಕಾರ



ಪರಶುರಾಂಪುರ. ದೇಶದ ರಕ್ಷಣೆಗೆ ಅಮೂಲ್ಯ ಸೇವೆ ಮಾಡಿದ ಯೋಧರ ಬದುಕಿನ ಆದರ್ಶ ಯುವ ಸಮುದಾಯಕ್ಕೆ ಮಾದರಿ ಆಗಬೇಕು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೌಳೂರು ಪ್ರಕಾಶ್ ಹೇಳಿದರು.

ಭಾರತೀಯ ಸೇನೆಯಲ್ಲಿ 24 ವರ್ಷ ಸೇವೆ ಸಲ್ಲಿಸಿ ತಾಯ್ನಾಡಿಗೆ ಬಂದಿರುವ ಮಾಜಿ ಯೋಧ ಡಿ.ಎಂ. ಯೋಗೇಶ್ ಅವರನ್ನು ಸಮೀಪದ ಚೌಳೂರು ಸಮೀಪದ ಜೆಜೆ ಕಾಲನಿಯಲ್ಲಿ ಶನಿವಾರ ಸನ್ಮಾನಿಸಿ ಮಾತನಾಡಿದರು.

ಆಧುನಿಕತೆ ಬೆಳೆದಂತೆ ಉದ್ಯೋಗ ಆಸೆಗಳು ಭಿನ್ನವಾಗಿ ಹುಟ್ಟಿಕೊಳ್ಳುತ್ತವೆ. ಈ ನಡುವೆ ಕಡಿಮೆ ಅವಧಿ ಮತ್ತು ಒತ್ತಡ ಇಲ್ಲದ ಕೆಲಸದಲ್ಲಿ ಹಣ ಸಂಪಾದನೆ ಮಾಡುವ ಮಾರ್ಗದಲ್ಲಿ ಯುವ ಜನತೆ ಸಾಗುತ್ತಿದೆ. ಇದು ಸಮಾಜಕ್ಕೆ ಮಾರಕ ಅನಿಸುತ್ತದೆ. ನಮ್ಮ ನೆಲ, ಸಂಸ್ಕೃತಿ, ಭಾಷೆ ಕಾಪಾಡಲುವ ಸಂಕಲ್ಪ ಮಾಡಬೇಕು ಎಂದರು. ಖಂಡೇನಹಳ್ಳಿ ಗ್ರಾಮದ ಬಡ ಕುಟುಂಬದಲ್ಲಿ ಹುಟ್ಟಿದ ಯೋಗೇಶ್ ದೇಶ ಸೇವೆಯಲ್ಲಿ ಸಾರ್ಥಕ ಬದುಕು ಕಂಡಿದ್ದಾರೆ. ಅವರ ಸೇವಾ ಮೌಲ್ಯತೆಯನ್ನು ಸಮಾಜ ಗುರುತಿಸುವ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಗ್ರಾಪಂ ಮಾಜಿ ಸದಸ್ಯೆ ಶ್ರೀದೇವಿ ಪ್ರಕಾಶ್, ಎಸ್ಟಿ ನಿಗಮದ ಚೌಳೂರು ಲಿಂಗಪ್ಪ, ಡಿ.ಟಿ. ಶ್ರೀನಿವಾಸ್, ಶಿಕ್ಷಕ ಜೆ.ಎಂ. ವೆಂಕಟೇಶ್, ಎಚ್. ಮಂಜುನಾಥ್, ಎಂ.ಎನ್. ರಂಗಸ್ವಾಮಿ, ಕುಮಾರ್ ಇದ್ದರು.

ಮರಳು ಅಕ್ರಮ ಸಾಗಣೆ: ವ್ಯಕ್ತಿ ಬಂಧನ

ಚಿಕ್ಕಮಗಳೂರು: ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಆರೋಪದ ಮೇಲೆ ಗೋಣಿಬೀಡು ಪೊಲೀಸರು ಪದ್ಮಕುಮಾರ ಎಂಬಾತನನ್ನು ಬಂಧಿಸಿದ್ದಾರೆ. ಹಾಲೂರು ಗ್ರಾಮದಲ್ಲಿ ಹರಿಯುವ ಹೇಮಾವತಿ ನದಿಯಿಂದ ಮರಳು ತೆಗೆದು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ಪಿಕ್ ಅಪ್ ವಾಹನದಲ್ಲಿ ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದ ಹಿನ್ನೆಲೆಯಲ್ಲಿ ಪೊಲೀಸರು ದಾಳಿ ನಡೆಸಿದ್ದಾರೆ.

ಪಿಕ್ ಅಪ್ ವಾಹನದಲ್ಲಿ 50 ರಿಂದ 60 ಪ್ಲಾಸ್ಟಿಕ್ ಚೀಲಗಳಲ್ಲಿ ಸುಮಾರು 6000 ರೂ. ಮೌಲ್ಯದ ಮರಳು ತುಂಬಿರುವುದು ಕಂಡು ಬಂದಿದೆ ಎಂದು ಗೋಣಿಬೀಡು ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಸೋಲಾರ್ ಬ್ಯಾಟರಿಗಳ ಕಳವು

ಚಿಕ್ಕಮಗಳೂರು: ಬೀದಿ ದೀಪಗಳಿಗೆ ಅಳವಡಿಸಲಾಗಿದ್ದ ಸೋಲಾರ್ ಬ್ಯಾಟರಿಗಳನ್ನು ಕಳವು ಮಾಡಿರುವ ಪ್ರಕರಣ ಶೃಂಗೇರಿ ತಾಲ್ಲೂಕಿನ ಬೇಗಾರು ಗ್ರಾಮ ಪಂಚಾಯಿತಿಯಲ್ಲಿ ನಡೆದಿದೆ. ಈ ಸಂಬಂಧ ಪಂಚಾಯ್ತಿ ಅಧಿಕಾರಿ ಶಿಲ್ಪ ಪೊಲೀಸರಲ್ಲಿ ದೂರು ನೀಡಿದ್ದಾರೆ. ಬೇಗಾರು ಗ್ರಾಮದ ನಡುಬೇಗಾರು, ಬೇಗಾರು ಕೈಮರ, ನಿಲಂದೂರು ಗ್ರಾಮದ ಸ್ಕೂಲುಗುಡ್ಡೆ ರಸ್ತೆಯಲ್ಲಿ ಬೀದಿ ದೀಪಗಳಿಗೆ ಗ್ರಾಮ ಪಂಚಾಯ್ತಿಯಿಂದ ಹಾಕಿರುವ ಸೋಲಾರ್ ಬ್ಯಾಟರಿಗಳನ್ನು ಕಳವು ಮಾಡಲಾಗಿದ್ದು, ಅವುಗಳ ಮೌಲ್ಯ 74,850 ರೂ.ಗಳೆಂದು ತಿಳಿಸಿದ್ದಾರೆ.

ಆಹಾರ ಪದಾರ್ಥ ಕಿಟ್ ವಿತರಣೆ



ಹಿರಿಯೂರು: ದುಡಿಮೆಯ ಸ್ವಲ್ಪ ಭಾಗವನ್ನು ಜನಪರ ಸೇವಾಕಾರ್ಯಗಳಿಗೆ ಉಪಯೋಗಿಸಬೇಕೆಂಬ ಉದ್ದೇಶದಿಂದ ನಮ್ಮ ಜೀವದಾತೆ ಫೌಂಡೇಶನ್ ನಿಂದ ಯುಗಾದಿ ಹಬ್ಬದ ಪ್ರಯುಕ್ತ ಬಡಕುಟುಂಬಗಳಿಗೆ ಆಹಾರದ ಕಿಟ್ ಗಳನ್ನು ವಿತರಿಸಲಾಗುತ್ತಿದೆ ಎಂಬುದಾಗಿ ತಾಲೂಕು ಬಿಜೆಪಿ ಮಂಡಲ ಅಧ್ಯಕ್ಷ ಹಾಗೂ ಜೀವದಾತೆ ಫೌಂಡೇಶನ್ ಸಂಸ್ಥಾಪಕ ಕೆ.ಅಭಿನಂದನ್ ಹೇಳಿದರು.

ತಾಲೂಕಿನ ಧರ್ಮಪುರ ಹೋಬಳಿಯ ಕೃಷ್ಣಾಪುರ ಗ್ರಾಮದ ಎಸ್.ಸಿ.ಕಾಲೋನಿಯ ಬಡಕುಟುಂಬಗಳಿಗೆ ಯುಗಾದಿ ಹಬ್ಬದ ಅಂಗವಾಗಿ ಆಹಾರದ ಕಿಟ್ ವಿತರಿಸಿ, ನಂತರ ಅವರು ಮಾತನಾಡಿದರು. ಮುಖಂಡರಾದ ಯಲ್ಲಪ್ಪ, ನಾಗರಾಜರಾವ್, ದ್ಯಾಮಣ್ಣ, ಮೋಹನ್, ರವಿ, ರಾಕೇಶ್, ಗುರುಲಿಂಗಪ್ಪ, ದೇವರಾಜ್, ದಿಲೀಪ್, ಶಿವಣ್ಣ, ಗುರುಮೂರ್ತಿ, ನಾಗರಾಜ್, ಭಾರತ್, ದೇವೇಂದ್ರ, ದೇವೇಂದ್ರಪ್ಪ, ಹೋಬಳೇಶ್, ಲಕ್ಷ್ಮಣ, ಅಶ್ವತ್, ಪ್ರದೀಪ ಭಾಗವಹಿಸಿದ್ದರು.

ಗ್ರಾಹಕರನ್ನು ಸೆಳೆಯುವ ಚಾಕಚಕ್ಯತೆ ವ್ಯಾಪಾರಿಯಲ್ಲಿ ಇರಬೇಕು

ಹೊಸದುರ್ಗ: ನಾವು ಮಲಗಿದ ಮೇಲೆ ಕಾಣುವ ಕನಸು ನಮ್ಮ ನಿಜ ಜೀವನದಲ್ಲಿ ನನಸಾಗುವುದಿಲ್ಲ, ನಾವು ಮಲಗದೆ ಕಾಣುವ ಕನಸನ್ನು ನನಸು ಮಾಡಿಕೊಳ್ಳಲು ನಿದ್ದೆ ಮಾಡದೆ ನಮ್ಮ ಗುರಿಯಿಡೆಗೆ ಸಾಗಿದಾಗ ನಾವು ಅದರಲ್ಲಿ ಯಶಸ್ವಿಯಾಗಬಹುದು ಎಂದು ಯುವ ಉದ್ಯಮಿ ಸದ್ಗುರು ಪ್ರದೀಪ್ ತಿಳಿಸಿದರು.

ನಗರದ ಜಯದೇವ ಕನ್ವೆನ್ಷನ್ ಹಾಲ್‌ನಲ್ಲಿ ಕರ್ನಾಟಕ ಆರ್ಯವೈಶ್ಯ ಮಂಡಳಿ, ಸದ್ಗುರು ಆಯುರ್ವೇದ ಉತ್ಪನ್ನಗಳು ಹಾಗೂ ವಾಸವಿ ಯುವಜನ ಸಂಘದ ಸಂಯುಕ್ತಾಶ್ರಯದಲ್ಲಿ ಆರ್ಯವೈಶ್ಯ ವ್ಯಾಪಾರ ಬೆಳವಣಿಗೆಯ ಕುರಿತು ಹಮ್ಮಿಕೊಂಡಿದ್ದ ಕಾರ್ಯಗಾರದಲ್ಲಿ ಮಾತನಾಡಿದರು.

ಅತಿಯಾದ ವಿದೇಶಿ ಬಹು ರಾಷ್ಟ್ರೀಯ ಕಂಪನಿಯ ಹಾವಳಿಯಿಂದ ಚಿಲ್ಲರೆ ವ್ಯಾಪಾರ ಮಾಡಿ ಬದುಕು ನಡೆಸುತ್ತಿದ್ದ ಲಕ್ಷಾಂತರ ಕುಟುಂಬಗಳು ಇಂದು ಅವಸಾನದ ಅಂಚಿನಲ್ಲಿದ್ದು, ವ್ಯಾಪಾರಿಗಳು ಅತಿ ಚಾಣಾಕ್ಷತನದ ನಡೆಯಿಂದ ಗ್ರಾಹಕ ನೊಂದಿಗೆ ಪ್ರೀತಿಯಿಂದ ವ್ಯವಹರಿಸಿ ಗ್ರಾಹಕನ ಮೆಚ್ಚುಗೆಗೆ ಪಾತ್ರವಾದಾಗ ಮಾತ್ರ ಗ್ರಾಹಕರು ಹೆಚ್ಚು ಹೆಚ್ಚು ತಮ್ಮ ಅಂಗಡಿಗಳಿಗೆ ಬಂದು ವ್ಯಾಪಾರ ವಹಿವಾಟು ಮಾಡುತ್ತಾರೆ ಎಂದರು.



ಅವರು, ಕಳೆದ 25 ವರ್ಷಗಳ ಹಿಂದೆ ನಮ್ಮ ಹಿರಿಯರು ತಮ್ಮ ಬದುಕಿನದ್ದಕ್ಕೂ ವ್ಯಾಪಾರವನ್ನೇ ಮಾಡಿ ಜೀವನ ನಡೆಸುತ್ತಿದ್ದರು. ಪ್ರಸ್ತುತ ಬದಲಾದ ಸನ್ನಿವೇಶದಲ್ಲಿ ಎಲ್ಲ ವರ್ಗದವರು ವ್ಯಾಪಾರವನ್ನು ಹೆಚ್ಚು ಹೆಚ್ಚು ಮಾಡುತ್ತಿದ್ದು ಆರ್ಯವೈಶ್ಯ ಸಮುದಾಯದವರು ಹಳೆಯ ಪದ್ಧತಿಯ ವ್ಯಾಪಾರವನ್ನು ಬಿಟ್ಟು ನವೀನ ಮಾದರಿಯ ವ್ಯಾಪಾರದ ಬದಲಾವಣೆ ಮಾಡಿಕೊಳ್ಳುವ ಅನಿವಾರ್ಯತೆ ಬಂದಿದೆ. ನಿಮ್ಮ ನಿಮ್ಮ ವ್ಯಾಪಾರ ವಹಿವಾಟಿಗೆ ಸಾಮಾಜಿಕ ಜಲತಾಣಗಳನ್ನ ಬಳಸಿಕೊಂಡು ಜಾಹೀರಾತುಗಳ ಮೂಲಕ ಯಾವುದೇ ಖರ್ಚು ಇಲ್ಲದೆ ವ್ಯಾಪಾರವನ್ನು ವೃದ್ಧಿಸಿಕೊಳ್ಳಬಹುದು ಎಂದು ಯುವಕರಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಲವಕುಮಾರ, ಪುರಸಭಾ ಮಾಜಿ ಸದಸ್ಯೆ ಡಾ.ಸ್ವಾತಿ ಪ್ರದೀಪ, ಹೊಸದುರ್ಗ ಆರ್ಯವೈಶ್ಯ ಸಮಾಜದ ಅಧ್ಯಕ್ಷ ಪ್ರಕಾಶ, ಲವಕುಮಾರ, ನವೀನ್ ಲಾಲಾ, ಅರ್ಜುನ, ವಿವೇಕ, ವಿಜಯ್, ಚಿರು ಹಾಗೂ ಶ್ರೀರಾಂಪುರ ಹಿರಿಯೂರು ಅಜ್ಜಂಪುರ ಕಡೂರು ಯುವಜನ ಸಂಘದ ಸದಸ್ಯರು ಇದ್ದರು.

15 ದಿನಗಳ ಕಾಲ ನಡೆಯಲಿರುವ ಜಾತ್ರೆ | ಐತಿಹಾಸಿಕ ಉತ್ಸವಕ್ಕೆ ಸಾಕ್ಷಿಯಾಗಲಿದ್ದಾರೆ ಲಕ್ಷಾಂತರ ಭಕ್ತರು

27ರಿಂದ ಬರಗೇರಮ್ಮ ಜಾತ್ರಾ ಮಹೋತ್ಸವ

ಚಿತ್ರದುರ್ಗ: ನಗರದೇವತೆ ಬರಗೇರಮ್ಮ ಜಾತ್ರಾ ಮಹೋತ್ಸವ ಮಾ.27 ರಂದು ರಾತ್ರಿ 8ಕ್ಕೆ ಕಂಕಣಧಾರಣೆ, ಮಧುವಣಗಿತ್ತಿ ಪೂಜಾ ಕೈಂಕರ್ಯದೊಂದಿಗೆ ಆರಂಭವಾಗಲಿದೆ.

ಅಕ್ಕ-ತಂಗಿಯರಾದ ಚಿತ್ರದುರ್ಗದ ರಕ್ಷಕ ದೇವತೆಗಳೆಂದೇ ಖ್ಯಾತಿ ಪಡೆದ ನವದುರ್ಗೆಯರ ಪೈಕಿ ಬರಗೇರಮ್ಮ ಪ್ರಮುಖ ಶಕ್ತಿದೇವತೆಯಾಗಿದ್ದು, ಚಿತ್ರದುರ್ಗ ಅಷ್ಟೇ ಅಲ್ಲದೆ, ರಾಜ್ಯದ ವಿವಿಧೆಡೆಯ ಭಕ್ತರು ದೇವಿಗೆ ನಡೆದುಕೊಳ್ಳುತ್ತಾರೆ.

ಪ್ರತಿ ವರ್ಷ ಯುಗಾದಿ ಬಳಿಕ ದುರ್ಗದ ಅಧಿದೇವತೆ ಏಕನಾಥೇಶ್ವರಿ ದೇವಿಯ ಜಾತ್ರೆಗೆ ಸಾರು ಹಾಕಿದ ನಂತರವೇ ಜಿಲ್ಲೆ ಮತ್ತು ತಾಲೂಕಿನ 63 ದೇವಿಯರ ಜಾತ್ರೆ, ರಥೋತ್ಸವ ಜರುಗುತ್ತದೆ. ಇದೇ ವೇಳೆ ಬರಗೇರಮ್ಮನ ಜಾತ್ರಾ ಮಹೋತ್ಸವವೂ ನಡೆಯಲಿದೆ.

2026ನೇ ಸಾಲಿನ ದೇವಿಯ ಜಾತ್ರೆಯೂ 15 ದಿನ ಜರುಗಲಿದೆ. ಮಾ.31 ರಂದು ರಾತ್ರಿ 8ಕ್ಕೆ ದೇವಿಯ ಉತ್ಸವ ಮೂರ್ತಿಯನ್ನು ಬುರುಜನಹಟ್ಟಿಯ ದೇಗುಲದಿಂದ ಊರ ಹೊರಗಿನ ದೇಗುಲಕ್ಕೆ ಕರೆ ತರುವುದು. ನಂತರ ಕರಿಯಟ್ಟಿಯಲ್ಲಿನ ಭಕ್ತರಿಂದ ಪೂಜೆ ಸ್ವೀಕಾರ.

ಏ.1 ರಂದು ಬೆಳಗ್ಗೆ 9ಕ್ಕೆ ಚಂದ್ರವಳ್ಳಿಯಲ್ಲಿ ದೇವಿಗೆ ಗಂಗಾಪೂಜೆ, ಕುಂಭಾಭಿಷೇಕ ನಂತರ ದೇಗುಲಕ್ಕೆ ಆಗಮನ. ಅನ್ನಸಂತರ್ಪಣೆ ನಂತರ ರಾತ್ರಿ ಈರಜ್ಜನಹಟ್ಟಿ ಹಾಗೂ ನಾಯಕರ ಸೊಲ್ಲಾಪುರ, ಐಯುಡಿಪಿ ಲೇಔಟ್, ಸರಸ್ವತಿಪುರದಲ್ಲಿ ಭಕ್ತರಿಂದ ಪೂಜೆ ಸ್ವೀಕಾರ.



ಏ.2 ರಂದು ದೇವಿಯು ಕೆಳಗಿನ ಸೊಲ್ಲಾಪುರ, ಗೊಲ್ಲರಹಟ್ಟಿ, ಟಗರನಹಟ್ಟಿ, ದೇವರಹಟ್ಟಿ, ಜಾಲಿಕಟ್ಟೆ ಮತ್ತು ಮಾಳಪ್ಪನಹಟ್ಟಿ ಭಕ್ತರ ಮನೆಗಳಲ್ಲಿ ಪೂಜೆ ಸ್ವೀಕರಿಸಿ ದೇಗುಲಕ್ಕೆ ಮರಳುವುದು. ಅಂದು ಬೆಳಗ್ಗೆ 7ಕ್ಕೆ ಪಿಳ್ಳೆಕೇರನಹಳ್ಳಿ, ಬಸವೇಶ್ವರ, ವಿದ್ಯಾ, ಮಾರುತಿ, ನೆಹರು, ಚೌಡೇಶ್ವರಿ ನಗರ, ಮೆದೇಹಳ್ಳಿ ರಸ್ತೆ, ಬಿವಿಕೆಎಸ್ ಲೇ ಔಟ್, ಲಕ್ಷ್ಮೀಬಜಾರ್, ಚೇಳುಗುಡ್ಡ, ಧವಳಗಿರಿ ಬಡಾವಣೆ ಭಕ್ತರ ಮನೆಗಳಲ್ಲಿ ಪೂಜೆ ಸ್ವೀಕಾರ.

ಏ.3 ರಂದು ದೇವಿಯನ್ನು ವಿಶೇಷವಾಗಿ ಅಲಂಕರಿಸಿದ ನಂತರ ಬೆಳಗ್ಗೆ 9.30 ರಿಂದ ಸಂಜೆ 8 ರವರೆಗೂ ಸಕಲ ವಾದ್ಯಗಳೊಡನೆ ನಗರದ ರಾಜ ಬೀದಿಗಳಲ್ಲಿ ರಥೋತ್ಸವ ಮೆರವಣಿಗೆ, ಭಕ್ತರಿಂದ ಮೀಸಲು ಸಮರ್ಪಣೆ, ಹರಕೆ ಸಲ್ಲಿಕೆಯಾಗಲಿದೆ. ಸಂಜೆ 5.30ಕ್ಕೆ ಬಾರ್‌ಲೈನ್, ತಿಪ್ಪಜ್ಜಿ ಸರ್ಕಲ್, ಮುನ್ಸಿಪಲ್ ಕಾಲನಿ, ಚರ್ಚ್ ಬಡಾವಣೆ, ಕೆಳಗೋಟೆ ಪ್ರದೇಶದ ಭಕ್ತರಿಂದ ಪೂಜೆ ಸ್ವೀಕರಿಸಿದ ನಂತರ ದೇಗುಲಕ್ಕೆ ಮರಳುವುದು.

ಏ.4 ರಂದು ಬೆಳಗ್ಗೆ 8ಕ್ಕೆ ದೇಗುಲದಿಂದ ಹೊರಟು ದರ್ಜಿ ಕಾಲಾನಿ, ಗೋಪಾಲಪುರ, ಜೆಸಿಆರ್ ಹಾಗೂ ವಿ.ಪಿ. ಬಡಾವಣೆ ಭಕ್ತರ ಮನೆಗಳಲ್ಲಿ ಪೂಜೆ ಸ್ವೀಕರಿಸಿ, ಸಂಜೆ 6.30ಕ್ಕೆ ದೇಗುಲ ಮುಂಭಾಗ ಸಾವಿರಾರು ಭಕ್ತರ ಸಮ್ಮುಖದಲ್ಲಿ ದೇವಿಯ ಸಿಡಿ ಮಹೋತ್ಸವ ಜರುಗಲಿದೆ. ಏ.05 ರಂದು ಆಗಸನಕಲ್ಲು, ರೈಲ್ವೆ ನಿಲ್ದಾಣ, ಗಾರೆಹಟ್ಟಿ, ಕವಾಡಿಗರಹಟ್ಟಿ, ಮಠದ ಕುರುಬರಹಟ್ಟಿ, ಕೋಡನಹಟ್ಟಿ, ಹನುಮಂತ ನಗರ, ಕಲ್ಲಹಟ್ಟಿಯ ಭಕ್ತರ ಮನೆಗಳಲ್ಲಿ ಪೂಜೆ ಸ್ವೀಕಾರ.

ಏ.6 ರಂದು ದೇವಿಗೆ ಬೆಳಗ್ಗೆ 8ಕ್ಕೆ ವಿಶೇಷ ಭಂಡಾರದ ಪೂಜೆ, ರಾತ್ರಿ 8ಕ್ಕೆ ಓಕಳಿ ಸೇವೆ, ಬುರುಜನಹಟ್ಟಿ ಪ್ರವೇಶದ ನಂತರ ಅಲ್ಲಿನ ಭಕ್ತರ ಮನೆಗಳಲ್ಲಿ ಪೂಜೆ ಸ್ವೀಕಾರ. ಏ.08 ರಂದು ಸುಣ್ಣಗಾರಹಟ್ಟಿ, ಅಗಳೇರಿ, ಕೋಳಿ ಬುರುಜನಹಟ್ಟಿ, ಕಾಮನಬಾವಿ ಬಡಾವಣೆ, ಜೋಗಿಮಟ್ಟಿ ರಸ್ತೆ, ಪ್ರಶಾಂತ ನಗರ, ಜಿಲ್ಲಾ ಕ್ರೀಡಾಂಗಣ ರಸ್ತೆ, ಜಟ್ ಪಟ್ ನಗರ, ವಿವೇಕಾನಂದ ನಗರ, ಟೀಚರ್ಸ್ ಕಾಲನಿ ಸೇರಿ ಸುತ್ತಮುತ್ತ ಭಕ್ತರ ಮನೆಯಲ್ಲಿ ಪೂಜೆ ಸ್ವೀಕಾರ. ಏ.9 ರಂದು ಬ್ರಾಹ್ಮಿ ಮುಹೂರ್ತದ ವೇಳೆ ಸಿಹಿನೀರು ಹೊಂಡದಲ್ಲಿ ಗಂಗಾಪೂಜೆಯ ನಂತರ ಗುಡಿತುಂಬುವ ಕಾರ್ಯಕ್ರಮದ ಮೂಲಕ ದೇವಿಯನ್ನು ಸ್ವಸ್ಥಾನಕ್ಕೆ ಕರೆತರಲಾಗುವುದು. 10 ರಂದು ಕಂಕಣ ವಿಸರ್ಜನೆ, ಜೋಗೂಟದೊಂದಿಗೆ ಜಾತ್ರೆ ಮುಕ್ತಾಯವಾಗಲಿದೆ.

ಯುವ ಕವಿಗೋಷ್ಠಿಗೆ ಕವನ ಆಹ್ವಾನ

ಶಿವಮೊಗ್ಗ: ಆಕಾಶವಾಣಿ ಭದ್ರಾವತಿ ಕೇಂದ್ರದಿಂದ ಜಿಲ್ಲೆಯ ವಿವಿಧ ಕಾಲೇಜು ವಿದ್ಯಾರ್ಥಿಗಳು ಹಾಗೂ ಯುವಕ - ಯುವತಿಯರಿಂದ ವಸಂತೋತ್ಸವ ಯುವಕವಿ ಗೋಷ್ಠಿಗೆ ಕವನಗಳನ್ನು ಆಹ್ವಾನಿಸಲಾಗಿದೆ. ಕವನ ಕಳುಹಿಸುವವರು ವಸಂತ ಮಾಸದಲ್ಲಿ ಪ್ರಕೃತಿಯಲ್ಲಾಗುವ ಬದಲಾವಣೆ ಹಾಗೂ ವಸಂತಮಾಸಕ್ಕೆ ಸಂಬಂಧಿಸಿ ಕವನಗಳನ್ನು ಕಳುಹಿಸಬಹುದಾಗಿದೆ. 18 ರಿಂದ 35 ರ ವಯೋಮಾನದವರು ಕವಿಗೋಷ್ಠಿಗೆ ಕವನಗಳನ್ನು ಏಪ್ರಿಲ್ 15 ರೊಳಗಾಗಿ ನಿಲಯ ನಿರ್ದೇಶಕರು, ವಸಂತೋತ್ಸವ ಯುವಕವಿಗೋಷ್ಠಿ ವಿಭಾಗ, ಆಕಾಶವಾಣಿ, ಜೆ.ಪಿ.ಎಸ್.ಕಾಲೋನಿ ಭದ್ರಾವತಿ-577302 ಗೆ ಕಳುಹಿಸಬಹುದಾಗಿದೆ. ಆಯ್ಕೆಯಾದ ಕವನಗಳನ್ನು ಬರೆದ ಕವಿಗಳೆ ಶ್ರೋತೃಗಳ ಸಮ್ಮುಖದಲ್ಲಿ ಪ್ರಸ್ತುತ ಪಡಿಸಲು ಅವಕಾಶ ಕಲ್ಪಿಸಲಾಗುವುದು ಹಾಗು ಕವನಗಳನ್ನು ಗಾಯನ ರೂಪದಲ್ಲಿ ಆಕಾಶವಾಣಿ ಕಲಾವಿದರಿಂದ ವೇದಿಕೆಯಲ್ಲಿ ಪ್ರಸ್ತುತಪಡಿಸಲಾಗುವುದು ಎಂದು ಕಾರ್ಯಕ್ರಮ ಮುಖ್ಯಸ್ಥ ಎಸ್.ಆರ್. ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ದಾಸಿಮಯ್ಯ ಜಯಂತಿ

ಶಿವಮೊಗ್ಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನೇಕಾರ ಸಮುದಾಯಗಳ ಒಕ್ಕೂಟ ಇವರ ಸಂಯುಕ್ತಾಶ್ರಯದಲ್ಲಿ ಮಾ. 23 ರ ಬೆಳಗ್ಗೆ 11 ಗಂಟೆಗೆ ನಗರದ ಕುವೆಂಪು ರಂಗಮಂದಿರದಲ್ಲಿ ದೇವರ ದಾಸಿಮಯ್ಯ ಜಯಂತಿ ಏರ್ಪಡಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್. ಮಧುಬಂಗಾರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಎಸ್.ಎನ್. ಚನ್ನಬಸಪ್ಪ ಅಧ್ಯಕ್ಷತೆ ವಹಿಸುವರು. ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿ.ಪಂ ಸಿಇಓ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ಮಹಾನಗರ ಪಾಲಿಕೆ ಆಯುಕ್ತರು ಮತ್ತು ಇನ್ನಿತರ ಗಣ್ಯರು, ಅಧಿಕಾರಿಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಹೊನ್ನಾಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ. ಶಿವಪ್ಪ ಡಿ. ಇವರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಪೂರ್ವಸಭೆಯಲ್ಲಿ ಸಂಸದ ರಾಘವೇಂದ್ರ

ಉತ್ಸವದಲ್ಲಿ ಎಲ್ಲರೂ ಭಾಗಿಗಳಾಗಲಿ

ಶಿವಮೊಗ್ಗ : ಪಂಚಪೀಠಾಧೀಶ್ವರರ ಅಡ್ಡ ಪಲ್ಲಕ್ಕಿ ಉತ್ಸವದಲ್ಲಿ ಪ್ರತಿಯೊಬ್ಬರೂ ಭಾಗಿಗಳಾಗಿ ಇತಿಹಾಸ ಪುಟಗಳಲ್ಲಿ ಬರೆದಿಡುವಂತಹ ಕಾರ್ಯಕ್ರಮ ಮಾಡೋಣವೆಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಸಮಿತಿ ನಗರದ ಅಂಬೇಡ್ಕರ್ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಅಡ್ಡಪಲ್ಲಕ್ಕಿ ಮಹೋತ್ಸವ, ಧರ್ಮ ಜಾಗೃತಿ ಸಭೆ ಹಾಗೂ ಬಿ.ಎಸ್. ಯಡಿಯೂರಪ್ಪ ಅಭಿನಂದನಾ ಸಮಿತಿಯ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಾಜಿ ಶಾಸಕ ಆಯನೂರು ಮಂಜುನಾಥ ಮಾತನಾಡಿ, ಅಡ್ಡಪಲ್ಲಕ್ಕಿ ಉತ್ಸವಕ್ಕೆ ವಿಶೇಷವಾದ ಮಾನ್ಯತೆ ಇದೆ. ಇಡೀ ವೀರಶೈವ ಸಮಾಜದ ಪ್ರತಿಷ್ಠೆ ಈ ಕಾರ್ಯಕ್ರಮದಲ್ಲಿದೆ. ಸಮಾಜ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕವಾಗಿ ಪ್ರಾಬಲ್ಯವಾಗಿದೆ. ಹೀಗಾಗಿ ಉತ್ಸವದಲ್ಲಿ ವಿಶೇಷ ವಾತಾವರಣ ಸೃಷ್ಟಿ ಮಾಡಬೇಕಿದೆ ಎಂದರು.

ಪರಸ್ಪರ ಸಮಾಲೋಚನೆ ಮೂಲಕ ಕೆಲಸ ಮಾಡಬೇಕಿದೆ. ಯಾರೋ ಒಬ್ಬರು ಹಣ ಸಂಗ್ರಹ ಮಾಡುತ್ತಾರೆ. ಅವರೇ ಖರ್ಚು ಮಾಡುತ್ತಾರೆ ಎನ್ನುವುದು ಬೇಡ. ಎಲ್ಲರೂ ಹಣ ಸಂಗ್ರಹ ಮಾಡಿಕೊಟ್ಟರೆ ಪದಾಧಿಕಾರಿಗಳ ಜವಾಬ್ದಾರಿಯೂ ಕಡಿಮೆಯಾಗಲಿದೆ ಎಂದರು.

ಸಮಿತಿಯ ಗೌರವಾಧ್ಯಕ್ಷರೂ ಆದ ಮಾಜಿ ಶಾಸಕ ಎಸ್. ರುದ್ರೇಗೌಡ ಮಾತನಾಡಿ, ಮಹಿಳೆಯರು ಹೆಚ್ಚು ಭಾಗಿಯಾಗುವಂತೆ ಸಮಿತಿಯಿಂದ ನೋಡಿಕೊಳ್ಳಬೇಕಿದೆ. ಯಡಿಯೂರಪ್ಪನವರಿಗೆ ಸನ್ಮಾನ ಮಾಡುವುದರಿಂದ ಅದು ಯಾವ ರೀತಿ ಇರಬೇಕು. ಯಾರು ಅಭಿನಂದನೆ ಭಾಷಣ ಮಾಡಬೇಕೆಂಬುದರ ಬಗ್ಗೆಯೂ ಚಿಂತನೆ ನಡೆಯಬೇಕಿದೆ. ಸೊಸೈಟಿಗೆ ನೂರು ವರ್ಷ ಸಂದಿರುವ ಹಿನ್ನೆಲೆಯಲ್ಲಿ ಬಸವೇಶ್ವರರ ಭಾವ ಚಿತ್ರವನ್ನು ವಿಶೇಷವಾಗಿ ಅಳವಡಿಸಬೇಕಿದೆ ಎಂದರು.



ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ.ಎಸ್. ಷಡಾಕ್ಷರಿ ಉತ್ಸವಕ್ಕೆ ನಡೆಸಿದ ಸಿದ್ಧತೆ ಕುರಿತು ಮಾಹಿತಿ ನೀಡಿ, ರಶೀದಿ ಪುಸ್ತಕ, ಮನೆಮನೆಗಳಿಗೆ ನೀಡುವ ಸ್ಟಿಕ್ಕರ್ ಮೊದಲಾದವುಗಳನ್ನು ಸಿದ್ಧಪಡಿಸಲಾಗಿದೆ ಎಂದರು.

ಬಿಳಿಕಿ ಹಿರೇಮಠದ ಶ್ರೀ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ, ಯಡಿಯೂರು ಮಠದ ಶ್ರೀ ರೇಣುಕ ಶಿವಾಚಾರ್ಯ ಸ್ವಾಮೀಜಿ, ಮಳಲಿ ಮಠದ ಶ್ರೀ ಡಾ.ಗುರು ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ, ತಾವರೆಕೆರೆ ಶಿಲಾಮಠದ ಶ್ರೀ ಅಭಿನವ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಭೆಯಲ್ಲಿ ಸಮಿತಿ ಅಧ್ಯಕ್ಷ ಎಸ್.ಎಸ್. ಜ್ಯೋತಿ ಪ್ರಕಾಶ್, ಶಾಸಕರಾದ ಎಸ್.ಎನ್. ಚನ್ನಬಸಪ್ಪ, ಡಾ. ಧನಂಜಯ ಸರ್ಜಿ, ಖಜಾಂಚಿ ಎಸ್.ಪಿ. ದಿನೇಶ್, ಪ್ರಮುಖರಾದ ಸಂತೋಷ್ ಬಳ್ಳೆಕೆರೆ, ಭದ್ರಾವತಿಯ ಜಗನ್ನಾಥ, ಶಾಂತಾ ಆನಂದ, ರುದ್ರಮುನಿ ಸಜ್ಜನ್ ಇದ್ದರು.

ಇದಕ್ಕೂ ಮೊದಲು ವೀರಶೈವ ಕಲ್ಯಾಣ ಮಂದಿರದಲ್ಲಿ ಅಡ್ಡಪಲ್ಲಕ್ಕಿ ಮಹೋತ್ಸವ ಸಮಿತಿಯ ನೂತನ ಕಚೇರಿ ಉದ್ಘಾಟಿಸಲಾಯಿತು.

> **ಯಾವುದೇ ಕುಂದುಕೊರತೆಯಾಗದಂತೆ ಕಾರ್ಯಕ್ರಮ ಮಾಡಬೇಕಿದೆ. ಮೊದಲು ಜನರ ಮಧ್ಯೆ ಹೋಗಿ ಅವರ ಸಹಕಾರ, ಸಲಹೆ ಪಡೆದು ಬಳಿಕ ಸಮಿತಿಯಿಂದ ನಿರ್ಧಾರ ತೆಗೆದುಕೊಂಡು ಚಂದಗಾಣಿಸುವಂತಾಗಬೇಕು.**
> ■ ಬಿ.ವೈ. ರಾಘವೇಂದ್ರ

ಸಿಂಧೂರ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿದ ರಾಘವೇಂದ್ರ

ಸಮರ್ಥ ನಾಯಕತ್ವದಿಂದಾಗಿ ಯುದ್ಧದ ಭೀತಿ ಇಲ್ಲ

ಶಿಕಾರಿಪುರ : ಜಗತ್ತಿನ ಹಲವು ದೇಶಗಳು ಯುದ್ಧದ ಆತಂಕದ ಸ್ಥಿತಿಯಲ್ಲಿದ್ದು, ಶಾಂತಿ ನೆಮ್ಮದಿ ಇಲ್ಲದೆ ಅನಿಶ್ಚಿತತೆಯ ಸಂದಿಗ್ಧ ಸ್ಥಿತಿ ಎದುರಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿರವರ ಸಮರ್ಥ ನಾಯಕತ್ವದಿಂದಾಗಿ ಭಾರತದಲ್ಲಿ ಮಾತ್ರ ಯುದ್ಧದ ಭೀತಿಯ ವಾತಾವರಣದಿಂದ ಮುಕ್ತವಾಗಿದ್ದೇವೆ ಎಂದು ಸಂಸದ ಬಿ.ವೈ. ರಾಘವೇಂದ್ರ ತಿಳಿಸಿದರು.



ಭಾನುವಾರ ಪಟ್ಟಣದ ವಿನಾಯಕ ನಗರದಲ್ಲಿನ ವಿಶ್ವಕರ್ಮ ಸಮುದಾಯ ಭವನದಲ್ಲಿ ಪ್ರೇರಣ ಫಿಟ್ನೆಸ್ ಸೆಂಟರ್ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಆಪರೇಷನ್ ಸಿಂಧೂರ್‌ಗೆ ಗೌರವ ಸಲ್ಲಿಸುವ 'ಸಿಂಧೂರ ಸಂಭ್ರಮ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕುಟುಂಬ ನಿರ್ವಹಣೆಗೆ ಮಾತ್ರ ಸೀಮಿತವಾಗಿದ್ದ ಮಹಿಳೆಯರು ಪ್ರಸ್ತುತ ಎಲ್ಲ ಕ್ಷೇತ್ರದಲ್ಲಿ ಅಸಾಮಾನ್ಯ ಸಾಧನೆಯ ಮೂಲಕ ಸದೃಢ ಸಮಾಜ ನಿರ್ಮಾಣದಲ್ಲಿ ಬಹು ಮುಖ್ಯ ಪಾತ್ರ ವಹಿಸಿದ್ದಾರೆ ಎಂದು ಶ್ಲಾಘಿಸಿದ ಅವರು ಮಹಿಳೆಯರಲ್ಲಿನ ಛಲ, ಆತ್ಮವಿಶ್ವಾಸ, ತಾಳ್ಮೆ ಸಾಧನೆಗೆ ಪ್ರತೀಕವಾಗಿದ್ದು ಪುರುಷ ಪ್ರಧಾನ ಸಮಾಜ ಮಹಿಳೆಯರಿಗೆ ಅವಕಾಶ ನೀಡಿದಲ್ಲಿ ಸರ್ವ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಸಾಬೀತುಪಡಿಸಲಿದ್ದಾರೆ ಎಂದರು.

ಮಹಿಳೆಯರಿಗೆ ಸರ್ವ ಕ್ಷೇತ್ರದಲ್ಲಿ ಅವಕಾಶ ಕಲ್ಪಿಸಿಕೊಡುವ ದಿಸೆಯಲ್ಲಿ ಕೇಂದ್ರ ಸರ್ಕಾರ ಮೀಸಲಾತಿಯನ್ನು ಶೇ.30ಕ್ಕೆ ಹೆಚ್ಚಿಸಲು ನಿರ್ಧರಿಸಿದ್ದು ಈ ದಿಸೆಯಲ್ಲಿ ಅಧಿವೇಶನದಲ್ಲಿ ಸಮಗ್ರ ಚರ್ಚೆ ಮೂಲಕ ಮಂಡನೆಯಾಗಲಿದೆ. ತೊಟ್ಟಿಲು ತೂಗುವ ಕೈ ಕೇವಲ ಕುಟುಂಬ ನಿರ್ವಹಣೆ ಮಾತ್ರವಲ್ಲದೆ ದೇಶವನ್ನು ಮುನ್ನಡೆಸಬಲ್ಲರು. ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಸಹಿತ ಹಲವು ಮಹಿಳೆಯರು ಸಂವಿಧಾನಾತ್ಮಕವಾಗಿರುವ ದೇಶದ ವಿವಿಧ ಉನ್ನತ ಸ್ಥಾನವನ್ನು ಸಮರ್ಥವಾಗಿ ನಿಭಾಯಿಸಿ ಮಾದರಿಯಾಗಿದ್ದಾರೆ. ಸೈನ್ಯದಲ್ಲಿ ಅತ್ಯಂತ ಉತ್ಸಾಹದಿಂದ ದೇಶಕ್ಕೆ ಭದ್ರತೆಯನ್ನು ಒದಗಿಸುತ್ತಿರುವ ಮಹಿಳೆಯರು ಅಸಾಮಾನ್ಯ ಧೈರ್ಯ ಸಾಹಸ ಪ್ರವೃತ್ತಿಯಿಂದ ಪುರುಷ ಸಮಾಜಕ್ಕೆ ಪ್ರೇರಣೆಯಾಗಿದ್ದು ಸಮಾಜದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಮಹಿಳೆಯರ ಶಕ್ತಿ ಮತ್ತು ಸಾಧನೆಯನ್ನು ಸಂಭ್ರಮಿಸುವ ಇಂತಹ ಕಾರ್ಯಕ್ರಮಗಳು ಸ್ತುತ್ಯಾರ್ಹ ಎಂದು ತಿಳಿಸಿದರು.

ಪ್ರೇರಣ ಫಿಟ್ನೆಸ್ ಸೆಂಟರ್ ಮೂಲಕ ಸ್ಥಳೀಯ ಉತ್ಸಾಹಿ ಮಹಿಳೆಯರು ಸಂಘಟಿತರಾಗಿ ಸಮಾಜಮುಖಿ ಕಾರ್ಯದಿಂದ ಮಾದರಿ ಯಾಗಿದ್ದಾರೆ. ಪಹಲ್ಗಾಂನಲ್ಲಿ ನಡೆದ ಭಯೋತ್ಪಾದಕರ ದಾಳಿ ನಂತರದಲ್ಲಿ ಭಾರತೀಯ ಸೇನೆ ಸಿಂಧೂರ ಕಾರ್ಯಾಚರಣೆ ಮೂಲಕ ನೀಡಿದ ದಿಟ್ಟ ಉತ್ತರವನ್ನು ಸಿಂಧೂರ ಸಂಭ್ರಮದ ಹೆಸರಿನಲ್ಲಿ ಸೈನ್ಯದ ಕಾರ್ಯಾಚರಣೆಯನ್ನು ಮಹಿಳೆಯರು ಅತ್ಯಂತ ಮನೋಜ್ಞವಾಗಿ ಅಭಿನಯಿಸಿ ದೇಶಭಕ್ತಿ ಹೆಚ್ಚಿಸಲು ಪ್ರಯತ್ನಿಸಿದ್ದಾರೆ ಎಂದು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಸಂಸದ ರಾಘವೇಂದ್ರರನ್ನು ಸನ್ಮಾನಿಸಲಾಯಿತು. ಪ್ರೇರಣ ಫಿಟ್ನೆಸ್ ಸೆಂಟರ್ ಅಧ್ಯಕ್ಷೆ ಪವಿತ್ರ, ಸ್ವಾತಿ ರೇಣುಕಪ್ಪ, ಟಿಎಪಿಸಿಎಂಎಸ್ ನಿರ್ದೇಶಕ ಸುಧೀರ್ ಮಾರವಳ್ಳಿ, ಚನ್ನವೀರಪ್ಪ, ಪಾಲಾಕ್ಷಪ್ಪ, ಪಾಪಯ್ಯ, ರೇಣುಕಪ್ಪ, ಶಿಕ್ಷಕ ಶಿವಕುಮಾರ್ ಉಪಸ್ಥಿತರಿದ್ದರು.

ಗ್ರಿಡ್ ಕಾಮಗಾರಿ ಸಿಬ್ಬಂದಿ ಮೇಲೆ ಹಲ್ಲೆ: ಬಂಧನಕ್ಕೆ ಆಗ್ರಹ

ತ್ಯಾಗರ್ತಿ: ಪಟ್ಟಣದಲ್ಲಿ ನಡೆಯುತ್ತಿರುವ 110 ಕೆವಿ ವಿದ್ಯುತ್ ಪ್ರಸರಣಾ ಘಟಕಕ್ಕೆ ಹೈಟೆನ್ಷನ್ ವಿದ್ಯುತ್ ಲೈನ್ ಕಾಮಗಾರಿಯ ಸರ್ವೇ ಕಾರ್ಯ ನೆಡೆಸುತ್ತಿದ್ದವರ ಮೇಲೆ ಕೊಪ್ಪ ಗ್ರಾಮದ ಕೆಲವು ಕಿಡಿಗೇಡಿಗಳು ಮಾರಕಾಸ್ತ್ರಗಳಿಂದ ಮಾರಣಾಂತಿಕ ಹಲ್ಲೆ ನಡೆಸಿರುವುದು ಅಕ್ಷಮ್ಯ ಅಪರಾಧ ಎಂದು ತಾಪಂ ಮಾಜಿ ಸದಸ್ಯ ಸೋಮಶೇಖರ್ ಲಾವಿಗೆರೆ ಹೇಳಿದರು.



ತ್ಯಾಗರ್ತಿಯ ಮೆಸ್ಕಾಂ ಕಛೇರಿ ಎದುರು ಭಾನುವಾರ ಪತ್ರಿಕಾ ಗೋಷ್ಠಿ ನಡೆಸಿ ಮಾತನಾಡಿದ ಅವರು, ಸರ್ವೇಯರ್ ಮಲ್ಲನಗೌಡ ಹಾಗೂ ತಂಡದವರು ಹೈಟೆನ್ಷನ್ ವೈಯರ್ ಅಳವಡಿಕೆ ಸಂಬಂಧ ಸರ್ವೇ ಕಾರ್ಯದಲ್ಲಿ ನಿರತರಾಗಿದ್ದ ಸಂದರ್ಭದಲ್ಲಿ ಸ್ಥಳಕ್ಕೆ ಬಂದ ಕೊಪ್ಪ ಗ್ರಾಮದ ಕೆಲವು ಕಿಡಿಗೇಡಿಗಳು ನಿಮಗೆ ಇಲ್ಲಿ ಕೆಲಸ ಮಾಡಲು ಹೇಳಿದವರು ಯಾರು ಎಂದು ಪ್ರಶ್ನಿಸಿ ಗಲಾಟೆ ಆರಂಭಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಕೂಡಲೇ ಕಿಡಿಗೇಡಿಗಳನ್ನು ಬಂಧಿಸದಿದ್ದರೆ ರೈತರೊಂದಿಗೆ ಸೇರಿ ಕಾನೂನನ್ನು ಕೈಗೆತ್ತಿಕೊಳ್ಳ ಬೇಕಾಗುತ್ತದೆ ಎಂದು ಎಚ್ಚರಿಸಿದರು.

ಘಟನೆಯ ಹಿನ್ನೆಲೆ: ಮಳ್ಳಾಕೊಪ್ಪ ಗ್ರಾಮದ ಸರ್ವೆ ನಂ. 71/3ರಲ್ಲಿ ಶಿವಕುಮಾರ್ ಎಂಬುವವರ ಜಾಗದಲ್ಲಿ ಶನಿವಾರ ಮಧ್ಯಾಹ್ನ 1:30ರ ಸುಮಾರಿಗೆ ಸರ್ವೇಯರ್ ಮಲ್ಲನಗೌಡ ಹಾಗೂ ತಂಡದವರು ಹೈ ಟೆನ್ಷನ್ ವೈಯರ್ ಅಳವಡಿಕೆ ಸಂಬಂಧ ಸರ್ವೇ ಕಾರ್ಯದಲ್ಲಿ ನಿರತರಾಗಿದ್ದರು. ಈ ಸಂದರ್ಭದಲ್ಲಿ ಸ್ಥಳಕ್ಕೆ ಬಂದ ಕೊಪ್ಪ ಗ್ರಾಮದ ಸಂಜು, ಸಂತೋಷ್, ರಾಘವೇಂದ್ರ, ಸಚಿನ್, ಸತೀಶ್, ಸುದೀಪ್ ಹಾಗೂ ಪರಮೇಶ್ ಗಲಾಟೆ ಆರಂಭಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಸರ್ವೇಯರ್ ಮಲ್ಲನಗೌಡ ಅವರ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಘಟನೆಯನ್ನು ತಡೆಯಲು ಹೋದ ದಾವಣಗೆರೆಯ ಬಸವಾಪುರ ಗ್ರಾಮದ ಪರಶುರಾಮ (40) ಎಂಬುವವರ ಮೇಲೆ ಆರೋಪಿಗಳು ಮುಗಿಬಿದ್ದಿದ್ದಾರೆ.

ಪರಶುರಾಮನನ್ನು ಅಟ್ಟಾಡಿಸಿಕೊಂಡು ಹೋದ ಆರೋಪಿಗಳು ಕುಮಾರಗೌಡ ಎಂಬುವವರ ಮನೆಯ ಬಳಿ ಅವರನ್ನು ಕೆಳಗೆ ಬೀಳಿಸಿ ತಲೆ ಹಾಗೂ ಎದೆಗೆ ಕಲ್ಲಿನಿಂದ ಜಜ್ಜಿ ಕೊಲೆ ಮಾಡಲು ಯತ್ನಿಸಿದ್ದಾರೆ. ಈ ವೇಳೆ ಕುಮಾರಗೌಡ ಎಂಬುವವರು ಸ್ಥಳಕ್ಕೆ ಬಂದಿದ್ದನ್ನು ಕಂಡು ಆರೋಪಿಗಳು ಅಲ್ಲಿಂದ ಪರಾರಿಯಾಗಿದ್ದಾರೆಂದು ಆನಂದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪಿ.ಎಸ್.ಐ ಪ್ರವೀಣ್ ಅವರ ತಂಡ ತನಿಖೆ ನಡೆಸುತ್ತಿದೆ.

ಮಾ.24ರಂದು ಶ್ರೀ ಭಾರತೀತೀರ್ಥ ಮಹಾ ಸ್ವಾಮೀಜಿಗಳ ವರ್ಧಂತಿ





ಶೃಂಗೇರಿ: ಶ್ರೀ ಶಾರದಾ ಪೀಠದ 36ನೇ ಜಗದ್ಗುರು ಶ್ರೀ ಭಾರತೀತೀರ್ಥ ಮಹಾ ಸ್ವಾಮೀಜಿಗಳ ವರ್ಧಂತಿ ಮಾ.24ರಂದು ಶ್ರೀಮಠದಲ್ಲಿ ಆಯೋಜಿಸಲಾಗಿದ್ದು, ಇದರ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಮಾ.19ರಿಂದ ಆರಂಭಗೊಂಡಿದೆ.

ಭಾನುವಾರ ಶ್ರೀಮಠದ ಜಗದ್ಗುರು ಶ್ರೀ ನೃಸಿಂಹ ಭಾರತೀ ಯಾಗ ಮಂಟಪದಲ್ಲಿ ಸಹಸ್ರ ನಾರೀಕೇಳ ಗಣ ಹೋಮ ನಡೆಯಿತು. ಮಧ್ಯಾಹ್ನ ಯಾಗದ ಪೂರ್ಣಾಹುತಿ ಕಾರ್ಯಕ್ರಮದಲ್ಲಿ ಉಭಯ ಜಗದ್ಗುರುಗಳಾದ ಶ್ರೀ ಭಾರತೀತೀರ್ಥ ಸ್ವಾಮೀಜಿ ಹಾಗೂ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಪಾಲ್ಗೊಂಡರು. ಸಹಸ್ರ ನಾರೀ ಕೇಳ ಗಣಹೋಮದ ಧಾರ್ಮಿಕ ಕಾರ್ಯಕ್ರಮವನ್ನು ಶ್ರೀಮಠದ ಪುರೋಹಿತರಾದ ಸೀತಾರಾಮ ಶರ್ಮ ಮತ್ತು ಶಿವಕುಮಾರ ಶರ್ಮ ನೇತೃತ್ವದ ಋತ್ವಿಜರ ತಂಡ ನೆರವೇರಿಸಿತು.

ಸಹಸ್ರ ನಾರೀಕೇಳ ಗಣ ಹೋಮದ ಅಂಗವಾಗಿ ಶನಿವಾರ ರಾತ್ರಿ ಶ್ರೀಮಠದಲ್ಲಿ 150 ಕ್ಕೂ ಹೆಚ್ಚು ಸ್ವಯಂ ಸೇವಕರು ಸಿದ್ಧತೆ ನಡೆಸಿದರು. ಅಷ್ಟದ್ರವ್ಯಕ್ಕೆ ಬೇಕಾಗುವ ಕಬ್ಬು, ಬೆಲ್ಲ, ಅರಳು, ಬಾಳೆಹಣ್ಣು, ಎಳ್ಳು, ತುಪ್ಪ, ಜೇನುತುಪ್ಪ, ಅವಲಕ್ಕಿಯನ್ನು ಒಟ್ಟುಗೂಡಿಸಿ ದ್ರವ್ಯ ಸಿದ್ಧ ಮಾಡಲಾಯಿತು. ತಡ ರಾತ್ರಿಯವರೆಗೂ ಅಷ್ಟ ದ್ರವ್ಯದ ಸಿದ್ಧತೆ ಕಾರ್ಯ ನಡೆಸಲಾಯಿತು.

ಸೋಮವಾರ ವರ್ಧಂತಿ ಅಂಗವಾಗಿ ಉಭಯ ಜಗದ್ಗುರುಗಳು ಈಶ್ವರಗಿರಿಗೆ ತೆರಳಿ ಶ್ರೀ ಮಲಹಾನಿಕರೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ.

ಬೀರೂರು ರಂಭಾಪುರಿ ಖಾಸಾಮಠದ ಶ್ರೀ ರುದ್ರಮುನಿ ಶಿವಾ ಚಾರ್ಯ ಮಹಾ ಸ್ವಾಮೀಜಿ

ಮನಸ್ಸನ್ನು ಜಾಗೃತಗೊಳಿಸುವ ಶಕ್ತಿ ದೇವಾಲಯಗಳಿಗಿದೆ

ಚಿಕ್ಕಮಗಳೂರು: ಮನುಷ್ಯನ ಭಾವನೆ, ಭಕ್ತಿ ಹಾಗೂ ಮನಸ್ಸನ್ನು ಜಾಗೃತಗೊಳಿಸುವ ಶಕ್ತಿ ದೇವಾಲಯಗಳಿಗಿವೆ ಎಂದು ಬೀರೂರು ರಂಭಾಪುರಿ ಖಾಸಾಮಠದ ಶ್ರೀ ರುದ್ರಮುನಿ ಶಿವಾ ಚಾರ್ಯ ಮಹಾ ಸ್ವಾಮೀಜಿ ಹೇಳಿದರು.



ಜಯನಗರ ಬಡಾವಣೆಯಲ್ಲಿ ಭಾನುವಾರ ಶ್ರೀ ಸಂಕಷ್ಟಹರ ಬಲಮುರಿ ಗಣಪತಿನ ದೇವಸ್ಥಾನದ 26ನೇ ವಾರ್ಷಿ ಕೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಮನುಷ್ಯನ ಒತ್ತಡಗಳನ್ನು ಸಡಿಲಿಸುವ ಜೊತೆಗೆ ನೆಮ್ಮದಿ ಬಾಳಿಗೆ ಭದ್ರ ಬುನಾದಿ ಕರುಣಿಸಲು ದೇಗುಲ ಪುಣ್ಯಸ್ಥಳ. ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಶ್ರೀ ಗಣಪತಿ ಪೂಜೆಯು ಸಂಭ್ರಮದಿಂದ ಆಚರಿಸುತ್ತಾರೆ. ಅಲ್ಲದೇ ಕೆಲವು ದೇಶಗಳು ತಮ್ಮ ನೋಟಿನ ಮುಖಪುಟದಲ್ಲೂ ಗಣಪತಿ ವಿಗ್ರಹದ ಚಿತ್ರವನ್ನು ಮುದ್ರಿಸುವ ಮೂಲಕ ಭಕ್ತಿ ಯನ್ನು ತೋರಿದ್ದು, ಆದರೆ ಭಾರತದಲ್ಲಿ ಈ ಕನಸು ಇಂದಿಗೂ ಅಪೂರ್ಣವಾಗಿದೆ ಎಂದರು.

ಪ್ರಸ್ತುತ ಹಿಂದೂ ಸಮಾಜ ಜಾತಿ ಎಂಬ ವಿಷ ವರ್ತುಲದಿಂದ ಹೊರಬಂದು, ಸನಾತನ ಧರ್ಮವನ್ನು ಪಾಲಿಸಬೇಕು. ಮಕ್ಕಳಿಗೆ ಬಾಲ್ಯದಿಂದಲೇ ಸನ್ನಡತೆ, ಭಾರತೀಯ ಉಡುಗೆ ಮತ್ತು ಇತಿಹಾಸದ ಸತ್ಯಾಂಶವನ್ನು ತಿಳಿಸಬೇಕು. ಕೇವಲ ಐಟಿ ಬಿಟಿ ಉದ್ಯೋಗಕ್ಕೆ ಸೀಮಿತಗೊಳಿಸದೇ, ರೈತ ಮತ್ತು ಸೈನಿಕರಾಗುವ ಆಸಕ್ತಿ ಬೆಳೆಸ ಬೇಕು ಎಂದು ಹೇಳಿದರು.

ಭಾರತ ವಿಶ್ವಗುರುವಾಗುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗುತ್ತಿದೆ. ಪಾಲಕರು ತಮ್ಮ ಮಕ್ಕಳನ್ನು ವಿದೇಶದಲ್ಲಿ ವಿದ್ಯಾಭ್ಯಾಸ ಹಾಗೂ ಕೆಲಸಕ್ಕೆ ಕಳುಹಿಸಿ, ದೇಶದ ಸಂಪತ್ತನ್ನು ವಿದೇಶಕ್ಕೆ ವ್ಯಯಿಸುತ್ತಿದ್ದೀರಿ. ಕೂಡಲೇ ಈ ನಿರ್ಧಾರದಿಂದ ಹೊರಬಂದು ಮಕ್ಕಳ ಉತ್ತಮ ಭವಿಷ್ಯಕ್ಕೆ ಸ್ವದೇಶದಲ್ಲೇ ಸಂಪತ್ತನ್ನು ವ್ಯಯಿಸಬೇಕು. ರಾಷ್ಟ್ರದ ಹಿತಚಿಂತನೆ, ಮಕ್ಕಳ ಸರ್ವಾಂಗೀಣ ಬೆಳವಣಿಗೆ ಜೊತೆಗೆ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು ಎಂದರು.

ದೇವಾಲಯ ಸಮಿತಿ ಅಧ್ಯಕ್ಷ ಎಂ.ಆರ್.ದೇವರಾಜ್ ಶೆಟ್ಟಿ ಮಾತನಾಡಿ 2000ರ ಇಸವಿಯಲ್ಲಿ ಪ್ರಾರಂಭಿಸಿದ ಶ್ರೀ ಬಲಮುರಿ ಗಣಪತಿ ದೇವಸ್ಥಾನ ವಿಶೇಷ ಪ್ರಖ್ಯಾತಿ ಪಡೆದುಕೊಂಡಿದೆ. ಹಿಂದಿನ ಅನೇಕ ಅಧ್ಯಕ್ಷರು ಹಾಗೂ ದಾನಿಗಳ ಕೊಡುಗೆ ಈ ದೇವಾಲಯಕ್ಕಿದ್ದು, ಇಷ್ಟಾರ್ಥಗಳನ್ನು ಸಿದ್ದಿಸುವ ಶಕ್ತಿ ದೇಗುಲ ಎಂಬ ಬಿರುದು ಪಡೆದುಕೊಂಡಿದೆ ಎಂದರು.

ಜಗತ್ತಿನಲ್ಲಿ ಅತಿಹೆಚ್ಚು ಭಕ್ತ ಸಮೂಹ ಇರುವುದು ಶ್ರೀ ಗಣಪತಿ ದೇವರಿಗೆ. ಈ ಪೂಜೆಯಲ್ಲಿ ಎಲ್ಲಾ ವರ್ಗದ ಜನರು ಮುಕ್ತವಾಗಿ ಪಾಲ್ಗೊಳ್ಳುತ್ತಾರೆ. ಇತರೆ ದೇವರುಗಳಲ್ಲಿ ತಪ್ಪಿಗೆ ಶಿಕ್ಷೆ ತಪ್ಪಿದ್ದಲ್ಲ, ಆದರೆ ಬಲ ಮುರಿ ಗಣಪತಿ ದೇವರು ತಪ್ಪಿಗೆ ಕ್ಷಮೆ ನೀಡುವ ಸಹನಾಗುಣವಿದೆ ಎಂದರು.

ದೇವಾಲಯ ಅಭಿವೃದ್ಧಿಗೆ ಈ ಬಡಾವಣೆಯ ಅನೇಕ ದಾನಿಗಳ ಸಹಕಾರದಿಂದ ಪ್ರತಿವರ್ಷವು ಅದ್ದೂರಿಯಾಗಿ ವಾರ್ಷಿಕೋತ್ಸವ ಆಚರಿಸುತ್ತಿದ್ದೇವೆ. ಮಕ್ಕಳಿಗೆ ದೇವಾಲಯ ಸಂಸ್ಕಾರ ಬೆಳೆಸಲು ಸತ್ಸಂಗ, ರಥೋತ್ಸವಗಳಿಗೆ ಕರೆತರಬೇಕು ಎಂದರು.

ಈ ಸಂದರ್ಭದಲ್ಲಿ ದೇವಾಲಯ ಸಮಿತಿ ಉಪಾಧ್ಯಕ್ಷರಾದ ಎಲ್.ಸಿ. ಶಿವಕುಮಾರ್, ಹೇಮರಾಜ್, ಬಲಿಂದ್ರಶೆಟ್ಟಿ, ಬಿ.ಎಲ್.ದೇವರಾಜ್, ಭೀಮೇಶಣ್ಣ, ಪ್ರಧಾನ ಕಾರ್ಯದರ್ಶಿ ಜಿ.ಬಿ.ಸುರೇಶ್, ಸದಸ್ಯರಾದ ಮಲ್ಲಿಕಾರ್ಜುನಯ್ಯ, ವಿನೋದದೊಡ್ಡೇಗೌಡ, ವಿದ್ಯಾದೇವರಾಜ್‌ಶೆಟ್ಟಿ, ಮೋಹನ್, ಹಿರೇಗೌಡ, ರಂಗಸ್ವಾಮಿ, ಶಿವಣ್ಣ, ಮಾದವ್, ಪುಟ್ಟೇಗೌಡ, ಬಸವರಾಜ್, ರುದ್ರಪ್ಪ ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

ಶಿವಮೊಗ್ಗ : ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ಅಲೆಮಾರಿ ಹಕ್ಕಿಪಿಕ್ಕಿ ಬುಡಕಟ್ಟು ಸಂರಕ್ಷಣಾ ಸಮಿತಿ ವತಿಯಿಂದ ಜಿಲ್ಲಾಧಿಕಾರಿ ಕಛೇರಿ ಆವರಣದಲ್ಲಿ ಇತ್ತೀಚೆಗೆ ಪ್ರತಿಭಟನೆ ನಡೆಸಲಾಯಿತು.

ಅರಣ್ಯದಂಚಿನ ಹಾಡಿಗಳಲ್ಲಿ ವಾಸ ಮಾಡುತ್ತಿರುವ 13 ಬುಡಕಟ್ಟು ಜನಾಂಗಗಳಿಗೆ ರಾಜ್ಯ ಸಿವಿಲ್ ಸೇವೆಯಲ್ಲಿ ವಿಶೇಷ ನೇಮಕಾತಿ ಕೈಗೊಳ್ಳುವುದಾಗಿ ಸದನದಲ್ಲಿ ಮುಖ್ಯಮಂತ್ರಿಗಳು ಹೇಳಿಕೆ ನೀಡಿದ್ದಾರೆ. ಈ ಪಟ್ಟಿಯಲ್ಲಿ ಅರಣ್ಯದಂಚಿನಲ್ಲಿ ವಾಸಿಸುತ್ತಾ ಅಪ್ಪಟ ಅರಣ್ಯವಾಸಿಗಳಾಗಿರುವ ಹಕ್ಕಿಪಿಕ್ಕಿ, ಪಾರ್ಧಿ, ಹರಣಿಶಿಕಾರಿ, ವಾಗಿರಿ, ಅಡವಿಚಿಂಚರು ಸಮುದಾಯಗಳನ್ನು ಕೈಬಿಡಲಾಗಿದೆ. ಕೂಡಲೇ ಪಟ್ಟಿಯಲ್ಲಿ ಈ ಸಮುದಾಯಗಳನ್ನು ಸೇರಿಸಬೇಕೆಂದು ಆಗ್ರಹಿಸಿದರು.

13 ಬುಡಕಟ್ಟು ಜನಾಂಗಗಳ ಪಟ್ಟಿಯಲ್ಲಿ ಇರುವ ಜೇನು ಕುರುಬ, ಈರುಳಿಗ, ಕೊರಗ, ಸೋಲಿಗ, ಯರವ, ಪಣಿಯನ್, ಹಸಲರು, ಗೌಡಲು, ಸಿದ್ದಿ, ಬೆಟ್ಟಕುರುಬ, ಕಾಡುಕುರುಬ, ಕುಡಿಯ, ಮಲೆಕುಡಿಯ ಜನಾಂಗಗಳಿಗೆ ಪ್ರಾತಿನಿಧ್ಯ ನೀಡುವ ಸಲುವಾಗಿ ವಿಶೇಷ ನೇರ ನೇಮಕಾತಿ ಕೈಗೊಳ್ಳುವುದಾಗಿ ಸದನದಲ್ಲಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ಉಳಿದ ಪ್ರಮುಖ ಐದು ಜಾತಿಗಳನ್ನು ಬಿಟ್ಟಿದ್ದಾರೆ. ಈ ಐದೂ ಸಮುದಾಯಗಳು ಮೂಲತಃ ಅರಣ್ಯವಾಸಿಗಳಾಗಿದ್ದಾರೆ ಎಂದು ಮಾನವ ಶಾಸ್ತ್ರಜ್ಞರು ಮತ್ತು ಕುಲು ಶಾಸ್ತ್ರೀಯ ಅಧ್ಯಯನಕಾರರು ಹಾಗೂ ಸಂಶೋಧಕರು ಈಗಾಗಲೇ ತಮ್ಮ ಸಂಶೋಧನೆಗಳಲ್ಲಿ ಮತ್ತು ಗ್ರಂಥಗಳಲ್ಲಿ ನಮೂದಿಸಿದ್ದಾರೆ ಎಂದು ತಿಳಿಸಿದರು.

ಸಮಿತಿ ರಾಜ್ಯಾಧ್ಯಕ್ಷರಾದ ಜಗ್ಗು, ಪ್ರಮುಖರಾದ ರಾಮಕೃಷ್ಣ, ರಾಮ್‌ಬಾಬು, ದಿವಾಕರ್, ಗುರುವಯ್ಯ, ಸುರೇಂದ್ರ, ನೀಮಾ ಶ್ರೀನಿವಾಸ್, ಮೀನು, ದಿಲೀಪ್, ಪಿ.ವೆಂಕಟೇಶ್ ಮೊದಲಾದವರಿದ್ದರು.

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.